೧೮) ಉಳ್ಳಾಲ ಮತ್ತು ಸೋಮೇಶ್ವರಗಳಲ್ಲಿ ಪ್ರವಾಸಿಗಳ ತಾಣ ನಿರ್ಮಿಸಲು ಒತ್ತಾಯ,

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡದ ಉಳ್ಳಾಲ ಸಮುದ್ರ ಕಿನಾರೆಯಲ್ಲಿದೆ. ಪ್ರಕೃತಿ ಸೌಂದರ್ಯ ತವರೂರು ಉಳ್ಳಾಲ. ಒಂದು ಬದಿಯಿಂದ ಕಡಲಿನ ತೆರೆಗಳು ಸುಳಿ ಸುಳಿಯಾಗಿ ದಂಡೆಗೆ ಬಡಿಯುವ ದೃಶ್ಯ. ಮತ್ತೊಂದು ಬದಿಯಲ್ಲಿ ತೆಂಗಿನ ಮರಗಳ ಹಸಿರು ಸುಂದರ ರಮಣೀಯ ದೃಶ್ಯ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಪೋರ್ಚುಗೀಸರ ವಿರುದ್ಧ ಹೋರಾಡಿದ ರಾಣಿ ಅಬ್ಬಕ ವಾಸವಾಗಿದ್ದ ತಾಣ ಇದು. ಅಲ್ಲದೆ ಭಾರತದ ಪ್ರಖ್ಯಾತವಾದ ಐದು ದರ್ಗಗಳಲ್ಲಿ ಒಂದಾದ ಸಯ್ಯದ್ ಮದನಿ ಶರೀಫ್ ದರ್ಗಾ ಉಳ್ಳಾಲದಲ್ಲಿದೆ. ಹತ್ತಿರದಲ್ಲೇ ಸೋಮೇಶ್ವರ ಪ್ರಖ್ಯಾತ ದೇವಸ್ಥಾನ ಇದೆ. ಇಲ್ಲಿಗೆ ಪ್ರವಾಸಿಗಳು ಸದಾ ಬರುತ್ತಿದ್ದಾರೆ. ಆದರೆ ಇಲ್ಲೊಂದು ಪ್ರವಾಸೋದ್ಯಮ ತಾಣ ಇರುವುದಿಲ್ಲ. ಹಿಂದೊಮ್ಮೆ ಉಳ್ಳಾಲದಲ್ಲಿ ಪ್ರವಾಸೋದ್ಯಮ ನೆಲೆಯನ್ನು ಸ್ಥಾಪಿಸಲು ಮಾತೀಕತೆಯಾಗಿತ್ತು. ಆದರೆ ಆದು ಇನ್ನೂ ಯಾವುದೇ ರೂಪ ತಾಳಿಲ್ಲ.

ಅದಕಾರಣ, ಇಂತಹ ಸುಂದರ ಪ್ರವಾಸಿಗಳ ತಾಣವಾದ ಉಳ್ಳಾಲದಲ್ಲಿ ಒಂದು ಪ್ರವಾಸೋದ್ಯಮ ನೆಲೆಯನ್ನು ಸ್ಥಾಪಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವಂಥದ್ದು, ಅತ್ಯಂತ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ಪ್ರವಾಸೋದ್ಯಮ ಸಚಿವರ ಗಮನವನ್ನು ಸೆಳೆಯುತ್ತೇನೆ,

ಶ್ರಿ ಎ. ಲಕ್ಷ್ಮೀಸಾಗರ್ (ರೇಷ್ಮೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು),—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಭಾರತ ಸರಕಾರದ ಪ್ರವಾಸೋದ್ಯಮ ಇಲಾಖೆಯ ಮಹಾ ನಿರ್ದೇಶಕರು ೮೭, ಫೆಬ್ರವರಿ ಮಾಹೆಯಲ್ಲಿ ಭೇಟಿ ನೀಡಿ ಕಾರವಾರ ಮುರುಗೇಶ್ವರ, ಬಿಳಿಕೆರೆ; ಮರವಂತೆ ಮುಂತಾದ ಕಡಲು ತೀರ ತಾಣಗಳನ್ನು ಅಭಿವೃದ್ಧಿ ಪಡಿಸಲು ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ರಾಜ್ಯ ಸರಕಾರ ಪ್ರವಾಸೋದ್ಯಮ ಇಲಾಖೆ ಉಲ್ಲಾಳದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಉಪಹಾರ ಗೃಹ ಹಾಗೂ ವಸತಿ ಗೃಹವನ್ನು ನಿರ್ಮಿಸುವ ಸಲುವಾಗಿ ಜಮೀನನ್ನು ಪಡೆಯಲು ಕ್ರಮ ತೆಗೆದುಕೊಳ್ಳಲಾಗಿದೆ.

ಅಧ್ಯಕ್ಷರು.—ಇವತ್ತು ನಿಯಮ ೩೩೪ರ ಪ್ರಕಾರ ೧೫ ತೆಗೆದುಕೊಂಡಿದ್ದು ೧೪ಕ್ಕೆ ಉತ್ತರ ಕೊಟ್ಟಿದ್ದೇವೆ ಇನ್ನು ೫ಕ್ಕೆ ಉತ್ತರ ಕೊಡಬೇಕು. ಮಾನ್ಯ ಸದಸ್ಯರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

೧–೩೦ ಪಿ. ಎಂ.

ವಿತ್ತೀಯ ಕಾರ್ಯಕಲಾಪಗಳು

೧೯೮೮–೮೯ ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ (ಕೈಗಾರಿಕೆ. ವಿದ್ಯುತ್ ಯೋಜನೆ ಮತ್ತು ಸಣ್ಣ ಕೈಗಾರಿಕೆ)

† ಶ್ರೀ ಎಂ. ವೀರಪ್ಪ ಮೊಯಿಲಿ(ಕಾರ್ಕಳ) —ಮಾನ್ಯ ಅಧ್ಯಕ್ಷರೇ, ಇವತ್ತು ವಿದ್ಯುತ್ ಖಾತೆ, ಕೈಗಾರಿಕೆ ಇತ್ಯಾದಿ ಪ್ರಾಮುಖ್ಯವಾದಂತಹ ಬೇಡಿಕೆಗಳ ಮೇಲೆ ಚರ್ಚೆ ಮಾಡಲು ಬಹುಶಃ ಒಂದೇ ದಿವಸ ಇಟ್ಟಿದ್ದೀರಿ ಎಂದು ನನ್ನ ಭಾವನೆ. ಇದು ಬಹಳ ಬೃಹತ್ತಾದಂತಹ ವಿಚಾರ. ಆದರೂ ಕೂಡ ನಾನು ಆದಷ್ಟೂ ಸಂಕ್ಷಿಪ್ತವಾಗಿ ಈ ಎರಡೂ ಪ್ರಾಮುಖ್ಯವಾದಂತಹ ಬೇಡಿಕೆಗಳ ಬಗ್ಗೆ ನನ್ನ ಕೆಲವು ವಿಚಾರಗಳನ್ನು ಇಡಲಿಕ್ಕೆ ಇಚ್ಛೆಪಡುತ್ತೇನೆ. ಪ್ರಥಮವಾಗಿ ಕೈಗಾರಿಕೆಗಳ ಬೆಳವಣಿಗೆಗೆ ಪ್ರಾಮುಖ್ಯವಾದಂತಹ ವಿದ್ಯುತ್ ಬಗ್ಗೆ ನಮ್ಮ ಗಮನ ಹರಿಸಬೇಕಾಗಿದೆ. ಒಂದು ವಿಶೇಷವೇನೆಂದು ಹೇಳಿದರೆ ವಿದ್ಯುತ್ ಉತ್ಪಾದನೆ ಒಂದು ರೀತಿಯಲ್ಲಿ ಸ್ಥಗಿತವಾಗಿದೆ ಅಥವಾ ಕಡಿಮೆಯಾಗಿದೆಯೆಂದು ಹೇಳಿದರೆ ಇದು ಖಂಡಿತವಾಗಿ ಒಪ್ಪತಕ್ಕಂತಹ ವಿಚಾರವೆಂದು ನನ್ನ ಭಾವನೆ. ಆದರೆ ಈ ಸರಕಾರದವರು ಒಂದನ್ನು ಒಪ್ಪುವುದಿಲ್ಲ ಅದೇನೆಂದರೆ ಅವರು ಬಂದು ಐದು ವರ್ಷಗಳಾದರೂ ಕೂಡ ವಿದ್ಯುತ್ ಕ್ಷೇತ್ರ

ದಲ್ಲಿ ಇದನ್ನು ಹೆಚ್ಚಿಸಲು ಇದರ ಬಗ್ಗೆ ಸರಿಯಾಗಿ ಕಾರ್ಯ ನಿರ್ವಹಿಸಲಿಕ್ಕೆ ರಾಜ್ಯ ಸರಕಾರದ ಒಂದು ಪರಿಶ್ರಮದ ಕೊಡುಗೆ ಏನು ಎಂದು ಕೇಳಿದರೆ ಬಹುಶಃ ಇವತ್ತಿಗೂ ಕೂಡ ಉತ್ತರವಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಬಹುಶಃ ನಮ್ಮ ಸನ್ಮಾನ್ಯ ಪಟೇಲ್‌ರವರು ಆಗಾಗ್ಗೆ ಉತ್ತರ ಕೊಡುವ ಧಾಟಿ ಒಂದೇ ರೀತಿ ಇದೆ. ಬಹಳ ಹಿಂದಿನಿಂದಲೂ ಅನುಚಾನವಾಗಿ ನಡೆದುಕೊಂಡು ಬಂದಿದ್ದು, ನಮಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ರೀತಿಯಲ್ಲಿ ಕೈಯನ್ನು ಎತ್ತುತ್ತಾರೆ. ಇದು ಅನುಚಾನವಾಗಿ ನಡೆದುಕೊಂಡು ಬಂದಿದೆ, ? ಆದರೆ ತಾವು ಏನು ಮಾಡಿದ್ದೀರಿ, What is your Contribution ? ತಾವು ಬಹಳ ಒಳ್ಳೆಯ ಹೇಳಿಕೆಯನ್ನು ಕೊಡುತ್ತೀರಿ. ಆದರೆ ಇತ್ತೀಚೆಗೆ ಒಂದು ರೀತಿ ಪ್ರಾಮಾಣಿಕವೋ ಅಥವಾ ತಮ್ಮ ಮಟ್ಟದಲ್ಲಿ ಈ ಕಾರ್ಯವನ್ನು ನಿರ್ವಹಿಸಲಿಕ್ಕೆ ನಾವು ಅಸಫಲ ಆಗಿದ್ದೇವೆ ಆ ಅಸಫಲತೆಯನ್ನು ಮುಚ್ಚಿಡುವುದಕ್ಕೆ ಈ ಹೇಳಿಕೆಯನ್ನು ಕೊಟ್ಟಿದ್ದೀರೋ ನನಗಂತೂ ಅರ್ಥವಾಗುವುದಿಲ್ಲ. ಯಾಕೆಂದರೆ ವಿದ್ಯುತ್ತಿನ ರಾಜ್ಯ ಸಚಿವರಾದ ಮಾನ್ಯ ಲಕ್ಷ್ಮೀ ನರಸಿಂಹಯ್ಯನವರು ಬಹಳ ತೀವ್ರವಾಗಿ ಕೆ. ಇ. ಬಿ ಮೇಲೆ ಟೀಕೆ ಮಾಡುತ್ತಿದ್ದಾರೆ. ಈ ಇಲಾಖೆಯಲ್ಲಿ ಲಂಚಕೋರರು ಇದ್ದಾರೆ, ಬಹಳ ಅದಕ್ಷರು ಇದ್ದಾರೆ, ಮಂಡಲಿ ಕಾರ್ಯ ನಿರ್ವಹಣೆಯನ್ನು ಮಾಡುವುದಿಲ್ಲ ಎಂದು That impression has come in the news paper ಅದಕ್ಕೆ ತಾವು ಯಾವ ರೀತಿ ಸ್ಪಷ್ಟೀಕರಣ ಕೊಡುತ್ತೀರೋ ಅದು ತಮಗೆ ಬಿಟ್ಟಿದ್ದು. ಆದರೆ ತಾವು ನಿರ್ವಹಿಸತಕ್ಕ ಇಲಾಖೆಯ ಮೇಲೆ ಒಬ್ಬ ಮಂತ್ರಿಗಳು ಇಲಾಖೆ ಸಂಪೂರ್ಣವಾಗಿ ಅಡಕವಾಗಿದೆ, ಬಹಳ ಕರಪ್ಷನ್ ಇದೆ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಇದು ಎಲ್ಲರೂ ಅಪ್ರಾಮಾಣಿಕರು ಅಥವಾ ಇಡೀ ಇಲಾಖೆಯೇ ಅಪ್ರಾಮಾಣಿಕವಾಗಿದೆ, ಇದರಲ್ಲಿ ಭ್ರಷ್ಟಾಚಾರ ತುಂಬಿದೆ ಎಂದು ಹೇಳುವುದನ್ನು ನಾನು ಒಪ್ಪಲಿಕ್ಕೆ ತಯಾರಿಲ್ಲ. ಯಾಕೆಂದರೆ ಆ ಇಲಾಖೆಯಲ್ಲಿ ಪ್ರಾಮಾಣಿಕರಾದ ವ್ಯಕ್ತಿಗಳು ಅನೇಕ ಜನ ಇದ್ದಾರೆ. ಅನೇಕ ದಕ್ಷ ಅಧಿಕಾರಿಗಳೂ ಇದ್ದಾರೆ. ರಾಜ್ಯದಲ್ಲಿ ಉತ್ತಮವಾದಂತಹ ವಿದ್ಯುತ್‌ನ ಒಂದು ನಿರ್ವಹಣೆಯನ್ನು ಮತ್ತು ವಿದ್ಯುತ್ ಉತ್ಪಾದನೆಯನ್ನು ಇಡೀ ರಾಷ್ಟ್ರಕ್ಕೆ ಮಾದರಿಯಾಗಿ ತೋರಿಸಿ ಕೊಟ್ಟಂತಹವರು ಕೂಡ ನಮ್ಮ ಕರ್ನಾಟಕ ರಾಜ್ಯದ ಪರಂಪರೆಯಲ್ಲಿ ಹಿಂದೆಯೂ ಇದ್ದರು. ಇವೊತ್ತಿಗೂ ಇದ್ದಾರೆ. ತಾವು ಒಂದು ರೀತಿ ಡಿಮಾರಲೈಸಿಂಗ್ ಹೇಳಿಕೆ ಕೊಟ್ಟಿದ್ದೀರಿ ಅಪೊಸಿಷನ್‌ನಲ್ಲಿ ನಾವು ಇದ್ದರೂ ಕೂಡ ಇದನ್ನು ರಾಜಕೀಯವಾಗಿ ಲಾಭ ತೆಗೆದುಕೊಂಡು ಅದನ್ನು ಸಮರ್ಥಿಸಲಿಕ್ಕೆ ನಾನು ಇಚ್ಛೆಪಡುವುದಿಲ್ಲ. ಯಾಕೆಂದರೆ ಇದು ಸರ್ವಥಾ ಸಲ್ಲದು ಕೆಲವು ಸಾರಿ ಒಂದು ಕೆಲಸ ಬಹು ಸುಲಭ ನಮ್ಮ ಆಡಳಿತದಲ್ಲಿ ಇರುವವರು, ಅಥವಾ ವಿರೋಧ ಪಕ್ಷದಲ್ಲಿ ಇರುವವರಿಗೆ ಬಹಳ ಸುಲಭವಾಗಿ ತಮ್ಮ ಜವಾಬ್ದಾರಿಯನ್ನು ಅಥವಾ ತಮ್ಮ ಆಡಳಿತದಲ್ಲಿನ ಜವಾಬ್ದಾರಿಯನ್ನು ಅಧಿಕಾರಿಗಳ ಮೇಲೆ ಹೊರೆಯನ್ನು ಹಾಕತಕ್ಕಂಥದ್ದು, ನಾವು ಟೀಕೆಗೆ ಟೀಕೆಯನ್ನು ಮಾಡತಕ್ಕದ್ದು ಇದು ಸರ್ವೇ ಸಾಮಾನ್ಯವಾಗಿದೆ. ಆದರೆ ಇದರಿಂದ ಆಡಳಿತ ಎಷ್ಟರ ಮಟ್ಟಿಗೆ ಚುರುಕು ಆಗಲಿಕ್ಕೆ ಸಾಧ್ಯ ಇದೆ. ಆಡಳಿತದಲ್ಲಿ ದೋಷ ಇದೆ, ಅದನ್ನು ಗುರುತಿಸಿ ಅದನ್ನು ಪರಿಹಾರ ಮಾಡತಕ್ಕಂಥ ಆ ದೃಷ್ಟಿಯಲ್ಲಿ ಮಾತ್ರ ಏನಾದರೂ ಕಾರ್ಯಕ್ರಮ ಕೈಕೊಂಡಿದ್ದರೆ, ಸರ್ಕಾರ ತಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ಉಪಯೋಗ ಮಾಡಿಕೊಂಡು ಅದನ್ನು ಪರಿಹಾರ ಮಾಡಲಿಕ್ಕೆ ಏನಾದರೂ ಪ್ರಯತ್ನ ಮಾಡಿದ್ದರೆ ಆಗ ನಾವು ಶಹಭಾಸ್ ಹೇಳಬಹುದೇ ಹೊರತು ತಾವು ಸಾರಾಸಗಟಾಗಿ ಇಂತಹ ರಿಮಾರ್ಕ್ಸ್ ಅನ್ನು ಪೇಪರಿನಲ್ಲಿ, ಹೇಳಿಕೆಯನ್ನು ಕೊಡತಕ್ಕದ್ದು ಸರಿಯಲ್ಲ. ಯಾಕೆಂದರೆ ಈ ರಾಜ್ಯದ ಒಂದು ಆಡಳಿತದ ಶಿಥಿಲತೆ ನಮಗೆ ಬೇಕಾಗಿಲ್ಲ, ಆಡಳಿತದ ಸುಭದ್ರತೆ ನಮಗೆ ಬೇಕು, ಅದು ಕೆ. ಇ. ಬಿ, ಇರಬಹುದು ಅಥವಾ ಕರ್ನಾಟಕ ಪವರ್ ಕಾರ್ಪೊರೇಷನ್ ಇರಬಹುದು, ನಮ್ಮ ಇಡೀ ಒಂದು ರಾಜ್ಯದ ಉಳಿವು ಮತ್ತು ಅಳಿವು ಎರಡೂ ಸಂಸ್ಥೆಗಳ ಮೇಲೆ ಇದೆ. ಕೈಗಾರಿಕೆ ಮಾಡಬೇಕು. ಕೃಷಿ ಮಾಡಬೇಕು ಅಥವಾ ಬೇರೆ ಯಾವುದೇ ವಿಷಯ ಇರಬಹುದು ರಾಜ್ಯವನ್ನು ಕಟ್ಟಲಿಕ್ಕೆ ಅಥವಾ ಬೆಳೆಸಲಿಕ್ಕೆ ಇವು ಹೊಂದಿಕೊಂಡು ಇರುತ್ತದೆ. ಇವೆರಡನ್ನೂ ನಾವು ಸರಿಯಾಗಿ ನಿರ್ವಹಣೆ ಮಾಡದೇ ಇದ್ದರೆ ಬಹುಶಃ ಇಡೀ ರಾಷ್ಟ್ರದ ಬೆಳವಣಿಗೆಯ ಸಂಪೂರ್ಣ ತಳಹದಿಯನ್ನು ಪಂಚಾಂಗವನ್ನು ಶಿಥಿಲಗೊಳಿಸುವಂತಹ ಕೆಲಸವನ್ನು ನಾವು ಮಾಡಿದ ಹಾಗೆ ಆಗುತ್ತದೆ. ನಿಜವಾಗಿ ತಮ್ಮ ಹೇಳಿಕೆಯನ್ನು ನಂಬುವುದು ಇದ್ದರೆ. If you really believe in your statement that there is corruption and inefficiency, what action you have taken ? ಯಾಕೆಂದರೆ ತಾವು ಏನೂ ಕಾರ್ಯಕ್ರಮವನ್ನು ಇದರ ಬಗ್ಗೆ ತೆಗೆದುಕೊಂಡಿಲ್ಲ. ಎಷ್ಟು ಜನರನ್ನು

ಸಸ್ಪೆಂಡ್ ಮಾಡಿದ್ದೀರಿ. ಸಸ್ಪೆಂಡ್ ಮಾಡಿದ ಮೇಲೆ ಅಥವಾ ಅದನ್ನು ಸುಧಾರಿಸಲು ಆಗದೇ ಇರತಕ್ಕ ಪರಿಸ್ಥಿತಿಯಲ್ಲಿ, ಅಂತಹ ಜಂಜಾಟದಲ್ಲಿ ನಮ್ಮ ಕೆ. ಇ. ಬಿ, ಅಥವಾ ಕರ್ನಾಟಕ ಪವರ್ ಕಾರ್ಪೊರೇಷನ್ ಇದೆ ಎಂಬ ಭಾವನೆಯಲ್ಲಿ ತಾವು ಇದ್ದೀರಾ ಇದನ್ನು ಇವೊತ್ತು ತಾವು ಹೇಳಬೇಕಾಗಿದೆ. ಈ ವಿಚಾರದಲ್ಲಿ ನಾವು ಸಾಮಾನ್ಯವಾದಂತಹ ಅಂಕಿ ಅಂಶಗಳನ್ನು ಆಗಾಗ್ಗೆ ನೋಡಬಹುದು. ವಿಧಾನ ಪರಿಷತ್ತಿನಲ್ಲಿ ಕೂಡ ನಿನ್ನೆ ಕೆ. ಇ. ಬಿ. ಯ ವಾರ್ಷಿಕ ವರದಿಯ ಮೇಲೆ ಚರ್ಚೆ ನಡೆದಿದೆ. ಇಲ್ಲಿ ಕೂಡ ಅನೇಕ ಪ್ರಶ್ನೆಗಳು ಬಂದಿದೆ. ಅದನ್ನು ನಾನು ಚರ್ವಿತ ಚರ್ವಣ ಮಾಡಲಿಕ್ಕೆ ಇಚ್ಛೆಪಡುವುದಿಲ್ಲ. ಆದರೆ ಕೆಲವು ಪ್ರಾಮುಖ್ಯವಾದ ವಿಚಾರಗಳು ಯಾವುದನ್ನು ಸರ್ಕಾರ ಸರಿಪಡಿಸಲಿಕ್ಕೆ ಸಾಧ್ಯ ಇದೆ ಎಲ್ಲಿ ತಾವು ಎಡವಿದ್ದೀರಿ ಎನ್ನುವ ಕೆಲವು ವಿಚಾರಗಳನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಬೇಸಿಕ್ ಆಗಿ ತಮಗೆ ಗೊತ್ತಿದೆ. ಅದು ಕೇಂದ್ರ ಸರ್ಕಾರ ಇರಬಹುದು ಅಥವಾ ಏಳನೇ ಪಂಚವಾರ್ಷಿಕ ಯೋಜನೆ ಇರಬಹುದು, ರಾಷ್ಟ್ರೀಯ ಮಟ್ಟದ ಚಿಂತನೆ ಏನು ಎಂದರೆ ೩೦ ಪರ್ಸೆಂಟ್ in the plan outlay is allocated to the power sector.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ವಿದ್ಯುತ್‌ಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. This is the basic infrastructure to be created. ಇಲ್ಲಿ ತಾವು ಏನು ಮಾಡಿದ್ದೀರಿ ? Not even 20% ಇದರ ಬಗ್ಗೆ ಈಗ ರಾಮಚಂದ್ರ ಕಮಿಟಿಯವರು ಹೇಳಿದ್ದಾರೆ. ೨೩-೨೫ ಪರ್ಸೆಂಟ್ ಹಾಕಬೇಕು ಎಂದು ಹೇಳಿ, ನಾನು ಹೇಳುವುದು ಇದ್ದರೆ ಇಡೀ ರಾಷ್ಟ್ರಮಟ್ಟದಲ್ಲಿ ವಿದ್ಯುತ್ ಕ್ಷೇತ್ರದಲ್ಲಿ ಒಂದು ಕನಿಷ್ಟವಾದಂಥ ಸಂಕಷ್ಟವಾದಂಥ ಪರಿಸ್ಥಿತಿಯಲ್ಲಿ ಇರುವುದರಿಂದ I would rather put it at 5%minimum, ಒಂದು ರಾಷ್ಟ್ರಕ್ಕೆ ಬೇಕಾದ ವಿದ್ಯುತ್ ವಿಚಾರದಲ್ಲಿ ರಾಷ್ಟ್ರೀಯ ಮಟ್ಟದ ಒಂದು ಚಿಂತನೆ ಏನು ಇದೆ, ಇದಕ್ಕಿಂತ ಐದು ಪರ್ಸೆಂಟ್ ಜಾಸ್ತಿ ತಾವು ಒದಗಿಸದೇ ಇದ್ದರೆ ಬಿಗಡಾಯಿಸತಕ್ಕಂಥ ಪರಿಸ್ಥಿತಿಯನ್ನು ಸುಧಾರಿಸಿಕೊಂಡು ಮುಂದೆ ಹೋಗಲಿಕ್ಕೆ ಸಾಧ್ಯ ಇಲ್ಲ ಏಕೆಂದರೆ rest of the matters are all details. ನೀವು ಇದಕ್ಕೆ ಬೇಕಾದಂಥ ಆದ್ಯತೆ ಇದಕ್ಕೆ ಬೇಕಾದಂಥ ಶಕ್ತಿ, ಕೊಡದೇ ಇದ್ದರೆ you cannot expect any one to deliver the goods. That is one aspect of it. ಇದು ನಡೆದಿಲ್ಲ ಇವತ್ತು ಕೇಂದ್ರ ಸರ್ಕಾರ ಕೆಲವು ಮಿಡ್ ಟರ್ಮ್ ಅಪ್ರೈಸಲ್ ಕೂಡಾ ಮಾಡಿದ್ದಾರೆ. ಮಿಡ್‌ಟರ್ಮ್ ಅಪ್ರೈಸಲ್ ಮಾಡುವಾಗ ಕೂಡಾ ಅವರು ಏನು ಹೇಳಿದ್ದಾರೆ ಎಂದರೆ ರಾಷ್ಟ್ರದ ಗುರಿ ಪ್ರತಿಯೊಂದು ಕ್ಷೇತ್ರವನ್ನು ನೋಡಬೇಕಾಗಿದೆ ಯೆಂದು. ಕೇಂದ್ರ ಸರ್ಕಾರದ ಕಡೆ ತಾವು ಯಾವಾಗಲೂ ಕೂಡ ಬೆಟ್ಟು ತೋರಿಸುತ್ತೀರಿ. ಸನ್ಮಾನ್ಯ ಜೆ. ಹೆಚ್. ಪಟೇಲರು ತಮಾಷೆಗಾಗಿ ಹೇಳುತ್ತಾರೆ. ಕೆಲವು ಸಾರಿ ಗಂಭೀರವಾಗಿ ಹೇಳುತ್ತಾರೆ. ತಾವು ಕೂಡ ನೋಡಬಹುದು, ಯಾವುದೇ ಕ್ಷೇತ್ರದಲ್ಲಾಗಲೀ ಪ್ರಾಮುಖ್ಯತೆಯನ್ನು ಆದ್ಯತೆಯನ್ನು ಕೊಡುತ್ತಲೇ ಬಂದಿದ್ದಾರೆ. ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು

೫೧ ಪರ್ಸೆಂಟ್ ಗುರಿಯನ್ನು ಅವರು ಸಾಧಿಸಿದ್ದಾರೆ. ಈ ಸಾರಿ ಅವರು ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ ಎಂದರೆ even it is spoken out in the mid-term appraisal of the th five year plan. This time ಅವರು ಏನು ಹೇಳಿದ್ದಾರೆಂದರೆ ಅವರು ೭೨ ಪರ್ಸೆಂಟ್ ಟಾರ್ಗೆಟ್ ಇಟ್ಟಿದ್ದಾರೆ, ನಾವು ಹೆಚ್ಚಿಗೆ ಮಾಡುತ್ತೇವೆ ಎಂದು ಹೇಳುತ್ತಾರೆ. They are going to achieve 100 percent. ಇದರ ಬಗ್ಗೆ ಅಷ್ಟು ಆದ್ಯತೆಯನ್ನು ಕೊಟ್ಟಿದ್ದಾರೆಯೇ? ಯಾವ ರೀತಿಯಲ್ಲಿ ದೇಶವನ್ನು ಕಟ್ಟಬೇಕು ಎನ್ನುವ ಒಂದು ಚಿಂತನೆ ರಾಷ್ಟ್ರೀಯ ಮಟ್ಟದಲ್ಲಿ ಇರುವಾಗ, ತಾವು ಇಲ್ಲಿ ಏನು ಹೇಳುತ್ತೀರಿ, ಈ ಕೇಂದ್ರ ಸರ್ಕಾರ ಏನಾದರೂ ಕೃಷಿ ಕ್ಷೇತ್ರದಲ್ಲಿ ಅಥವಾ ಬೇರೆ ಯಾವುದೇ ಕ್ಷೇತ್ರದಲ್ಲಿ ಯಾವುದಾದರೂ ಪ್ರಕಟಣೆಯನ್ನು ಮಾಡಿದ ಕೂಡಲೇ ನಾವು ಈಗಾಗಲೇ ಮಾಡಿಬಿಟ್ಟಿದ್ದೇವೆ, ನಾವು ಮಾಡಿದ್ದನ್ನು ಕೇಂದ್ರ ಸರ್ಕಾರ ಅನುಸರಿಸುತ್ತಿದೆ ಎಂದು ಯಾವಾಗಲೂ ಘೋಷಣೆ ಮಾಡುತ್ತಿದ್ದಿರಿ ಇದು ಒಂದು ರೀತಿಯಲ್ಲಿ ನಿಮಗೆ ವಾಡಿಕೆಯಾಗಿ ಬಿಟ್ಟಿದೆ. ಒಂದು ರೀತಿ ಉಪಮಾನ ಉಪಮೇಯವಾಗಿದೆ. ಯಾವ ಒಂದು ಕ್ಷೇತ್ರದಲ್ಲಿ ಐತಿಹಾಸಿಕ ಪೂರ್ಣವಾಗಿ ಈ ಕರ್ನಾಟಕ ಇಡೀ ರಾಷ್ಟ್ರಕ್ಕೆ ಲೀಡರ್‌ಷಿಪನ್ನು ಕೊಟ್ಟಿದೆ, ನಾಯಕತ್ವವನ್ನು ಕೊಟ್ಟಿದೆ ವಿದ್ಯುತ್ ಕ್ಷೇತ್ರದಲ್ಲಿ ಇದರಲ್ಲಿ ಇವತ್ತು ಎಷ್ಟು ಹಿಂದೆ ಹೋಗುವುದು ಇದ್ದರೆ ಅದಕ್ಕೆ ತಾವು ಏತಕ್ಕೆ ಪ್ರಾಮುಖ್ಯತೆಯನ್ನು ಕೊಡಬಾರದು? ಏತಕ್ಕೆ ಕೊಟ್ಟಿಲ್ಲ. ಇದನ್ನು ಇವತ್ತು ತಾವು ನೋಡಬೇಕು. ಸನ್ಮಾನ್ಯ ಮುಖ್ಯ

ಮಂತ್ರಿಯವರು ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದಾರೆ. ಆದರ ಕಡೆ ಒಂದು ಗಳಿಗೆ ಗಮನವನ್ನು ಹರಿಸುತ್ತೇನೆ. ಏಕೆಂದರೆ ಬಹಳ ಪಮುಖವಾಗಿರತಕ್ಕಂಥದ್ದು. ಇದನ್ನು ತಮ್ಮ ವಿದ್ಯುತ್ ಇಲಾಖೆ ಯಿಂದ ಕೊಟ್ಟಿರುವ ಮಾಹಿತಿಯನ್ನು ಜೆ.ಹೆಚ್. ಪಟೇಲರು ಕೊಟ್ಟರೋ ಯಾರು ಕೊಟ್ಟರೋ ನನಗಂತೂ ಗೊತ್ತಿಲ್ಲ. ಅದು ಪೇಜ್ ೧೪ ರಲ್ಲಿದೆ. ಇದ, ಬಜೆಟ್ ಸ್ಪೀಚ್‌ನಲ್ಲಿದೆ. ಈ ಬಗ್ಗೆ ಸಾರ್ವಜನಿಕರನ್ನು ತಪ್ಪುದಾರಿಗೆ ಕೊಂಡೊಯ್ಯಬಾರದು. ಸರಿಯಾದ ಮಾರ್ಗದರ್ಶನವನ್ನು ತಾವು ಕೊಡಬೇಕಾಗಿದೆ ರಾಯಚೂರ್ ಥರ್ಮಲ್ ಪವರ್ ಸ್ಟೇಷನ್ ನಾಲ್ಕನೇ ಸ್ಟೇಜ್ ೨೧೦ ಮೆಗವ್ಯಾಟ್ ಪಸ್ಟ್ ಐಟಂ ಎಂದು ಇದೆ. ಈಗ ಇದರಲ್ಲಿ ತಮಗೆ ಗೊತ್ತಿರುವಂತೆ ನಾಲ್ಕನೇ ಹಂತ ಎಂಬುದು ಏನಾದರು ಇದೆಯೇ?

ಶ್ರೀ ಜೆ. ಎಚ್. ಪಟೇಲ್.—ಅದು ಎರಡನೇ ಸ್ಟೇಜ್, ನಾಲ್ಕನೇ ಯೂನಿಟ್;

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದು ಈಗ ಯಾವ ಹಂತದಲ್ಲಿದೆ? ೧೯೮೮-೮೯ರಲ್ಲಿ ಈ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ನಾಲ್ಕನೇ ಹಂತದ ಬಗ್ಗೆ ನೀವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಇದರ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಇದರಲ್ಲಿ ನಾಲ್ಕನೇ ಹಂತ ಎಂದಿರುವುದನ್ನು ತಾವು ಎರಡನೇ ಸ್ಟೇಜ್, ನಾಲ್ಕನೇ ಯೂನಿಟ್ ಎಂದು ಈಗ ತಿದ್ದುಪಡಿ ಮಾಡುತ್ತಿದ್ದೀರಿ. ಆದರೆ ಇದನ್ನು ೧೯೮೮-೮೯ರಲ್ಲಿ ತೆಗೆದುಕೊಳ್ಳುವ ಬಗ್ಗೆ ನಿಮ್ಮಲ್ಲಿ ಯಾವುದೇ ಕಾರ್ಯಕ್ರಮ ಇಲ್ಲ. ಆದರೂ ಈ ಬಗ್ಗೆ ದಿನಾಂಕ ೧೨-೪-೧೯೮೮ರಲ್ಲಿ ಸದರನ್ ರೀಜನಲ್ ಎಲೆಕ್ಟ್ರಿಸಿಟಿ ಬೋರ್ಡ್ ಮೀಟಿಂಗ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಸಲದ ಬಡ್ಜೆಟ್ ಭಾಷಣದಲ್ಲಿ ಈ ಬಗ್ಗೆ ನಾಲ್ಕನೇ ಹಂತ ಎಂದು ಹೇಳಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಈಗ ಇದನ್ನು ಎರಡನೇ ಸ್ಟೇಜ್‌ನ ನಾಲ್ಕನೇ ಯೂನಿಟ್ ಎಂದು ಹೇಳುತ್ತಿದ್ದಾರೆ.

SRI J.H. PATEL.—There are stages here.

SRI M. VEERAPPA MOILY.—You are referring now to second stage 4th unit. You have proposed only 2 units. One in June 1990 and the other is after that. It will be in 8th Plan. This is I am quoting from the Minutes of the Southern Regional Electricity Board. Meeting. Why do you mislead the House? ಈ ನಾಲ್ಕನೇ ಹಂತದ ಕೆಲಸ ೧೯೯೦ಕ್ಕೆ ಪ್ರಾರಂಭವಾಗಿ ೧೯೯೩ಕ್ಕೆ ಮುಗಿಯಬೇಕಾಗುತ್ತದೆ. ಇಂಥಾದ್ದನ್ನು ಇವರು ೧೯೮೮-೮೯ರಲ್ಲಿ ಕಾರ್ಯಗತ ಮಾಡುತ್ತೇವೆಂದು ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇವರಿಗೆ ಈ ಬಗ್ಗೆ ಹೇಳುವುದರಲ್ಲಿಯೂ ಪ್ರಾಮಾಣಿಕತೆ ಇಲ್ಲ ಮತ್ತು ಮಾಡುವುದರಲ್ಲಿಯೂ ಸಹ ಇವರಿಗೆ ಪ್ರಾಮಾಣಿಕತೆ ಇಲ್ಲ. ಈ ವರ್ಷದಲ್ಲಿ ಇದು ಪ್ರಾರಂಭವಾಗುವುದಿಲ್ಲ. It may go even after two years. God only knows about the 4th unit. It may be even 1995. Why should you mislead the House? Now I come to Sharavathi Tail raise Project, which is of 240 M.W. The target date of completion is only 1994. ಅವರು ಹಣ ಕೊಡುವ ಬಗ್ಗೆ ಅನೌನ್ಸ್ ಮಾಡಿರಬಹುದು. ಆದರೆ ಇದರ ಕೆಲಸ ಮಾತ್ರ ಇನ್ನೂ ಪ್ರಾರಂಭವಾಗಿಲ್ಲ. ಮತ್ತೆ ಈ ಸಲದ ಬಡ್ಜೆಟ್ ಭಾಷ ದಲ್ಲಿ ಬಂಧಿತ ಡೀಸಲ್ ವಿದ್ಯುತ್ ಜನಕಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ವಿದ್ಯುತ್ ಜನಕಗಳಿಂದ ೭೭ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗುತ್ತದೆಂದು ಹೇಳಿದ್ದಾರೆ. ಇದರ ಜೊತೆಗೆ ಗ್ಯಾಸ್ ಟರ್ಬೈನ್ ಡೀಸೆಲ್ ಯೋಜನೆ ಮೂಲಕ ೧೨೦ ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡಲು ಹೊರಟಿದ್ದಾರೆ.

SRI VLERAPPA MOILY.— For rural areas it is 133 M.W You are also proposing to set up diesel generating sets at Kolar, Bidar, Jamakandi and India. You have yet to furnish the target date. That means you are not ready even with your minimum plan. In your report it says, the following are the projects are taken up for executive during 1988. Even after the presentation of the Budget on

21–3–8988 nothing has been done. ಏಕೆಂದರೆ, ತಮ್ಮ ಅಧಿಕಾರಿಗಳಿಗೂ ಯಾವ ರೀತಿಯ ಸಾಮರಸ್ಯವೂ ಇಲ್ಲ ಎಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ತಾವು ಇಲ್ಲಿ ಒಂದು ರೀತಿ ಘೋಷಣೆ ಕೊಡುತ್ತಾ ಹೋಗುತ್ತೀರಿ, ಸರ್ಕಾರದಲ್ಲಿ ಅದಕ್ಕೆ ವಿರುದ್ಧ ಮುಖದಲ್ಲಿ ನಡೆಯುತ್ತಿದೆ. ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೀರಿ ಎನ್ನುವುದೇ ತಿಳಿಯುತ್ತಿಲ್ಲ. ಗ್ಯಾಸ್ ಟರ್ಬೈನ್ ಪ್ರಾಜೆಕ್ಟ್ ಅಟ್ ಯಲಹಂಕ ಇದೆ, ಈ ವರ್ಷ ಈ ಕೆಲಸವನ್ನು ಪ್ರಾರಂಭ ಮಾಡಿ. ೧೯೯೧–೯೨ಗೆ ಏಕೆ ಹೋಗಬೇಕು. These or all the basic things. ಆದುದರಿಂದ ಈ ೧–೨–೩–೪ ಯೋಜನೆಗಳನ್ನು ತಾವು ಏನು ಮಾಡಬೇಕು ಎಂದು ಹೊರಟಿದ್ದೀರಿ. ಈ ವರ್ಷ ಏನು ಕಮೆನ್ಸ್ ಮಾಡಬೇಕು ಎಂದು ಹೊರಟಿದ್ದೀರಿ, ಅದನ್ನು ಮಾಡತಕ್ಕಂಥ ಯಾವ ಲಕ್ಷಣ ಕೂಡ ನಮಗಂತೂ ಕಾಣುತ್ತಾ ಇಲ್ಲ ತಾವು ಅವರ ಮೇಲೆ ಹೇಳುತ್ತೀರಿ. ಕೇಂದ್ರ ಸರ್ಕಾರಕ್ಕೆ ಬೃಂದಾವನ್ ಮಿನಿ ಹೈಡಲ್ ಸ್ಕೀಂ – ಶಿವನಸಮುದ್ರ ಸ್ಕೀಂ ಈ ಎರಡನ್ನೂ ಕಳಿಸಿದ್ದೇವೆ ಬಂದಿಲ್ಲ ಎಂದು ಹೇಳುತ್ತೀರಿ, ಬಂದರೆ ತಾವು ಏನು ಮಾಡುತ್ತೀರಿ? ಡೀಸಲ್ ಜನರೇಟ್ ಅಟ್ ಯಲಹಂಕ, ಗ್ಯಾಸ್ ಟರ್ಬೈನ್ ಮಾಡುವಂಥಾದ್ದು ಏನಿದೆ ಅದಕ್ಕೆ ಕೇಂದ್ರ ಸರ್ಕಾರ ೩೦ ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆ ಎಂದು ಮುಂದೆ ಬಂದಿದೆ. They have come-forward. They have already offered.

ಶ್ರೀ ಜೆ. ಹೆಚ್, ಪಟೇಲ್.— ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ೧೨ ಕೋಟಿಯನ್ನು ೧೯೮೪ರಿಂದ ೩೩–೩೪ ಸೆಲೆಕ್ಟೆಡ್ ಇಂಡಸ್ಟ್ರೀಸ್‌ನಿಂದ ಯೂನಿಟ್‌ಗೆ ೫೦ ಪೈಸೆ ಹಾಗೆ ಕಲೆಕ್ಟ್ ಮಾಡಿ ಇಟ್ಟುಕೊಂಡಿದ್ದೀರಿ. ಅಕಾರ್ಡಿಂಗ್ ಟು ದಟ್ ಪ್ರಾಜೆಕ್ಟ್, ೧೯೮೭ರಲ್ಲಿ ಅದು ಆಗಬೇಕಾಗಿತ್ತು According to the promise which is given to us. ಓರಲ್ ಅಗ್ರಿಮೆಂಟ್‌ನಲ್ಲಿ ಪ್ರೊಸೀಡಿಂಗ್ಸ್‌ನಲ್ಲಿ ಏನಾಗಿದೆ you have not reduced that agreement in writing with the industrialists. ಹಣ ವಸೂಲು ಮಾಡಿದರೆ ೧೨ ಕೋಟಿ ಅವರು ಕೊಟ್ಟಿದ್ದಾರೆ. ನೀವು ೨ ವರ್ಷಗಳಲ್ಲಿ ಅದನ್ನು ಕಲೆಕ್ಟ್ ಮಾಡುತ್ತೇವೆ ಎಂದು ಹೇಳಿದಿರಿ. ಇವತ್ತಿನವರೆಗೂ ಕೂಡ ಅದು ಆಗಲಿಲ್ಲ. Even though they have cleared the project though they have offered to give 30% of the subsidy on that ನೀವು ಒಂದು ಇಂಚೂ ಮುಂದೆ ಹೋಗತಕ್ಕ ಲಕ್ಷಣವನ್ನೇ ತೋರಿಸಲಿಲ್ಲ. ಎಲೆಕ್ಟ್ರಿಸಿಟಿ ಜನರೇಟ್ ಮಾಡುವುದರಲ್ಲಿ ತಮಗೆ ಎಷ್ಟು ಆಸಕ್ತಿ ಇದೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇರೆ ಬೇಕಾಗಿಲ್ಲ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಈಗ ರಾಯಚೂರು ಥರ್ಮಲ್ ಪ್ಲಾಂಟ್ ಬಗ್ಗೆ ಹೇಳುತ್ತಾ ಇದ್ದೇನೆ. You have not finalised even the coal linkage, Raichur second stage is still in the ark. ಒಂದು, ಎರಡು ಬಿಡಿ, ಇವತ್ತು ಅದನ್ನು ಮುಂದುವರಿಸತಕ್ಕಂಥ ಯಾವುದೇ ಲಕ್ಷಣ ಕಾಣುತ್ತಾ ಇಲ್ಲ ಆದುದರಿಂದ ಇವತ್ತು ಏನು ಎಲೆಕ್ಟ್ರಿಸಿಟಿ ಜನರೇಷನ್ ಮಾಡಬೇಕು, ಎಂದು ತಮ್ಮ ಎಫರ್ಟ್ಸ್ ಏನಿದೆ to get more power into the grid, I must say ನಿಮ್ಮ ಎಫರ್ಟ್ಸ್ ಏನಿಲ್ಲ, ಏನಾದರೂ ಬರುವುದಾದರೆ ಕಲ್ಪಾಕಂನಿಂದ ರಾಮಗುಂಡಂನಿಂದ ನಮಗೆ ಪವರ್ ಬರಬೇಕು. ನಮಗೆ ಅವರು ಸಹಾಯ ಮಾಡಬೇಕಾಗಿದೆ. ಇವತ್ತು ಸುಮಾರು ೫.೬ ಮಿಲಿಯನ್ ಯೂನಿಟ್ ಪ್ರತಿದಿನ ನಮಗೆ ಮಹಾರಾಷ್ಟ್ರದಿಂದ ಬರುತ್ತಿದೆ. ತಾವು ಪ್ರಾಮಾಣಿಕ ಪ್ರಯತ್ನವನ್ನು ಏನಾದರೂ ಮಾಡಿದರೆ if you had put up tail and between Kolhapur and Belgum you could have got another 5.5 Million Units. ಎಷ್ಟೋ ಸಮಸ್ಯೆಗಳು ಪರಿಹಾರವಾಗುತ್ತದೆ. ತಮಗೆ ಗೊತ್ತಿರಬಹುದು ೧೯೮೪–೮೫ರಲ್ಲಿ ಕೊಲ್ಹಾಪುರದಿಂದ ಬೆಳಗಾಂನಿಂದ ಇನ್ನೊಂದು ಸರ್ಕ್ಯೂಟ್‌ನ್ನು ವಾರ್‌ಫುಟಿಂಗ್‌ನಲ್ಲಿ ಕೆಲಸಮಾಡಿ ಕೇವಲ ೬ ತಿಂಗಳಲ್ಲಿ ಮುಗಿಸಿದಿರಿ ತಾವು ಇವತ್ತು ಮನಸ್ಸು ಮಾಡಿದರೂ ಇನ್ನು ೬ ತಿಂಗಳು, You can put another tail end and get minimum 5.5 milion units extra i.e other than 5.6 million units which you are getting ಈ ಬಗ್ಗೆ ತಾವು ಯಾವುದೇ ರೀತಿಯಲ್ಲೂ ಕೆಲಸವನ್ನು ಮಾಡುತ್ತಿಲ್ಲ, ಇವತ್ತು ಇದರ ಬಗ್ಗೆ ತಾವು ಚಿಂತನೆಯನ್ನೂ ಕೂಡ ಮಾಡಿಲ್ಲವೆಂದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ. ಇದಕ್ಕೆ ೮–೯ ಕೋಟಿ ರೂಪಾಯಿಗಳು ಖರ್ಚಾಗಬಹುದು ಇದರ ಬಗ್ಗೆ ಆ ಸದನದಲ್ಲಿ ಒಬ್ಬ ಘನ್ನ ಸದಸ್ಯರು ಫ್ರೀಕ್ವೆನ್ಸಿ ಕನ್ವರ್ಟರ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಆದ್ದರಿಂದ ಪುನಃ ನಾನು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ತಮಗೂ ಗೊತ್ತಿದೆ ಪವರ್ ಜನರೇಟರ್ಸ್

ಮತ್ತು ಪವರ್ ಮೆಷಿನ್ಸ್ ಅಷ್ಟು ಸುಲಭವಾಗಿ ಹಳೆಯದಾಗುವುದಿಲ್ಲ. ಶಿವನಸಮುದ್ರದಲ್ಲಿರತಕ್ಕ ಮೆಷಿನ್ ಏನಿದೆ ಅದನ್ನು ಸುಮಾರು ೧೯೦೨ ಅಥವಾ ೧೯೧೦ರಲ್ಲಿ ಹಾಕಿರಬಹುದು. ಸುಮಾರು ೮೦-೮೫ ವರ್ಷಗಳಾದರೂ ಇವತ್ತಿಗೂ ಕೂಡ ಅದು ಚೆನ್ನಾಗಿಯೇ ಕೆಲಸ ಮಾಡುತ್ತಿದೆ. ಬಹುಶಃ ೧೯೩೦ರಲ್ಲಿ ೨ ಫ್ರಿಕ್ವೆನ್ಸಿ ಕನ್ವರ್ಟರ್ಸ್ ಇಲ್ಲಿಗೆ ಬಂದಿವೆ. ಒಂದು ಮೈಸೂರಿನಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಇನ್ನೊಂದನ್ನು ಬೆಂಗಳೂರಿನಲ್ಲಿ ಹಾಕಿದ್ದಾರೆ. ಇದೂ ಕೂಡ ಚೆನ್ನಾಗಿ ಕೆಲಸ ಮಾಡುತ್ತಿದೆ. ಇದನ್ನು ಬೇಕಾದರೆ ಮೈಸೂರಿಗೆ ಟ್ರಾನ್ಸ್‌ಪೋರ್ಟ್ ಮಾಡಬಹುದಿತ್ತು. ಈ ಕೆ.ಇ.ಬಿ. ಯವರು ಒಂದು ನಿರ್ಣಯವನ್ನು ಮಾಡಿದ್ದಾರೆ. ಅಮೇರಿಕಾದಿಂದ ೯ ಕೋಟಿ ರೂಪಾಯಿ ಕೊಟ್ಟು ಒಂದು ಕನ್ವರ್ಟರನ್ನು ತರಿಸಬೇಕೆಂದು ಮಾಡಿದ್ದಾರೆ. during 1987–98, the loss was Rs. 140 Crores, not accumulated loss; You could have saved that money. ಈಗ ತಾವು ದಯವಿಟ್ಟು ಒಂದು ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಈಗ ಯಾವ ಕನ್ವರ್ಟರ್ ಐಡಲ್ ಆಗಿ ನಿಂತಿದೆ ಅದನ್ನು ತಾವು ಏತಕ್ಕೆ ಉಪಯೋಗ ಮಾಡುತ್ತಿಲ್ಲ. Is it not possible to instal that machinery and transport it to Mysore and instal it. ಇದನ್ನು ತಾವು ವಿಚಾರ ಮಾಡಬೇಕು. ಯಾರಾದರೂ ಅಮೇರಿಕಾಕ್ಕೆ ಹೋಗಿಬರಲಿ. It is to gain more knowledge. I am not the only one person to say why your Officers have gone to America. They must have gained some more knowledge. Experts must expose themselves. There is nothing wrong about it. But if they think that, I must account for and therefore to purchase one machine worth Rs. 9 Crores then this is wrong. ಅಲ್ಲಿ ಒಂದು ಮೆಷಿನ್ ಇರುವಾಗ ಇನ್ನೊಂದು ಮೆಷಿನ್‌ನ್ನು ಪರ್ಚೇಸ್ ಮಾಡುವ ಅವಶ್ಯಕತೆ ಏನಿದೆ? ನೀವು ಈ ಹಣವನ್ನು ಉಳಿಸಬಹುದಿತ್ತು. ಇಂಥ ಅನಗತ್ಯ ಖರ್ಚು ಏನು ನಡೆಯುತ್ತಿದೆ ಇದನ್ನು ನಿಲ್ಲಿಸತಕ್ಕ ಪ್ರಯತ್ನವನ್ನು ನೀವು ಮಾಡುತ್ತಿಲ್ಲ.

ಇನ್ನು ವರಾಹಿ ಅಂಡರ್‌ಗ್ರೌಂಡ್ ಸ್ಟೇಷನ್ ಕೂಡ ಹಾಗೆ ಇದೆ. ಮಾನ್ಯ ಅಧ್ಯಕ್ಷರೆ, ಇದನ್ನು ಬರುವ ವರ್ಷ ಮಾಡುತ್ತೇವೆ, ಮುಂದಿನ ವರ್ಷ ಮಾಡುತ್ತೇವೆ, ಕಮಿಷನ್ ನೇಮಕ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆಯೇ ಹೊರತು ಅದನ್ನು ಮಾಡಲಿಲ್ಲ. ಆ ಟಾರ್ಗೆಟ್ ಡೇಟ್ ಮುಂದೆ ಹೋಗುತ್ತಿದೆ ಅದನ್ನು ನಿಲ್ಲಿಸತಕ್ಕ ಪ್ರಯತ್ನ ಇವತ್ತು ನಡೆಯುತ್ತಿಲ್ಲ.

ಇನ್ನು ಐ ಪಿ. ಸೆಟ್ಸ್ ಸರ್ವೀಸಿಂಗ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಹಿಂದೆ ಒಂದು ಐ.ಪಿ. ಸೆಟ್ ಹಾಕುವುದಕ್ಕೆ [illegible] ಸಾವಿರ ರೂಪಾಯಿ ಎಂದು ಒಂದು ಸೀಲಿಂಗ್ ಇತ್ತು. Now for one reason or the other, the ceiling has been removed ಆದರೆ ಆ ಸೀಲಿಂಗ್‌ನ್ನು ರಿಮೂವ್ ಮಾಡಿದೆ ಎಂದು ಒಂದು ಐ.ಪಿ. ಸೆಟ್‌ಗೆ ೧ ಲಕ್ಷ ರೂಪಾಯಿ ಬೇಕಾದರೂ ಖರ್ಚು ಮಾಡಬಹುದೆ? ಆದರೆ ಇವತ್ತು ಐ.ಪಿ. ಸೆಟ್ಟಿಗೆ ಕನೆಕ್ಷನ್ ಕೊಡಬೇಕು ಎಂದು ಸಂಪೂರ್ಣ ಚಿತ್ರವನ್ನೇ ಬದಲಿಸಬಾರದು. ಒಂದೊಂದು ಐ.ಪಿ. ಸೆಟ್ಟಿಗೆ ಕನೆಕ್ಷನ್ ಕೊಡುವುದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರತಕ್ಕಂಥ ಇನ್‌ಸ್ಟೆನ್ಸ್ ಕೆ.ಇ.ಬಿ ನಲ್ಲಿ ಇದೆ. ಬೇಕಾದರೆ ತರಿಸಿ ನೋಡಿ. ಆದ್ದರಿಂದ ಇದು ಬಹಳ ದುಬಾರಿಯಾಗುವುದರಿಂದ ಇದನ್ನು ಸರಿಪಡಿಸಬೇಕಾಗುತ್ತದೆ.

ಇನ್ನು ವಿಲೇಜ್ ಎಲೆಕ್ಟ್ರಿಫಿಕೇಶನ್ ಬಗ್ಗೆ ಹೇಳುವುದಾದರೆ ಎಲ್ಲಾ ಆಗಿಹೋಯಿತು, ಹ್ಯಾಮ್ ಲೆಟ್ಸ್, ವಿಲೇಜಸ್ ಎಲ್ಲ ಎಲೆಕ್ಟ್ರಿಫಿಕೇಷನ್ ಆಗಿ ಹೋಯಿತು ಎನ್ನುವ ಒಂದು ಇಂಪ್ರೆಷನ್ ತಾವು ಕೊಡುತ್ತಿದ್ದೀರಿ. ಅದನ್ನು ತಾವು ಉತ್ತರದಲ್ಲಿ ದಯವಿಟ್ಟು ಹೇಳಬೇಕು. ೧೯೮೧ನೇ ಸೆನ್ಸಸ್ ಪ್ರಕಾರ ೨೭,೦೨೪ ಗ್ರಾಮಗಳು ೨೪,೯೨೪ ಹ್ಯಾಮ್‌ಲೆಟ್ಸ್‌ಗಳು ಎಲೆಕ್ಟ್ರಿಫಿಕೇಷನ್ ಆಗಬೇಕೆಂದು ಗುರುತಿಸಿದ್ದೀರಿ. ಈ ಸದನದಲ್ಲೂ ಮತ್ತು ಆ ಸದನದಲ್ಲೂ ಸಾರ್ವಜನಿಕ ಪತ್ರಿಕೆಗಳಲ್ಲೂ ಪ್ರಕಟಣೆ ಬಂದ ಪ್ರಕಾರ ಸುಮಾರು ೭೨೫೭ ಹ್ಯಾಮ್‌ಲೆಟ್ಸ್ ಎಲೆಕ್ಟ್ರಿಫಿಕೇಷನ್ ಮಾಡಿದ್ದರೂ ೧೭,೬೬೭ ಹ್ಯಾಮ್‌ಲೆಟ್ಸ್‌ಗಳಿಗೆ ಇನ್ನೂ ಎಲೆಕ್ಟ್ರಿಫಿಕೇಷನ್ ಆಗಬೇಕು ಎಲ್ಲ ಮಾಡಿದ್ದೇವೆಂದು ಹೇಳಿ, ಇನ್ನೂ ಕಡಿಮೆ ಮಾಡಿರತಕ್ಕಂಥದ್ದು ಇದೆ. ಬರೇ ಹೇಳಿಕೆಗಳನ್ನು ಈವತ್ತು ನಾವು ಕಾಣುತ್ತಿದ್ದೇವೆ. Even in respect of villages also you have not achieved the target

ಇನ್ನು ಈ ಭಾಗ್ಯ ಜೋತಿ ಸ್ಕೀಮ್ ಇದು ಬಡವರಿಗೆ, ದುರ್ಬಲ ವರ್ಗದವರಿಗೆ ಬಹಳ ಅನುಕೂಲವಾದ ಸ್ಕೀಮ್. ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾ ಹೋದರು. ಅದು ಏನೆಂದರೆ ನಾವು ಸುಮಾರು ೭೫ ಸಾವಿರ ಅಥವಾ ಒಂದು ಲಕ್ಷ ಮನೆಗಳಿಗೆ ಭಾಗ್ಯಜ್ಯೋತಿಯನ್ನು ಕೊಡುತ್ತೇವೆಂದು. ಈ ರೀತಿ ಹೇಳಿಕೆಯನ್ನು ಕೊಡುತ್ತಲೇ ಹೋದರು. ಇಷ್ಟೇ ಅಲ್ಲದೆ ಕಡಿಮೆ ಪಕ್ಷ ೫೦ ಸಾವಿರ ಮನೆಗಳಿಗೆ ಪ್ರತಿವರ್ಷ ಭಾಗ್ಯ ಜ್ಯೋತಿ ಕೊಡುತ್ತೇವೆಂದು ಹೇಳುತ್ತಾ ಹೋದರು. ಇದೇರೀತಿ ಕುಟೀರ ಜ್ಯೋತಿ ಎಂದು ಕೇಂದ್ರ ಸರ್ಕಾರದಿಂದ ಒಂದು ಯೋಜನೆ ಬಂದಿತು. ಅದಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಗಳು ನಾವು ಮಾಡಿದ ಸ್ಕೀಮ್‌ಗೆ ಇನ್ನೊಂದು ಓವರ್‌ಲ್ಯಾಪಿಂಗ್ ಸ್ಕೀಮ್ ಮಾಡಿದರು ಎಂದು ಹೇಳಿದರು. ಬಡವರಿಗೆ ಉಪಯುಕ್ತವಾಗುವಂಥ ಸ್ಕೀಮ್‌ಗಳು ಎಷ್ಟೇ ಬಂದರೂ ಅದನ್ನು ಸ್ವಾಗತ ಮಾಡತಕ್ಕಂಥ ಹೃದಯವಂತಿಕೆ ಬೇಕು. ಅದು ರಾಜ್ಯ ಸರ್ಕಾರದ್ದಿರಲಿ, ಅಥವಾ ಕೇಂದ್ರ ಸರ್ಕಾರದ್ದಿರಲಿ. ೧೯೭೬—೭೭ನೇ ಇಸವಿಗೆ ಒಂದು ಲಕ್ಷ ಎಪ್ಪತ್ತೈದು ಸಾವಿರ ಮನೆಗಳಿಗೆ ಭಾಗ್ಯಜ್ಯೋತಿಯನ್ನು ಕೊಡುತ್ತೇವೆಂದು ಹೇಳಿ ೫೦ ಸಾವಿರ ಮನೆಗಳಿಗೆ ಕೊಡಲು ಸಾಧ್ಯವಾಗಲಿಲ್ಲ, ಎಷ್ಟು ಮಾಡಿದಿರಿ ಎಂದರೆ ೨೩,೦೪೩ ಮನೆಗಳಿಗೆ, ಭಾಗ್ಯಜ್ಯೋತಿಯನ್ನು ಕೊಟ್ಟಿರಿ. If we take 1 lakhs as target not even a quarter of that you have achieved. ಅದಕ್ಕೆ ಹೆಚ್ಚು ಹಣವನ್ನು ಕೊಡಬೇಕಾಗಿತ್ತು ಕೇಂದ್ರ ಸರ್ಕಾರದವರು ಇದರ ಬಗ್ಗೆ ಹೆಚ್ಚು ಪ್ರಾವಿಷನ್ ಮಾಡಿದೆ. ಇದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದೆ. ಆದ್ದರಿಂದ ಈವತ್ತು ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ತಾವು ಒದಗಿಸಬೇಕಾಗಿತ್ತು.

ಇನ್ನು ತಮ್ಮ ಸರ್ಕಾರ ಕೆಲವು ಘೋಷಣೆಗಳನ್ನು ಮಾಡಿದೆ. ತಾವು ಕೈಗಾರಿಕಾ ಮಂತ್ರಿಗಳಾಗಿಯೂ ಇದ್ದಿರಿ, ತಾವು ವಿದ್ಯುಚ್ಛಕ್ತಿಯ ಮಂತ್ರಿಗಳಾಗಿಯೂ ಇದ್ದೀರಿ. ತಮ್ಮ ಕಾಲದಲ್ಲಿ ಘೋಷಣೆ ಮಾಡಲಿಲ್ಲ. ಸನ್ಮಾನ್ಯ ಬೊಮ್ಮಾಯಿಯವರು ಕೈಗಾರಿಕಾ ಮಂತ್ರಿಗಳಾಗಿದ್ದಾಗ ಘೋಷಣೆ ಮಾಡಿದರು. ಏನು ಮಾಡಿದರೆಂದರೆ ಒಂದು ಸಾವಿರ ಕೈಗಾರಿಕೆಗಳನ್ನು ನಾವು ಪ್ರತಿತಿಂಗಳು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಆಮೇಲೆ ಮತ್ತೊಬ್ಬರು ಹೇಳಿಕೆ ಕೊಟ್ಟರು ೫೦ ಸಾವಿರ ಪಂಪ್‌ಸೆಟ್ಟುಗಳನ್ನು, ಎರಡು ಸಾವಿರ ಗ್ರಾಮಗಳನ್ನು ನಾವು ವಿದ್ಯುದ್ದೀಕರಣ ಮಾಡುತ್ತೇವೆಂದು ಹೇಳಿ. ಇದಕ್ಕೆ ಎಷ್ಟು ವಿದ್ಯುತ್ ಬೇಕೆಂದರೆ ೪೦೦ ಟನ್ ಮೆಗಾವ್ಯಾಟ್ಸ್ ವಿದ್ಯುತ್ ಬೇಕಾಗುತ್ತದೆ. I have computed the figures. 410 megawatts. The very fact that you are not providing additional electricity will show that your slogans were hallow. ೫೦೦ ರಿಂದ ಒಂದು ಸಾವಿರ ಬರೆ ದಾರಿಯಲ್ಲಿ ಸಿಕ್ಕತಕ್ಕಂಥ ಜನರ ಹೆಸರನ್ನು ಹಾಕುತ್ತಾ ಹೋಗಿರಬಹುದು. ಬಂಕ್ಸ್ ಶಾಪ್ಸ್ ಮತ್ತೊಂದು ಶಾಪ್ಸ್‌ಗಳನ್ನು ಅಧಿಕಾರಿಗಳು ರಿಜಿಸ್ಟರ್ ಮಾಡುತ್ತಾ ಲೆಕ್ಕ ಹಾಕಿರಬಹುದು.

೨-೦೦ ಪಿ.ಎಂ.

ಇಲ್ಲದಿದ್ದರೆ ಎಲೆಕ್ಟ್ರಿಸಿಟಿ ಕೊಡಬೇಕಾಗುತ್ತದೆ. ವಿದ್ಯುತ್ ಕೊಡಲಿಕ್ಕೆ ತಮ್ಮ ಹತ್ತಿರ ವಿದ್ಯುತ್ ಇಲ್ಲ. ವಿದ್ಯುತ್ ಕೊಟ್ಟಿಲ್ಲ ನೀವು ಎಲ್ಲಿಂದ ಕೊಡುತ್ತೀರಿ? ಪಂಪ್‌ಸೆಟ್ ಕೂಡ ಎಲೆಕ್ಟ್ರಿಫೈ ಮಾಡಿಸುವ ಲೆಕ್ಕಕ್ಕೆ ಬರುತ್ತದೆ. ನೀವು ಮಾಡಿರುವುದು ಆಟಕ್ಕೆ ಉಂಟು, ಲೆಕ್ಕಕ್ಕೆ ಇಲ್ಲ. ಹೌಸ್‌ಹೋಲ್ಡ್‌ಗಳಿಗೆ ಎಂದು ಲೆಕ್ಕ ಕೊಡುತ್ತೀರಿ ಆದರೆ ಅಲ್ಲಿ ಎಲೆಕ್ಟ್ರಿಸಿಟಿ ಹೋಗಿರುವುದಿಲ್ಲ. ಇಂಥ ಲೆಕ್ಕವನ್ನು ಏತಕ್ಕೆ ಕೊಡಬೇಕು? ಪ್ರಾಮಾಣಿಕ ಆಸೆಯನ್ನು ಹುಟ್ಟಿಸಿ, ಆದರೆ ಆಕಾಶದ ಎತ್ತರ ಮಾಡಬೇಡಿ ಆಸೆಯನ್ನು ಹುಟ್ಟಿಸಿ ಅದನ್ನು ನೆರವೇರಿಸತಕ್ಕ ಕೆಲಸ ಆಗದಿದ್ದರೆ ಏನು ಪ್ರಯೋಜನ ಪ್ರಾಮಾಣಿಕ ಪ್ರಯತ್ನ ಈ ದಿಸೆಯಲ್ಲಿ ಸರ್ಕಾರದ್ದು ಇದೆಯೇ ಎಂದರೆ ಇಲ್ಲ ಘೋಷಣೆಗಳನ್ನು ಬಹಳ ಸುಲಭವಾಗಿ ಮಾಡುತ್ತೀರಿ. ಏಕೆಂದರೆ ಇವತ್ತು ನಿಮ್ಮ ಡಿಮ್ಯಾಂಡ್ ಪ್ರಕಾರ ಒಟ್ಟು ಎಲ್ಲಾ ಘೋಷಣೆಗಳನ್ನು ನೇರವೇರಿಸತಕ್ಕ ಪ್ರಯತ್ನ ಮಾಡಬೇಕಾದರೆ ೭೦೦ ಮೆಗಾವ್ಯಾಟ್ ಅಡಿಷನಲ್ ಎಲೆಕ್ಟ್ರಿಸಿಟಿಯನ್ನು ಉತ್ಪಾದನೆ ಮಾಡಿಕೊಡಬೇಕು. ಅದನ್ನು ಎಲ್ಲಿಂದ ಉತ್ಪಾದನೆ ಮಾಡಿಕೊಡುತ್ತೀರಿ? ಆದ್ದರಿಂದ ಘೋಷಣೆಗಳು ವಾಸ್ತವವಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಅದನ್ನು ಜಾರಿಗೆ ತರತಕ್ಕ ಶಕ್ತಿ ಕೂಡ ನಿಮ್ಮಲ್ಲಿ ಇಲ್ಲ. ಘೋಷಣೆ ಘೋಷಣೆಯಾಗಿ ಉಳಿದಿದೆಯೋ ಹೊರತು ಕಾರ್ಯರೂಪಕ್ಕೆ ಬಂದಿಲ್ಲ. ನಿಮ್ಮ ಜನತಾ ಅಚೀವ್‌ಮೆಂಟ್ ಹೇಗಿದೆ ಎಂದರೆ ಪೆಟ್ರೋಲ್ ಇಲ್ಲದೆ ಕಾರನ್ನು ಓಡಿಸುವ ಅಂದರೆ ತಳ್ಳುವ ಪರಿಸ್ಥಿತಿ

ಬಂದಿದೆ. ಕಾರು ಓಡಬೇಕಾದರೆ ಪೆಟ್ರೋಲ್ ಬೇಕೇಬೇಕು. ಆದರೆ ನಿಮ್ಮದು ಪೆಟ್ರೋಲ್ ಇಲ್ಲದೆ ಓಡಿದ ಗಾಡಿಯ ಪರಿಸ್ಥಿತಿಯಾಗಿದೆ. ಅಂದರೆ ತಳ್ಳಿರಬೇಕು, ಜನತಾ ಸರ್ಕಾರದವರು ಕಾರಿಗೆ ಪೆಟ್ರೋಲ್ ಹಾಕಿ ಓಡಿಸದೆ ಹಾಗೆಯೇ ತಳ್ಳಿ ಓಡಿಸುವ ತಂತ್ರವನ್ನು ಅಳವಡಿಸಿಕೊಂಡಿದ್ದಾರೆ. ಫಿಗರ್ ಕೊಡುವಾಗ ಮಾತ್ರ ಜೋರಾಗಿ ಕೊಡುತ್ತಿದ್ದಾರೆ. ಅಷ್ಟು ಮಾಡಿದ್ದೇವೆ ಇಷ್ಟು ಮಾಡಿದ್ದೇವೆಂದು ಹೇಳುತ್ತಾರೆ. ಮಂತ್ರಿಗಳು ಫಿಗರ್ಸ್ ಕೊಟ್ಟರೆ ಅಷ್ಟು ಫಲ ಇರಬೇಕಲ್ಲ. ಏನಾದರೂ ಸಾಧನೆ ಮಾಡಿದ್ದರೆ ೧+೧=೨ ಆಗುವ ಹಾಗೆ ಫಲ ಕಾಣುತ್ತದೆ. ಈ ದಿಸೆಯಲ್ಲಿ ಪ್ರಯತ್ನ ನಡೆದಿಲ್ಲ. ವಿದ್ಯುತ್ ಇಲಾಖೆ ಒಂದನ್ನು ಸರಿಯಾಗಿ ವಿಶ್ಲೇಷಣೆ ಮಾಡಿದರೆ ಸರ್ಕಾರದ ಪೂರ್ತಿ ಬಂಡವಾಳ ಗೊತ್ತಾಗುತ್ತದೆ, ಈ ರೀತಿಯಲ್ಲಿ ನಿಮ್ಮ ವಿದ್ಯುತ್ ಇಲಾಖೆಯ ಕಾರ್ಯ ವೈಖರಿ ನಡೆದಿದೆ. ಇವತ್ತಿನ ದಿವಸ ಎಷ್ಟೋ ಟ್ರಾನ್ಸ್‌ಫಾರ್ಮರ್‌ಗಳು ಒಡೆದು ಹೋಗುತ್ತಿವೆ. ಅದರ ಬಗ್ಗೆ ಈಗಾಗಲೇ ಉತ್ತರಿಸಿದ್ದೀರಿ ಆದ್ದರಿಂದ ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ದೇವನಹಳ್ಳಿ, ಚಿಂತಾಮಣಿ, ಗುಬ್ಬಿಯಲ್ಲಿ ದೊಡ್ಡ ದೊಡ್ಡ ಟ್ರಾನ್ಸ್‌ಫಾರ್ಮರ್‌ಗಳು ಒಡೆದು ಹೋದವು ಅಷ್ಟು ಕೆಪಾಸಿಟಿಯನ್ನು ಏತಕ್ಕೆ ಹಾಕುತ್ತಾರೆ. ಅದನ್ನು ಯಾರು ತಯಾರು ಮಾಡುತ್ತಾರೆ? ಎಲ್ಲಿಂದ ಪರ್ಚೇಸ್ ಮಾಡುತ್ತೀರಿ? ಇದನ್ನು ತಾವು ವಿಚಾರ ಮಾಡಬೇಕು. ಇವತ್ತು ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಸುಮಾರು ೧೨೦ ಕೋಟಿ ರೂಪಾಯಿವರೆಗೆ ಬಂದಿದೆ. ಒ, ಅಂಡ್ ಎಂ ಚಾರ್ಜಸ್ ಮೇಲೆ ನಿಮಗೆ ಕಂಟ್ರೋಲ್ ಇದೆಯೇ? ಇದು ೧೯೮೫-೮೬ರಲ್ಲಿ ೧೪ ಪೈಸೆ ಇದ್ದರೆ ೮೬-೮೭ರಲ್ಲಿ ೪೩ ಪೈಸೆ ಆಯಿತು, ೮೭-೮೮ಕ್ಕೆ ೫ ಪೈಸೆ ಆಯಿತು. ಅದನ್ನು ಹತೋಟಿಯಲ್ಲಿಟ್ಟುಕೊಳ್ಳತಕ್ಕ ಪ್ರಯತ್ನವನ್ನು ಮಾಡಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸದರ್ನ್ ರೀಜನಲ್ ಬೋರ್ಡ್‌ನವರು ಒಂದು ಕ್ಯಾಲ್ಕ್ಯುಲೇಷನ್ ಮಾಡಿ ೧-೪-೮೮ ರಿಂದ ೩೦-೬-೮೯ ರವರೆಗೆ ಎಷ್ಟು ವಿದ್ಯುತ್ ಕೊರತೆ ಆಗುತ್ತದೆಂದು ಹೇಳಿದ್ದಾರೆ. ಅದರ ಪ್ರಕಾರ ೪೦.೮೮ ಪರ್ಸೆಂಟ್ ಡಿಫಿಸಿಟ್. ಆಂಧ್ರಪ್ರದೇಶ ಕೂಡ ಸಾಧಾರಣ ಅಷ್ಟೇ ಇದೆ, ಅಂದರೆ ೩೮.೫೨ ಪರ್ಸೆಂಟ್ ಕೊರತೆ ಇದೆ. ಇದನ್ನು ಸರಿಯಾಗಿ ಡಿಸ್ಟ್ರಿಬ್ಯೂಟ್ ಮಾಡಿದ್ದೀರಾ? ನೀವು ಎಲ್ಲರಿಗೂ ಇದನ್ನು ಹಾಕಿದ್ದೀರಿ. ಹಿಂದೆ ನಾವು ಪವರ್ ಕಟ್ ಮಾಡಿದಾಗ ಸಾಮಾನ್ಯ ಮಟ್ಟಕ್ಕೆ ಸಣ್ಣ ಸಣ್ಣ ಕೈಗಾರಿಕೆಗಳಿಗೆ, ಸಿಕ್ ಇಂಡಸ್ಟ್ರಿಗಳಿಗೆ, ಅಗ್ರಿಕಲ್ಚರ್ ಸೆಕ್ಟರ್‌ಗೆ ಇದಕ್ಕೆಲ್ಲ ಪೂರ್ತಿಯಾಗಿ ಪವರ್ ಕಟ್‌ನಿಂದ ವಿನಾಯಿತಿ ಕೊಟ್ಟಿದ್ದೆವು. ನೀವು ಮಾತ್ರ ಈಗ ಅದನ್ನು ಮಾಡಿಲ್ಲ. ನಮ್ಮಲ್ಲೆಲ್ಲಾ ಯಾವಾಗ ಆನ್ ಮಾಡಬೇಕೋ ಆಗ ಪವರ್ ಇರುವುದಿಲ್ಲ ತಮಗೆ ಗೊತ್ತಿದೆ. ಇನ್ನೂ ಕೂಡ ಅದನ್ನು ನಿಭಾಯಿಸಿಲ್ಲ. ಒಂದೊಂದು ಜಿಲ್ಲೆಯಲ್ಲಿ ಪರಿಸ್ಥಿತಿ ಒಂದೊಂದು ರೀತಿ ಇರುತ್ತದೆ ಐ ಪಿ ಸೆಟ್ಸ್ ಇರುವುದೇ ಇವತ್ತು ಒಂದು ಲಯಬಲಿಟಿ ಆಗಿದೆ. ೬೦ ಪರ್ಸೆಂಟ್ ಡಿಫಿಸಿಟ್ ಏನಿದೆ ಅವನ್ನು ಸರಿಮಾಡಲು ಸರಿಯಾದ ಪ್ರಯತ್ನ ಇನ್ನೂ ಆಗಿಲ್ಲ. ಪವರ್ ಕಟ್ ಇಂಪೋಸ್ ಮಾಡುವಾಗ ಸರಿಯಾಗಿ ನಿರ್ವಹಿಸತಕ್ಕ ಪ್ರಯತ್ನ ಖಂಡಿತವಾಗಿ ಮಾಡಲಿಲ್ಲ ಎಂದು ನಾನು ಆಪಾದಿಸಬೇಕಾಗುತ್ತದೆ. ಕೊರತೆಯನ್ನು ನಿಭಾಯಿಸತಕ್ಕ ಮ್ಯಾನೇಜ್‌ಮೆಂಟ್ ಅನ್ನು ಕೂಡ ಅವರು ಸರಿಯಾಗಿ ಮಾಡಲಿಲ್ಲ ಎಂಬುದನ್ನು ಖಂಡಿತವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಇನ್ನು ಕೈಗಾರಿಕೆಗಳ ವಿಚಾರ. ಕೈಗಾರಿಕೆ ಮಟ್ಟಿಗೆ ಕರ್ನಾಟಕ ಒಂದು ಉಜ್ವಲವಾದ ಪರಂಪರೆಯನ್ನು ಹೊಂದಿದ ರಾಜ್ಯ. ಈಗ ಪರಿಸ್ಥಿತಿ ಏನಾಗಿದೆ ಎಂಬ ಬಗ್ಗೆ ಬಹುಶಃ ನಾನು ಅಂಕಿಅಂಶಗಳ ಆಧಾರದ ಮೇಲೆ ಹೇಳಿದರೆ ಬಹಳ ಯುಕ್ತವಾಗುತ್ತದೆಂದು ನಾನು ನಂಬಿದ್ದೇನೆ. ಕೈಗಾರಿಕೆಗಳು ಹೇಗೆ ಹೇಗೆ ಬೆಳೆಯುತ್ತಿದೆ ಎಂಬುದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಕರ್ನಾಟಕ it sometime enjoyed the third place, fifth place. seventh place, Average was fourth, fifth. In 1987-88 our State is at 12th place. We have gone very much back. ಸೆಂಟ್ರಲ್ ಸಬ್ಸಿಡಿ ಪಡೆಯುವುದರಲ್ಲಿ ೪ ಮತ್ತು ೫ನೇ ಸ್ಥಾನದಲ್ಲಿದ್ದರೆ ೧೯೮೭ ೮೮ರಲ್ಲಿ ನಮ್ಮ ಜಾಗ ೧೨ನೆಯದಾಗಿದೆ. ಮತ್ತೆ ನಾವು ಈ ವಿಷಯದಲ್ಲಿ ಹಿಂದೆ ಹೋಗಿದ್ದೇವೆ. ಬಹಳ ಕೆಳಮಟ್ಟಕ್ಕೆ ಬಂದಿದ್ದೇವೆ. ಹಿಂದೆ ಒಂದು ಕೈಗಾರಿಕೆ ಕಮಿಷನ್ ಮಾಡಬೇಕಾದರೆ ಮೂರು ನಾಲ್ಕು ವರ್ಷ ವಿಚಾರ ಮಾಡುತ್ತಿದ್ದೆವು. ೧೯೮೩-೮೪ ಮತ್ತು ೧೯೮೪-೮೫ರಲ್ಲಿ ನಾವು ಮಾಡಿದ್ದೇವೆ ಎಂದು ನೀವು ಹೇಳಬಹುದು. ಆಗ ಕರ್ನಾಟಕ ಮೂರನೇ ಸ್ಥಾನದಲ್ಲಿತ್ತು ಆದರೆ ಕ್ರೆಡಿಟ್ಟನ್ನು ನೀವು ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಮೂರು ನಾಲ್ಕು ವರ್ಷಗಳ ಕಾಲ ಬಂದಂಥ ಕೈಗಾರಿಕೆಗಳ ಸಬ್ಸಿಡಿ ವಿಚಾರ ತೆಗೆದುಕೊಂಡರೆ ನೀವು ಕ್ರೆಡಿಟ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನೀವು ಸಬ್ಸಿಡಿ ಡಿಸ್ಟ್ರಿಬ್ಯೂಟ್ ಮಾಡಿರಬಹುದು. But industries have started earlier. They

must have been commissioned after 3–4 years. But now we are occupying 12th place. That means, it is going to come down in future also. In fact, in the first three years of the plan the growth rate was nine and a half percent.

ನೀವು ಕೈಗಾರಿಕಾ ಮಂತ್ರಿಗಳ ಸಮ್ಮೇಳನಕ್ಕೆ ಅನೇಕ ಸಲ ಡೆಲ್ಲಿಗೆ ಹೋಗುತ್ತೀರಿ. We have established average growth rate of 9½% inspite of all adversities. It may go upto 12½. To-day, Karnataka is going in backward direction instead of forward. ನಾವು ಇವತ್ತು ಸ್ಪಷ್ಟವಾಗಿ ಈ ಒಂದು ಅಪಾಯದ ಚಿಹ್ನೆಗಳನ್ನು ಗುರುತಿಸತಕ್ಕ ಅವಶ್ಯಕತೆ ಇದೆ. ಕೇಂದ್ರದ ಹಣಕಾಸಿನ ಸಂಸ್ಥೆಗಳಾದ ಐಡಿಬಿಐ, ಐಸಿಎಸ್‌ಐ, ಎಸ್‌ಟಿಸಿ ಇಂತಹ ಹಣಕಾಸಿನ ಸಂಸ್ಥೆಗಳೆಲ್ಲಾ ಕೈಗಾರಿಕೆಗಳಿಗೆ ಸಾಲ ಒದಗಿಸಬೇಕಾಗಿರುತ್ತದೆ. ಕೈಗಾರಿಕಾ ಬೆಳವಣಿಗೆ ಬಗ್ಗೆ ಕರ್ನಾಟಕಕ್ಕೆ ಎಷ್ಟು ಹಣ ಬಂದಿದೆ ಅದನ್ನು ಹೊಂದಿಕೊಂಡು ನಮ್ಮ ಕೈಗಾರಿಕಾ ಬೆಳವಣಿಗೆಯನ್ನು ನಾವು ಮಾಪನ ಮಾಡಬೇಕಾಗುತ್ತದೆ. In respect of the assistance sanctioned and disbursed by all financial institutions to the backward districts in 1982–83, our place was 3rd in the entire country, The total put together both backward and non-backward. our place was 4th in availing finance from apex financial institutions, This was premier place enjoyed by Karnataka when compared to many other States which were supposed to be more advanced and progessive. In 1983–84, our place was 5th. In 1984–85, we camedown to 6th place In 1985–86, we were at the 6th place. In 1986–87 our place came down to 7th. Our place of ranking in respect of availing financial assistance is gradually coming down. You may say, we have received letter of indents. We got industrial licence. I know, very well that you may say that you have received more letter of indents. Last year also we have received more. What is the use of these paper industrial licences and letter of indents? What are you going to do with that when the industrial sector in the State is going down We have already lost our premier place. We may require another 5-10 years to regain that position, Gujarath and many other States are just overcoming. You are not giving now subsidy also. You have also not made sufficient provision for subsidy payments. Now there is undisbursed subsidy of Rs, 44 83 crores both under Central and State. You have sanctioned now in 1988–89 Rs. 15 crores. As on today you should have given Rs. 60 crores of subsidy to the enterpreneurs both under Central and State. When this is the state of affair. who will come to you for establishing industry. Without giving subsidy and connession, you are giving assurances. You are not keeping up your assurances. These are all sanctioned cases. In 1987-88 only Rs. 8 crores you have provided towards subsidy and the release was made to the extent of Rs. 8 crores. By this rate, it will take another 7½ years to make the full release of the subsidy sanctioned upto 1987–88. Apart from that, every year, the subsidy payment will accumulate. Who will come to you for establishing industry when you are not giving subsidy and not making prompt

payments? It will definitely have a snow-ball boiling effect on the industrialisation of Karnataka. If not industry, definitely you are going to kill the initiative in the industry. Nobody will come forward to establish industries here. I caution you that the entire industrialisation will collapse. You have not paid the subsidy granted by the Central Government. It will not be an exaggeration if I predict the collapse of industrialisation. You have disbursed Rs. 1.94 crores of Central Government. They have sanctioned Rs. 4.02 crores and you have released only Rs. 1.94 crores. It is a very interesting proposition. I have got a Bulletin here issued by the Central Government and the yearwise statements indicating toe reimbursement made under Central investment subsidy The Central Government released Rs. 4.02 crores and what you have actually released to the entrepreneure is Rs. 1.94 crores. What happened to the rest of the money? Am I to say that it has been misappropriated as far as your Treasury is concerned? I have got statistics released in 1987-88: Now about Rs. 3 crores you have withheld in your treasury. Who is responsible for this ? You have either misused it or diverted it somewhere. Is it not betrayal of the entrepreneurs ?

ಕೇಂದ್ರ ಸರ್ಕಾರ ರೀಇಂಬರ್ಸ್‌ಮೆಂಟ್ ಏಕೆ ಮಾಡುತ್ತಾರೆ ? The figure I have stated in the amount which is reimbursed for the year 1987-88 by the Government of India. It is to the tune of 194 lakhs. ಈ ಪರಿಸ್ಥಿತಿಯಲ್ಲಿ ಯಾವುದೇ ಒಂದು ರಾಜ್ಯದಲ್ಲಿ ಕೈಗಾರಿಕೆಯನ್ನು ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಎನ್. ಆರ್. ಐ. ಇನ್‌ವೆಸ್ಟ್‌ಮೆಂಟ್‌ಗಾಗಿ ಎರಡು ಸಲ ಹೋಗಿರಬಹುದು, ತಮ್ಮ ಅಧಿಕಾರಿಗಳು ಒಂದು ಸಾರಿ ಹೋಗಿರಬಹುದು. ಆದರೆ, ಈ ಎನ್. ಆರ್. ಐ. ಇನ್‌ವೆಸ್ಟ್‌ಮೆಂಟ್‌ನಲ್ಲಿ ಏನು ಆಕರ್ಷಣೆ ಮಾಡಿದ್ದೀರಿ. Karnataka has agreat reputation in Industrialisation. "Industrialise or perish" is the slogan administered by Dr. Vishwaraiah. ಡಾ. ವಿಶ್ವೇಶ್ವರಯ್ಯನವರ ಕಾಲದಿಂದ ಬಂದಿದೆ. ಈ ಕ್ರೆಡಿಬಿಲಿಟಿಯನ್ನು ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ ನಮ್ಮ ಹಿರಿಯರು ಬಹಳ ಕಷ್ಟದಿಂದ ಇಂತಹ ಒಂದು Rich heritage we have developed. They have left a great name. ಎನ್. ಆರ್. ಐ. ಇನ್‌ವೆಸ್ಟ್‌ಮೆಂಟ್ ಬಗ್ಗೆ ಇಲ್ಲಿ ಮತ್ತು ಹೊರಗೆ ಅನೇಕ ಹೇಳಿಕೆಗಳನ್ನು ತಾವು ಕೊಟ್ಟಿದ್ದೀರಿ. ಮೂರು ವಿಸಿಟ್ ಮಾಡಿದ್ದೀರಿ, ಒಂದು, ಎರಡು, ಮೂರು ಎಂದು, ಈ ಮೂರು ವಿಸಿಟ್‌ನಲ್ಲಿ ತಾವು ಎಷ್ಟು ಲೆಟರ್ ಆಫ್ ಇಂಟೆಂಟ್ಸ್ ಅಥವಾ ಇಂಡಸ್ಟ್ರಿಯಲ್ ಲೈಸೆನ್ಸ್ ಕೊಟ್ಟಿದ್ದೀರಿ, ಯಾವ ತಾರೀಖಿಗೆ ಕೊಟ್ಟಿದ್ದೀರಿ. ಇದರ ವಿವರವನ್ನು ತಾವು ದಯಮಾಡಿ ಒದಗಿಸಬೇಕು. ಏಕೆಂದರೆ ತಾವು ಕೆಲವು ಸಾರಿ ಹೇಳುತ್ತೀರಿ, Karnataka enjoys the fourth place in attracting N. R. I. investment. First is New Delhi second place goes to Maharashtra, third place is held by Andhra Pradesh and fourth place is jointly held by Gujarath and Karnataka, in attracting the N. R. I. investment. You say that 37 units have gone into product n ತಾವು ಯಾವ ತರಹ ಎನ್. ಆರ್. ಐ. ಆಕರ್ಷಣೆ ಮಾಡಿದ್ದೀರಿ ? ಕೈಗಾರಿಕೆ ಮಾಡಿದ್ದೀರಾ ? ಒಂದು ಆಸ್ಪತ್ರೆ ಕಟ್ಟಬೇಕೆಂದು ೩೦ ಕೋಟಿ ರೂಪಾಯಿಗಳ ಯೋಜನೆ ಬಂದಿದೆ. ಇದು ಆರೋಗ್ಯ ಸಚಿವರಿಗೆ ಸಂಬಂಧಪಟ್ಟಿದ್ದು. ಹಾಸ್ಪಿಟಲ್ ಮಾಡುವುದು ಒಂದು ಇಂಡಸ್ಟ್ರೀಸೇ ? Bangalore will be over-crowded becaus everybody will be attracted for a land or

site. ಹೆಬ್ಬಾಳದಲ್ಲಿ ಇವರಿಗೆ ಲ್ಯಾಂಡ್ ಕೊಟ್ಟಿದ್ದಾರೆ. ಆ ಆಸ್ಪತ್ರೆಗಳಿಗೆ ಬೆಂಗಳೂರು ಸುತ್ತಮುತ್ತ ಲ್ಯಾಂಡ್ ಕೊಟ್ಟಿದ್ದಾರೆ. ಆದರೆ ನನಗೆ ಗೊತ್ತು, ತಾವು ಹಾಸನಕ್ಕೆ ಏಕೆ ಕೊಡುವುದಿಲ್ಲ. When we were there, some body was prepared to go to Hassan. But we said "you cannot start anything there". Therefore Backward Development is absolutely necessary. N. R. I. Investment has been used as a method or trick to garb as much land as possible. This attempt is being made under the N R. I. Investment. ಬೆಂಗಳೂರು ಈಗಾಗಲೇ ಸಿಮೆಂಟ್ ಜಂಗಲ್ ಆಗಿದೆ. ಎನ್. ಆರ್. ಐ. ಇನ್‌ವೆಸ್ಟ್‌ಮೆಂಟ್ ಬಂದು ಇದ್ದ ಬೆಂಗಳೂರು ಕೂಡ ಹಾಳಾಗುತ್ತಿದೆ. ನೀವು ಬೆಂಗಳೂರು ನಗರವನ್ನು ಹಾಳು ಮಾಡುತ್ತಿದ್ದೀರಿ. ಇದರಿಂದ ಯಾರಿಗೂ ಪ್ರಯೋಜನ ಇಲ್ಲ. ಬೆಂಗಳೂರು ಜನ, ಬೆಂಗಳೂರು ನೆಲ, ಬೆಂಗಳೂರು ಸಂಪತ್ತನ್ನು ಉಪಯೋಗಿಸಬೇಕೆಂಬ ಅಂತರ ರಾಷ್ಟ್ರೀಯ ಮಾನವೀಯ ಚಿಂತನೆ ತಮಗೆ ಉದಯವಾಗಿದೆ. ಈಗ ಅಂತರರಾಷ್ಟ್ರೀಯ ಮಾನವೀಯ ವಿಚಾರ ಉದಯವಾಗಿದೆ. ಇದು ಬಹುಶಃ ಚಿಂತನ ಚಿಲುಮೆಯಲ್ಲಿ ಉದಯವಾಗಿರಬಹುದು, ಏತಕ್ಕೆಂದರೆ ಈಗ ಈ ಥಿಂಕ್ ಟ್ಯಾಂಕ್ ಹೊರಟು ಹೋಗಿದೆ. ಈ ಚಿಂತನೆಯು ಕೆರೆ ಹೊರಟು ಹೋಗಿದ್ದು ಈಗ ಹೊಸ ವಿಚಾರ ಉದಯವಾಗಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಈಗ ಸ್ವಲ್ಪ ಎಲಿವೇಟ್ ಆಗಿದ್ದಾರೆ. ವರ್ಲ್ಡ್ ಥಿಂಕ್ ಟ್ಯಾಂಕ್, ವರ್ಲ್ಡ್ ಹ್ಯುಮ್ಯಾನಿಸಂ ಬಂದಿದೆ. ಬೆಂಗಳೂರಿನಲ್ಲಿ ಇಡೀ ಪ್ರಪಂಚದ ರೋಗಿಗಳಿಗೆ ಆಸ್ಪತ್ರೆಯನ್ನು ಮಾಡತಕ್ಕಂಥಾದ್ದಕ್ಕೆ ಈ ಎನ್ ಆರ್. ಐ. ಇನ್‌ವೆಸ್ಟ್‌ಮೆಂಟ್ ಮಾಡಲಾಗುತ್ತಿದೆ. ಇದೂ ಬಹಳ ದೊಡ್ಡದೇ. ಇದರಿಂದ ರೋಗ ಹೆಚ್ಚು ಪ್ರಸಾರವಾಗುತ್ತದೋ ಅಥವಾ ಕಡಿಮೆಯಾಗುತ್ತದೋ ಗೊತ್ತಿಲ್ಲ. ಅಂತರ ರಾಷ್ಟ್ರೀಯ ರೋಗಗಳು ಎಂದರೆ ಬಹಳ ಹೆದರಿಕೆಯಾಗುತ್ತದೆ. ಏಡ್ಸ್ ಮತ್ತೊಂದು ಎಲ್ಲಾ ಇದೆ. ಇವುಗಳ ಪ್ರಸಾರಕ್ಕೆ ಬೆಂಗಳೂರು ಉಗಮ ಸ್ಥಾನವಾಗಬಾರದು. ಪಟೇಲರಿಗೆ ಇಚ್ಛೆ ಈ ಇರಲಿಕ್ಕಿಲ್ಲ ಎಂದು ನನಗೆ ಅನ್ನಿಸುತ್ತದೆ. ಇಂತಹ ಇನ್‌ವೆಸ್ಟ್‌ಮೆಂಟ್‌ನಿಂದ ಏನು ಪ್ರಯೋಜನ ? ಮೈಸೂರಿನಲ್ಲಿ ಆಸ್ಪತ್ರೆ, ಇಲ್ಲಿ ಆಸ್ಪತ್ರೆ ಎಂದರೆ, ಈ ವಿಚಾರ ಎಲ್ಲಿಗೆ ಬಂದಿದೆ ಎಂದರೆ, ಇದಕ್ಕಾಗಿ ಸ್ಕ್ವೇರ್ ಲ್ಯಾಂಡನ್ನು ಕೊಡತಕ್ಕ ಪ್ರಯತ್ನ ಕೂಡಾ ನಡೆದಿದೆ. ಎನ್. ಆರ್. ಐ. ಇನ್‌ವೆಸ್ಟ್‌ಮೆಂಟ್ ಲ್ಯಾಂಡ್ ಗ್ರ್ಯಾಂಟ್ ಮಾಡತಕ್ಕ ಪ್ರೋಸೆಸ್ ಆಗಿದೆ. ಎನ್. ಆರ್. ಐ. ಇನ್‌ವೆಸ್ಟ್‌ಮೆಂಟ್‌ನಲ್ಲಿ ಇದು ಆಗಬಾರದು. ಕರ್ನಾಟಕ ರಾಜ್ಯದ ಜನತೆಯ ಬಗ್ಗೆ, ಕರ್ನಾಟಕ ರಾಜ್ಯದ ಬೆಳವಣಿಗೆಯ ಬಗ್ಗೆ ಪ್ರಾಮಾಣಿಕವಾದ ಆಸಕ್ತಿ ತಮಗೆ ಇದ್ದರೆ let this N R. I Investment go to the backward area with a real industrial enterprise and not like trading in hospitals, buildings, and hotels etc, ಇದು ಬರೀ ಹಾಸ್ಪಿಟಲ್ ಬಿಲ್ಡಿಂಗ್‌ಗೆ ಸೀಮಿತವಾಗಿಲ್ಲ. ಈಗಾಗಲೇ ಹೋಟೆಲ್ಸ್ ಸಹ ಈ ಎನ್. ಆರ್. ಐ, ನಿಂದ ಮಾಡತಕ್ಕ ಪ್ರಯತ್ನ ನಡೆದಿದೆ. ಇದು ಒಂದು ಹೊಸ ಜಾಲ, ಈ ಒಂದು ಹೊಸ ಜಾಲ ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನ ಸುತ್ತ ಮುತ್ತ ನಡೆಯುತ್ತಿದೆ ಎಂದರೆ N. R. Is. are also attracted by the Co-operative Housing Societies. ಈಗಾಗಲೇ ಇರತಕ್ಕಂಥ ಹೌಸಿಂಗ್ ಕೋ ಆಪರೇಟೀವ್ ಸೊಸೈಟೀಸ್ ಲ್ಯಾಂಡ್ ಗ್ರ್ಯಾಂಟ್ ಮಾಡುವುದು ಮಾತ್ರವಲ್ಲ ಜನರ ಸುಲಿಗೆ ಶೋಷಣೆ ಮಾಡುತ್ತಿವೆ. ಕಪ್ಪು ಹಣದ ಜಾಲ ಇವತ್ತು ಇವುಗಳ ಮೂಲಕ ಹರಡುತ್ತಿದೆ. ಎನ್. ಆರ್. ಐ. ನವರನ್ನು ಕರೆತಂದು, ಕೋ-ಆಪರೇಟೀವ್ ಹೌಸಿಂಗ್ ಸ್ಕೀಮ್ ಮಾಡಿ, ಅದರ ಮೂಲಕ ನೂರಾರು ಎಕರೆ ಜಾಗವನ್ನು ಕೊಟ್ಟು ಹಾವಳಿ ಮಾಡಲಿಕ್ಕೆ ಅವಕಾಶ ಕೊಟ್ಟರೆ, ಇವತ್ತು ತಾವು ಖಂಡಿತವಾಗಿ ಈ ರಾಜ್ಯವನ್ನು ಉಳಿಸತಕ್ಕ ದಾರಿ ಕಾಣಿಸುತ್ತಿಲ್ಲ. ಇದು ಈ ರಾಜ್ಯವನ್ನು ನಾಶ ಮಾಡತಕ್ಕ ದಾರಿಯೇ ಹೊರತು ಬೇರೆ ಏನೂ ಅಲ್ಲ. ಇಂತಹ ಎನ್. ಆರ್. ಐ ಬರುವುದು ಇದ್ದರೆ ಖಂಡಿತವಾಗಿ ನಮಗೆ ಬೇಡ. ದಯವಿಟ್ಟು ತಾವು ಅವರಿಗೆ ಹೇಳಬೇಕು. ನಿಜವಾಗಿ ರಾಜ್ಯದ ಇಂಟರೆಸ್ಟ್ ತಮಗೆ ಇದ್ದರೆ ತಾವು ಅವರಿಗೆ ಹೇಳಿಬಿಡಿ it will touch upon 300 crores ಇನ್ನು ಕ್ಯಾಪ್ಟೀವ್ ಪವರ್ ಜನರೇಷನ್‌ಗೆ ಅವರು ಇನ್‌ವೆಸ್ಟ್ ಮಾಡುತ್ತಾರೆಯೇ? What steps have been taken about Captive Power Investment ? ಏತಕ್ಕೆಂದರೆ ತಮ್ಮ ಬಜೆಟ್‌ನಲ್ಲಿ ಈ ಕ್ಯಾಪ್ಟೀವ್ ಪವರ್ ಯೂನಿಟನ್ನು ಎನ್. ಆರ್. ಐ. ನವರು ಮಾಡುತ್ತಾರೆ ಎಂದು ಹೇಳಿಲ್ಲ. ತಮ್ಮ ಬಜೆಟ್

ಭಾಷಣದಲ್ಲಿ ಇದು ಇಲ್ಲ. ಇದರ ಬಗ್ಗೆ ತಮ್ಮ ಹೇಳಿಕೆ ಇಲ್ಲ. ಸೂಪರ್ ಪವರ್ ಥರ್ಮಲ್ ಪ್ಲಾಂಟ್ ಏನು ಬರುತ್ತಿದೆ it is coming under the Central and State Sector, not as a Captive Unit of the Private Sector. ತಾವು ಇದಕ್ಕೆ ೭೦ ಪರ್ಸೆಂಟ್ ಈಕ್ವಿಟಿ ಹಣ ಕೊಡಲು ಮುಂದೆ ಬರತಕ್ಕಂಥ ಪ್ರಪೋಸಲ್ ಇದೆ ಎಂದು ನಾನು ಕೇಳಿದ್ದೇನೆ. ಅದೇನಾದರೂ ಇದ್ದರೆ ತಾವು ಹೇಳಬೇಕು. We welcome such proposals. We welcome any such Power projects you will have to come out with your reply if there are any such projects. ಆದರೆ in the name of N.R.I, ಇಂತಹ ಮೊಸಳೆಗಳು ಬಂದು ಕರ್ನಾಟಕ ರಾಜ್ಯದ ಜನರ ಕಾಲೆಳೆಯುವುದಕ್ಕೆ ಪ್ರಯತ್ನ ಮಾಡತಕ್ಕಂಥ ಜಾಲವನ್ನು ಮಾಡಿದ್ದರೆ ಅದು ಸರಿಯಲ್ಲ. ಈಗ ಇದೇ ಕಾಣುತ್ತಿದೆ. ಇದನ್ನು ಸಂಪೂರ್ಣವಾಗಿ ನಿಲ್ಲಿಸತಕ್ಕಂಥ ಒಂದು ಪ್ರಯತ್ನ ಮಾಡುವುದು ಒಳ್ಳೆಯದು. ತಾವು ನಮಗೆ ಹೇಳಬೇಕು ಈ

೨.೩೦ ಪಿ. ಎಂ.

ಎನ್.ಆರ್.ಐ ಗಳು ಬ್ಯಾಕ್‌ವರ್ಡ್ ಡಿಸ್ಟ್ರಿಕ್ಟ್. ಇಂಡಸ್ಟ್ರಿಗಳಿಗೆ ಸರಿಯಾಗಿ ಹಣವನ್ನು ಒದಗಿಸಿದ್ದೀರಾ ಇದನ್ನು ಸ್ಪಷ್ಟವಾಗಿ ತಾವು ಹೇಳಬೇಕು. ತಾವು ಹೇಳಿಕೆ ಕೊಡತಕ್ಕಂಥ ಅವಶ್ಯಕತೆ ಇದೆ. ಇನ್ನು ಕೈಗಾರಿಕೆಗಳು ಇವತ್ತು ಯಾವ ಒಂದು. again coming back to I have just forgotten in centrally sponsored power projects, for example, Kaiga, ಸೆವೆಂತ್ ಫೈವ್‌ಇಯರ್ ಪ್ಲಾನ್‌ನಲ್ಲಿ ಅಡ್ವಾನ್ಸ್ ಆಗಿ ತೆಗೆದುಕೊಂಡು ಡಿಮೆನ್ಸ್ ಮಾಡಬೇಕಾಗಿತ್ತು. There is a provision, Even there is a provision for super thermal plant. ಕೈಗಾಗೆ ಅವರು ಒದಗಿಸಿದಂತಹ ಹಣವನ್ನು ನೋಡಿಕೊಂಡು ಆದಷ್ಟು ಬೇಗ ಸರಿಯಾದ ವಾತಾವರಣ ಕಲ್ಪಿಸಿಕೊಂಡು ಕೈಗಾ ಯೋಜನೆಯನ್ನು ಮುಂದುವರಿಸುವಂತೆ ಮಾಡುವ ಬದಲು ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಪ್ರಧಾನ ಮಂತ್ರಿಗಳಿಗೆ ಕಾಗದ ಬರೆಯುತ್ತಾರೆ. ಅದೇನೆಂದರೆ ಇದರ ಬಗ್ಗೆ ರಾಷ್ಟ್ರೀಯ ಡಿಬೇಟ್ ಆಗಬೇಕು, ಅವರು ಬರೆದಂತಹ ಪತ್ರಗಳನ್ನು ಹೇಳಿಕೆಗಳನ್ನು ನೋಡಿದರೆ ನ್ಯಾಷನಲ್ ಡಿಬೇಟ್ ಆಗುವವರೆಗೂ ಈ ಕೈಗಾ ಯೋಜನೆ ಮುಂದಕ್ಕೆ ಹೋಗಬಾರದು, ಇದನ್ನು ತಡೆಯಬೇಕು ಎಂದು to that extent his letter to the Prime Minister. ಹಾಗಾದರೆ ಕೇಂದ್ರ ಸರ್ಕಾರ ಇನ್‌ವೆಸ್ಟ್‌ಮೆಂಟ್ ಮಾಡಬೇಕೆಂದು ಹೇಳುತ್ತಾರೆ. ಇಲ್ಲಿ ಅವರು ಈ ರೀತಿ ಹೇಳಿದರೆ ಅದು ಯಾವ ರೀತಿ ಚಲಿಸುವುದಕ್ಕೆ ಸಾಧ್ಯವಿದೆ. ಯಾವ ರೀತಿ ಮುಂದುವರಿಸುತ್ತಾರೆ? ಅವರು ಯೋಜನೆಯನ್ನು ಮುಂದುವರಿಸಿಕೊಂಡು ಹೋದರೆ ಆಗ ಸೆಂಟ್ರಲ್ ಇನ್‌ವೆಸ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. You should have said, "Yes We welcome that." Atomic Energy Commission Chairman Mr. M. R. Srinivasan is one person. Even when I was small scale Industries Minister ಆವಾಗ ಅವರು ಡೈರೆಕ್ಟರ್ ಆಗಿದ್ದರು. ೧೯೭೪–೭೫ರಲ್ಲಿ ಅವರು ಹೇಳಿದ್ದರು ನನಗೆ. He was very anxious to bring a nuclear project here. ಈಗ ಅವರು ಇತ್ತೀಚೆಗೆ ಒಂದು ಹೇಳಿಕೆ ಕೂಡ ಕೊಟ್ಟು ಕೆಮಿಕಲ್ ಇಂಡಸ್ಟ್ರಿಗಳಲ್ಲಿ ಸಾವು ನೋವುಗಳಾಗುತ್ತವೆ. This is nothing. In Chernobyl accident 30/40 people died whereas in Bhopal because of the Chemical industry we lost 300 to 400 lives. ಇದರ ಬಗ್ಗೆ ಡಿಬೇಟ್ ಮಾಡುವಂತಹ ಪಾಯಿಂಟ್ ಏನಿದೆ? ಪ್ರತಿಯೊಂದು ರಾಜ್ಯ ಸರ್ಕಾರಗಳು ಇವತ್ತು ಬೇಕೆಂದು ಬೇಡಿಕೆ ಕೊಡುವಾಗ ಇಲ್ಲಿ ಮುಖ್ಯಮಂತ್ರಿಗಳು ಹೇಳಿಕೆ ಕೊಡುತ್ತಾರೆ. ಅವರಿಗೆ ರಾಜಕೀಯ ಮಾಡಬೇಕು ರಾಜಕೀಯ ಕರ್ನಾಟಕದ ಹಿತಾಸಕ್ತಿಯಲ್ಲ. ಆದರೂ ರಾಜಕೀಯ ಮಾಡುತ್ತಿದ್ದಾರೆ. ಅವರು ಕಾರವಾರಕ್ಕೆ ಹೋದಾಗ ಭಾಷಣ ಕೊಡಬೇಕು. ಇದು ಭಾಷಣದ ಒಂದು ವಸ್ತು ಆಗಬೇಕು. ಈ ಭಾಷಣದ ವಸ್ತು ಪಿಶಾಚಿ ಮನೋವೃತ್ತಿ ಏನಿದೆ ಇದು ಕರ್ನಾಟಕವನ್ನು ಬಲಿ ತೆಗೆದುಕೊಳ್ಳುತ್ತದೆ. ಕರ್ನಾಟಕದ ಭವಿಷ್ಯವನ್ನು ಬಲಿ ತೆಗೆದುಕೊಳ್ಳತಕ್ಕ ಒಂದು ಪ್ರಯತ್ನ ಇವತ್ತು ನಡೆದಿದೆ. ಕರ್ನಾಟಕ ರಾಜ್ಯದಲ್ಲಿ nuclear power project and even regarding super thermal plant ಈ ಬಗ್ಗೆ ಕಟು ನಿರ್ಧಾರ ಮಾಡಬೇಕು.

At least you must fix 1000 MW minimum. ಮೊನ್ನೆ ಎರಡು ಮೂರು ದಿವಸಗಳ ಹಿಂದೆ ನಾನು ದೆಹಲಿಗೆ ಹೋಗಿದ್ದೆ. ಅಲ್ಲಿ ಯಾರೂ ಪ್ಲೆಜರ್ ಹಾಕಿಲ್ಲ, ಪ್ಲೇಜರ್ ನೀವು ಹಾಕಿದರೆ ನಾವು ಪ್ಲೇಜರ್ ಹಾಕುತ್ತೇವೆ. Suppose you have a 1000 MW, at least after 5/6 years Karnataka can be relieved to a greater extent. There is a provision in the 7th Five year Plan. It should be cleared. ನಾವು ಇವತ್ತು ನೂರು ಎಕರೆ ಇನ್ನೂರು ಎಕರೆ ಮುನ್ನೂರು ಎಕರೆ ಜಾಗ ಕೊಡಲಿಲ್ಲ Saying that there should be a National Debate, if your Chief Minister is going to have a demagogic approach, Karnataka will not deserve such projects. ಇಂತಹ ಸಣ್ಣ ಮಟ್ಟದ ರಾಜಕೀಯ ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಮಾಡಬಾರದು ಅದಕ್ಕೆ ನಾನು ಹೇಳುತ್ತೇನೆ ಮಾನ್ಯ ಅಧ್ಯಕ್ಷರೇ ಎಷ್ಟು ನಷ್ಟವಾಗುತ್ತದೆ. ಇದು ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳ ಪ್ರಾಜೆಕ್ಟ್. Please investigate ಮಂತ್ರಿಗಳು ವಿಚಾರ ಮಾಡಿ. The navy wanted to have a very important project in Mangalore with Rs. 2000 crore investment. ಸೀ ಬರ್ಡ್ ಬಂದರೆ ಪ್ರತಿಭಟನೆ ಇದೆ. ಕೈಗಾ ಬಂದರೆ ಪ್ರತಿಭಟನೆ ಇದೆ. ಸೂಪರ್ ಥರ್ಮಲ್ ಪ್ಲಾಂಟ್ ಬಂದರೆ ಪ್ರತಿಭಟನೆ ಇದೆ.

Government did not assert their will to invite such a project. ಇವತ್ತು ಕೇರಳಾದ ಪೈಯನೂರಿಗೆ 2 ಸಾವಿರ ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಹೋಗಿದೆ ನಿಮ್ಮ ಕೈಯಲ್ಲಿ ಯಾವ ಪ್ರಾಜೆಕ್ಟನ್ನು ಮಾಡುವುದಕ್ಕೆ ಸಾಧ್ಯವಿಲ್ಲ. Rs. 2000 crore project we have lost for the fault of Karnataka. Karnataka has practically become untouchable because of the weaknesses and because of the attitude because you are interested not in the development but only politicizing issues. ಇವತ್ತು ಮಂಗಳೂರು ರೀಫೈನರಿ ಬಗ್ಗೆ ತಾವು ಹೇಳುತ್ತೀರಿ. ಏಕೆಂದರೆ, ನಿಮಗೆ ಮಾತನಾಡುವುದಕ್ಕೆ ಅದು ಒಂದು ವಸ್ತುವಾಗಿದೆ. ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ತಾವು ಹೇಳುತ್ತೀರಿ. ಅದೂ ಸಹ ನಿಮಗೆ ಮಾತನಾಡುವುದಕ್ಕೆ ಒಂದು ವಸ್ತುವಾಗಿದೆ. ಮಂಗಳೂರು ರೀಫೈನರಿ ಬಗ್ಗೆ ತಾವು ಮುಂದೆ ಹೋಗಿ ಕೆಲಸ ಮಾಡಿದ್ದಿದ್ದರೆ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಕ್ಲಿಯರ್ ಆಗುತ್ತಿತ್ತು. ಆಮೇಲೆ ವಿಜಯನಗರ ಸ್ಟೀಲ್ ಪ್ಲಾಂಟ್ ಏಕೆ ಆಗಲಿಲ್ಲವೆಂದು ಕೂಡ ತಮಗೆ ಗೊತ್ತಿದೆ. ಏಕೆಂದರೆ, ಎಲ್ಲಾ ಲ್ಯಾಂಡ್ ಅಕ್ವೈರ್ ಮಾಡಿ ಸಿದ್ಧತೆಯನ್ನು ಮಾಡಿಯಾದ ಮೇಲೆ ತಮ್ಮ ಜನತಾ ಸರ್ಕಾರ ಬಂತು. Otherwise it would have been immediately followed with sanction. George Fernandez came to Mangalore and said, 'I am not going to have Vijayanagar Plant. I am going to have only coastal plant:' The first culprit who has given a fatal blow to Vijayanagar is none other than Mr. George Fernandez, your own man. Thereafter...

SRI VEDANTHA HEMMIGE.—George Fernandez is not here,

(INTERRUPTION)

ಶ್ರೀ ವೇದಾಂತ ಹೆಮ್ಮಿಗೆ.—ಜಾರ್ಜ್ ಫರ್ನಾಂಡೀಸರ ಬಗ್ಗೆ ತಾವು ಮಾತನಾಡಬಾರದು.

ಉಪಾಧ್ಯಕ್ಷರು.—ಅವರು ಯೀಲ್ಡ್ ಆಗಿಲ್ಲ.

ಶ್ರೀ ಬಾಬುರೆಡ್ಡಿ ವಿ, ತುಂಗಳ್.—ಅವರು ಈ ಸದನದಲ್ಲಿ ಇಲ್ಲ, ಅವರು ಡಿಫೆಂಡ್ ಮಾಡುವುದಕ್ಕೆ ಆಗುವುದಿಲ್ಲವಾದ್ದರಿಂದ ಅವರ ಹೆಸರನ್ನು ಇಲ್ಲಿ ತರಬಾರದು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಜಾರ್ಜ್ ಫರ್ನಾಂಡೀಸ್‌ರವರು ಇಂಡಸ್ಟ್ರೀಸ್ ಮಿನಿಸ್ಟರ್ ಆಗಿದ್ದಾಗ ಏನು ಮಾಡಿದ್ದಾರೆಂದು ಅವರು ಹೇಳುತ್ತಿದ್ದಾರೆ. ಅವರು ಹೇಳಲಿ. ಜಾರ್ಜ್ ಫರ್ನಾಂಡೀಸ್‌ರವರು ಏನು ಮಾಡಿದ್ದಾರೆ, ವಿಜಯನಗರ ಸ್ಟೀಲ್ ಪ್ಲಾಂಟ್ ಏಕೆ ಆಗಲಿಲ್ಲ ಎಂಬುದನ್ನು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾರ ರೋಲ್ ಹೇಗಿರುತ್ತದೆಂದು ಹೇಳಿದ್ದೇನೆ. ಯಾರದು ರೋಲ್ ಇದರಲ್ಲಿ ಇದೆ ಎಂಬುದಕ್ಕಾಗಿ ಇದನ್ನು ಹೇಳಿದೆ ಅಷ್ಟೆ. Aftet all land was acquired. Everything was done. At that particular moment Janata Government came. The marketing problem came. ಅನೇಕ ಸಮಸ್ಯೆಗಳು ಇದರಲ್ಲಿ ಬಂದವು. ವಿಜಯನಗರ ಸ್ಟೀಲ್ ಪ್ಲಾಂಟ್ ಆಗುತ್ತದೆಂದು ನನಗೆ ಭರವಸೆ ಇದೆ. ಇವತ್ತಲ್ಲ ನಾಳೆ ವಿಜಯನಗರ ಸ್ಟೀಲ್ ಪ್ಲಾಂಟ್ ಆಗಿಯೇ ಆಗುತ್ತದೆ. Vijayanagar Steel plant will be realised. ಆದರೆ ತಮ್ಮ ಬಾಯಿ ಸುಮ್ಮನೆ ಇರುವುದಿಲ್ಲ. ನಿಮ್ಮಲ್ಲಿ ಪವರ್ ಇಲ್ಲ. ವೀಲ್ ಅಂಡ್ ಆ್ಯಕ್ಸಲ್‌ನವರೇ ಇದರ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಪವರ್ ಇಲ್ಲದಿದ್ದರೆ they have reached the optimum production. ಆಮೇಲೆ ವಿ.ಐ.ಎಸ್.ಎಲ್. ಬಗ್ಗೆ ಕೇಂದ್ರ ಸರ್ಕಾರ they gave several alternative proposals. Rs. 50 crore ವರ್ಕಿಂಗ್ ಕ್ಯಾಪಿಟಲ್ ಕೊಡುತ್ತೇವೆ ಈ ಕೈಗಾರಿಕೆಯನ್ನು ನಡೆಸಿ ಎಂದು ಹೇಳಿದ್ದರು. ಕರ್ನಾಟಕ ರಾಜ್ಯದ ಪ್ರತಿಷ್ಠೆಯ ಕೈಗಾರಿಕೆ ಯಾವುದು ಇದೆಯೋ ಅದನ್ನು ನಡೆಸುವುದಕ್ಕೆ ನಾವು ಸಿದ್ಧರಿಲ್ಲವೆಂದು ನೀವು ಕ್ಯಾಟಗಾರಿಕಲ್ ಆಗಿ ಹೇಳಿದ್ದೀರಿ, ನನಗನಿಸಿದ ಪ್ರಕಾರ ಕೇಂದ್ರ ಸರ್ಕಾರವು ಇನ್ನು ಸ್ವಲ್ಪ ದಿನಗಳಲ್ಲೇ ಈ ಕೈಗಾರಿಕೆಯನ್ನು ವಹಿಸಿಕೊಳ್ಳುವ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಕೇಂದ್ರ ಸರ್ಕಾರ ತೆಗೆದುಕೊಳ್ಳುತ್ತದೆಂದು ಆಸೆಯನ್ನು ಸಹ ನಾನು ಇಟ್ಟುಕೊಂಡಿದ್ದೇನೆ. ಮತ್ತು ಆ ಭರವಸೆ ನನ್ನಲ್ಲಿ ಇದೆ. ಇವತ್ತು ಅನೇಕ ಪಬ್ಲಿಕ್ ಸೆಕ್ಟರ್ ಕೈಗಾರಿಕೆಗಳು ಇವೆ, ನಾನು ಅವುಗಳ ಬಗ್ಗೆ ಬಹಳ ವಿಶ್ಲೇಷಣೆ ಮಾಡಿದರೆ ಹೆಚ್ಚು ಸಮಯ ಹಿಡಿಯುತ್ತದೆ. ಆದರೆ, ಕೆಲವೇ ಕೈಗಾರಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗ ತಾವು ಈ Technocrats and professionals ಏನಿದ್ದಾರೆ, ಅವರೊಂದು ವರದಿಯನ್ನು ಕೊಟ್ಟಿದ್ದಾರೆ. ಈಗಾಗಲೇ ಈ ಸದನದಲ್ಲಿ ಅದನ್ನು ಕೊಟ್ಟಿದ್ದಾರೆ. ನಾನು ಅದನ್ನು ಪುನಃ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸನ್ನು ಸ್ಥಾಪನೆ ಮಾಡಿದಂಥ ಮುಖ್ಯವಾದ ಉದ್ದೇಶ ಏನಿತ್ತು ಅಂದರೆ, Technocrats and professionals ಸಂಬಂಧಪಟ್ಟಂತೆ, ಅದರದ್ದು ಒಂದು ಕೇಡರ್ ಮಾಡಬೇಕು ಎಂದು ತಾವು ಹೇಳಿಕೆಯನ್ನು ಕೂಡ ಕೊಟ್ಟಿದ್ದೀರಿ. ಆದರೆ ಇವೊತ್ತು either they have been shunted out from the public sector or they are going on their own. ಎಲ್ಲರೂ ಕೂಡ ಒಬ್ಬೊಬ್ಬರಾಗಿ ಹಿಂದೆ ಹೋಗುತ್ತಾ ಇದ್ದಾರೆ. ಏಕೆಂದರೆ ನೀವು ಅವರನ್ನು humiliate ಮಾಡುತ್ತಾ ಇದ್ದೀರಿ, ಅದು ನಿಮಗೆ ಬೇಕಾಗಿಲ್ಲ, ಏಕೆಂದರೆ, you do not want to run these public sectors on professional lines. ಈಗ ಐ.ಎ.ಎಸ್. ಅಧಿಕಾರಿಗಳು ಯಾರಿದ್ದಾರೆ ಅವರಿಗೆ ಅಡ್ಮಿನಿಸ್ಟ್ರೇಟಿವ್ ಕೆಪಾಸಿಟಿ ಇಲ್ಲ ಎಂದು ಅಲ್ಲ. ಕೆಲವರು ಬಹಳ ಚೆನ್ನಾಗಿ ನಡೆಸುತ್ತಾರೆ. ಆದರೆ nothing like professional management by technocrats. ಇವೊತ್ತು ಆ ದಾರಿಯನ್ನು ಬಿಟ್ಟು ನಾವು ದೂರ ಹೋಗುತ್ತಾ ಇದ್ದೇವೆ. ಈ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರಿಯಲ್ಲಿ ಅನೇಕ ಕೈಗಾರಿಕೆಗಳು ಅತ್ಯಂತ ನಷ್ಟದಲ್ಲಿ ನಡೆಯುತ್ತಾ ಇವೆ. ಕೆಲವು ಕೈಗಾರಿಕೆಗಳನ್ನು ಬಿಟ್ಟು ಬಾಕಿ ಎಲ್ಲಾ ಇವೊತ್ತು ನಷ್ಟದಲ್ಲಿ ಇವೆ ಈಗ ಸೋಪ್ ಫ್ಯಾಕ್ಟರಿ ಬಗ್ಗೆ ತಾವು ಹಲವಾರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಈಗ ಪರಿಸ್ಥಿತಿ ಏನಾಗಿದೆ ಅಂದರೆ, ಆ ಫ್ಯಾಕ್ಟರಿ ಮುಚ್ಚುವ ಪರಿಸ್ಥಿತಿಗೆ ಬಂದಿದೆ. ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ ಮೈಸೂರಿನದ್ದು ಮುಚ್ಚಿ ಹೋಯಿತು. ಈ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ನ್ಯಾಚುರಲ್ ಸ್ಯಾಂಡಲ್ ಆಯಿಲ್‌ಗೆ ಸಿಂಥೆಟಿಕ್ ಉಪಯೋಗ ಮಾಡಿ ಸ್ಯಾಂಡಲ್ ಆಯಿಲ್ ಉಪಯೋಗ ಮಾಡಬಹುದು. ಈಗ ಸ್ಪೆಶಲ್ ಸ್ಯಾಂಡಲ್ ಸೋಪ್‌ಗೆ ೩೦ ಪರ್ಸೆಂಟ್‌ನಷ್ಟು ನ್ಯಾಚುರಲ್ ಆಯಿಲ್ ಉಪಯೋಗ ಮಾಡಬೇಕಾಗುತ್ತದೆ. ಯಾವಾಗಲೂ ಕೂಡ per 100 Kg of soap ordinary sandal around 30% natural oil in perfume compound.

ಹೀಗಿರುವಾಗ, ಸ್ಯಾಂಡಲ್ ಆಯಿಲ್ ಫ್ಯಾಕ್ಟರಿಯನ್ನು ಮುಚ್ಚಿದ್ದಾರೆ. ಮೈಸೂರು ಸ್ಯಾಂಡಲ್ ಸೋಪ್‌ನ ಗತಿ ಏನಾಗಿದೆ ? Are you using only synthetic ? What will happen to their quality. ಅದನ್ನು ಮಾತ್ರ ಉಪಯೋಗ ಮಾಡುತ್ತಾ ಇದ್ದೀರಿ. ಈ ಪ್ರೊಡಕ್ಷನ್ ಎಕ್ಸ್‌ಪಾನ್‌ಷನ್ ಆಯಿತು. ಈಗ ೧೯೮೫–೮೬ರಲ್ಲಿ ಒಟ್ಟಿಗೆ ೩೭.೩೭ ಕೋಟಿ ಪ್ರಾಡಕ್ಷನ್

ಆಗಿದೆ. ಇನ್ನು, ೧೯೮೬–೮೭ ರಲ್ಲಿ ೬೮.೩೦ ಕೋಟಿ as against the projected figure of 56 90 crore. ಬಹುಶಃ ತಾವೇ ಇಲ್ಲಿ ಹೇಳಿಕೆ ಕೊಟ್ಟಿದ್ದೀರಿ. ಆ ಸಂದರ್ಭದಲ್ಲಿ ಇದು ಫುಲ್ ಕ್ಯಾಪಾಸಿಟಿ ಉಪಯೋಗ ಮಾಡುತ್ತಿ. ಮತ್ತು growth rate which is established by the Karnataka Sandal Wood factory is the highest in the soap industry either in the public sector or in the private sector ತಾವೇ ಇಲ್ಲಿ ಹೇಳಿಕೆಗಳನ್ನು ಕೊಟ್ಟಿದ್ದೀರಿ. ಹೀಗಿರುವಾಗ every month it is losing about 80 lakhs of rupees ಏಕೆ ಬರಬೇಕು ಇದು. ಏಕೆಂದರೆ ಪ್ರೊಫೆಷನಲ್ ಮ್ಯಾನೇಜ್‌ಮೆಂಟ್ ಅಲ್ಲಿ ಶಿಥಿಲಗೊಂಡಿದೆ. ನೀವು ಯಾರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. but not at the cost of the factory. which was coming up very well. ಇಂತಹ ಫ್ಯಾಕ್ಟರಿಯನ್ನು ನಿಮ್ಮ ಥಿಂಕ್ ಟ್ಯಾಂಕಿನ ಯಾರಿಗೆ ಇದನ್ನು ಮಾಡಬೇಕೆಂದು ಅನ್ನಿಸಿ ವರದಿ ಕೊಟ್ಟರೋ ಅದರ ಬಗ್ಗೆ ನಾವು ರೈಸ್ ಮಾಡಿದಾಗ ನೀವು ಇಲ್ಲ ಎಂದಿದ್ದೀರಿ ಬಹುಶಃ ಅದು ನಷ್ಟದಲ್ಲಿ ನಡೆಯುವ ಮೊದಲು of course, we raised the issue when it was running at a peak, suggestion to sell away to Multinational company ಆಗಲೇ ನಾನು ಎಚ್ಚರಿಕೆ ಕೊಟ್ಟೆ ಏನೋ ನಡೆದಿದೆ ಎಂದು Immediatly the whole thing came to a halt. ಈಗ ಏನಾಗಿದೆ ಎಂದರೆ ನಿಜವಾಗಿ ಮಾಡಬೇಕಾದ ಪರಿಸ್ಥಿತಿಗೆ ತಂದುಬಿಟ್ಟಿದ್ದೀರಿ. The man in the Think Tank who recommended that it should be sold away to a Multinational company must have been a good astrologer or he wanted that this to reach this stage to it. ಇಂತಹ ಒಂದು ಅತ್ಯುತ್ತಮವಾದ ಫ್ಯಾಕ್ಟರಿಯನ್ನು ಈ ಹಂತಕ್ಕೆ ತಂದುಬಿಟ್ಟಿದ್ದೀರಿ. ಅದರಲ್ಲಿ ಕೆಲವು ವಾದವೇನೆಂದರೆ ಎಂ. ಎಸ್. ಐ. ಎಲ್. ನವರು ಮಾರಬಾರದು ಅಥವಾ ಮಾರಬೇಕು, ಪುನಃ ತಾವು ನಿರ್ಣಯ ತೆಗೆದುಕೊಂಡು ೬೦ ಪರ್ಸೆಂಟನ್ನು ಎಂ. ಎಸ್. ಐ ಎಲ್. ನವರು ಮಾಡಬಹುದು, ಇನ್ನು ೪೦ ಪರ್ಸೆಂಟನ್ನು ನೇರವಾಗಿ ಸೋಪ್ ಫ್ಯಾಕ್ಟರಿಯೇ ಮಾರಲಿ Employees have taken the issue to the street. ಭಾಷಣಗಳಲ್ಲಿ ಚರ್ಚೆಗಳಲ್ಲಿ ರೋಡ್ ಮೀಟಿಂಗ್‌ಗಳಲ್ಲಿ the future of the soap factory will be decided.. ಪ್ರೊಫೆಷನಲ್ ಮ್ಯಾನೇಜ್‌ಮೆಂಟ್ ಬೇಡ. ಈ ಪರಿಸ್ಥಿತಿಯಲ್ಲಿ ಯಾವ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರಿ ಕೂಡ ನಡೆಯುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ಇದನ್ನು ತಾವು ಪರಿಶೀಲನೆ ಮಾಡಬೇಕು. ಇದೇ ಪರಿಸ್ಥಿತಿಯನ್ನು ಬಿಟ್ಟರೆ ಕೆ. ಎಸ್. ಡಿ. ಎಲ್. ಖಂಡಿತವಾಗಿ ಥಿಂಕ್‌ಟ್ಯಾಂಕ್‌ನವರು ಏನು ರೆಕಮೆಂಡ್ ಮಾಡಿದ್ದಾರೋ ಅದನ್ನೇ ಮಾಡಬೇಕಾಗುತ್ತದೆ. You will be driven to that stage.

ಶ್ರೀ ಕೆ. ಹೆಚ್. ಪಾಟೀಲ್.— ಈ ಸೋಪ್ ಫ್ಯಾಕ್ಟರಿಯೊಳಗೆ ಕೆಲವರು ಅನುಭವಿಕರನ್ನು ಸಸ್ಪೆಂಡ್‌ಗೊಳಿಸಿ ಅವರ ಮೇಲೆ ಆಪಾದನೆ ಇದೆ ಎಂದು ದೊಡ್ಡ ಆಫೀಸರನ್ನು ಹಾಕಿದಿರಿ ಏಕೆಂದರೆ ಸರ್ಕಾರದವರು ಪದ್ಧತಿಯಂತೆ ಎನ್‌ಕ್ವಯರಿ ಮಾಡಬೇಕು. ೬ ತಿಂಗಳು ಕಳೆದರೂ ಕೂಡ ಅವರಲ್ಲಿ ಇನ್ನು ಕೆಲಸಗಳನ್ನು ಸಸ್ಪೆನ್ಸ್‌ಷನಲ್ಲೇ ಇಟ್ಟು ಸರ್ಕಾರದ ಪ್ರಕಾರ ಹೋಗಿದ್ದು ಕೆಲಸವೂ ಆಗುತ್ತಿಲ್ಲ. ಎರಡನೆಯದನ್ನು ಕೆಲವು ಸ್ನೇಹಿತರು ಎಂ. ಎಸ್. ಐ. ಎಲ್.ಗೆ ಏನು ಸೆಲ್ಲಿಂಗ್ ಏಜೆನ್ಸಿ ಕೊಟ್ಟಿ

ಒಳ್ಳೆಯದೆಂದು ನನಗನ್ನಿಸುತ್ತದೆ. ಕೆ.ಎಸ್.ಐ.ಐ.ಡಿ.ಸಿ. ವತಿಯಿಂದ ಷೆಡ್ ಕಟ್ಟಿ ಸಣ್ಣ ಕೈಗಾರಿಕೆಗಳನ್ನು ಡೆವಲಪ್ ಮಾಡಬೇಕು. ೧೯೮೭–೮೮ ರಲ್ಲಿ ಷೆಡ್ ಕಟ್ಟತಕ್ಕಂತಹ ಕಾರ್ಯಕ್ರಮ ಏನೂ ಇಲ್ಲ. In 1986-87 your programme was only for 188 sheds. In 1985-86 your programme was to construct only 148 sheds. You can rather wind it up. ಷೆಡ್ ಕಟ್ಟತಕ್ಕಂತಹ ಕಾರ್ಯಕ್ರಮವಿಲ್ಲ. For the first time, it has landed in loss. ಈ ರೀತಿಯಾದರೆ ಇಂತಹ ಸಂಸ್ಥೆ ಏಕೆ ಇರಬೇಕು. The KSIIDC have to deal with raw materials. They do not do it. They have to construct sheds. ಅದನ್ನು ಮಾಡುತ್ತಿಲ್ಲ. ಆ ಪ್ರೋಗ್ರಾಮ್ ನಡೆಯುತ್ತಿಲ್ಲ ಹಾಗಾದರೆ ಅದು ಏಕೆ ಇರಬೇಕು. ಷೆಡ್ ಕಟ್ಟತಕ್ಕಂಥಾದ್ದಕ್ಕೆ ಇಂಜಿನಿಯರ್ಸ್ ಮಂಂತಾದವರಿದ್ದಾಗ, ಇದನ್ನು ಕಟ್ಟಲಿಕ್ಕೆ ಪ್ಯಾರಾ ಫರ್ನೇಲಿಯಾ ಏಕೆ ಬೇಕು. That means the Government has come to a stand-still. ಇದೊಂದು ನಿದರ್ಶನ. ಇದು ಬಹಳ ಆತ್ಯುತ್ತಮವಾದ ಸಂಸ್ಥೆ ಈಗ ಅದೂ ಕೂಡ ನಿಂತು ಹೋಗುವ ಪರಿಸ್ಥಿತಿ ಬಂದಿದೆ. ನನಗೆ ತಿಳಿದ ಮಟ್ಟಿಗೆ ಈ ವರ್ಷ ಅಂದರೆ ೧೯೮೮–೮೯ ರಲ್ಲಿ ಷೆಡ್ ಕಟ್ಟುವ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ,

ಶ್ರೀ ಬಿ. ಬಸವಲಿಂಗಪ್ಪ.— ಕಟ್ಟಿದ್ದವೆಲ್ಲಾ ಖಾಲಿ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಅದನ್ನು ಹಂಚುವ ಕೆಲಸ ಮಾಡಿಲ್ಲ. KSIDC made a profit of Rs. 69.16 lakhs in 1984-85. In 1985-86 they made a profit of Rs. 12 lakhs In 1986-87 they made a loss of Rs. 73.14 lakhs. In 1987-88 it is a follow-up.

ಸೆಲ್ಫ್ ಎಂಪ್ಲಾಯ್‌ಮೆಂಟ್‌ಗೆಂದು ಲೋನ್ ತೆಗೆದುಕೊಂಡವರು ಇದನ್ನೆಲ್ಲಾ ನಮ್ಮ ಹತ್ತಿರ ಬಂದು ಹೇಳುತ್ತಾರೆ. ೩೫ ಸಾವಿರ ರೂಪಾಯಿ ಅವರು ಕೊಡುತ್ತಾರೆ. ಅದರಲ್ಲಿ ೮ ಸಾವಿರ ರೂಪಾಯಿಗಳನ್ನು ಸರ್ಕಾರ ಸಬ್ಸಿಡಿಯಾಗಿ ಕೊಡುವಾಗ ನಾವು ಅಧಿಕಾರಿಗಳಿಗೆ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಅವರು ಹೇಳುತ್ತಾರೆ. ನೀವು ೩೫ ಸಾವಿರ ರೂಪಾಯಿಗಳನ್ನು ಇಂಡಸ್ಟ್ರೀ ಮಾಡುವುದಕ್ಕೆ ಲೋನ್ ಕೊಡುತ್ತೀರಲ್ಲಾ, ಆ ಹಣವನ್ನು ತೆಗೆದುಕೊಂಡು ಹೋದವನು ಯಾವ ರೀತಿ ಇಂಡಸ್ಟ್ರೀ ಮಾಡಿದ್ದಾನೆ ಎಂದು ಚೆಕ್ ಮಾಡುತ್ತೀರಾ ? ಒಬ್ಬ ಎಣ್ಣೆ ಗಾಣ ಹಾಕು ವುದಕ್ಕೆ ಸಾಲ ತೆಗೆದುಕೊಂಡಿರುತ್ತಾನೆ, ಒಬ್ಬ ವಿಡಿಯೋ ಪಾರ್ಲರ್ ಹಾಕುವುದಕ್ಕೆ ಸಾಲ ತೆಗೆದು ಕೊಂಡಿರುತ್ತಾನೆ. ಇನ್ನೊಬ್ಬ ಪಾನ್‌ಬೀಡಾ ಅಂಗಡಿ ಹಾಕುವುದಕ್ಕೆ ಸಾಲ ತೆಗೆದುಕೊಂಡಿರು ತ್ತಾನೆ. ಇವರು ತೆಗೆದುಕೊಂಡ ಸಾಲದಿಂದ ಏನಾದರು ಇಂಪ್ರೂವ್‌ಮೆಂಟ್ ಆಗಿದ್ದಾರಾ ಎಂಬು ದನ್ನು ನಿಮ್ಮ ಅಧಿಕಾರಿಗಳು ನೋಡಿದ್ದಾರಾ ? ಎಷ್ಟು ಜನರಿಗೆ ನೀವು ಕೊಟ್ಟ ಸಾಲದಿಂದ ಬೆನಿಫಿಟ್ ಆಗಿದೆ ? ಎಷ್ಟು ಜನ ಸಾಲ ತೆಗೆದುಕೊಂಡವರು ಪಾವರ್ಟಿ ಲೈನ್‌ನಿಂದ ಮೇಲೆ ಬಂದಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಯವರು ನೋಡಬೇಕು. ಇನ್ನು ಎರಡನೆಯದಾಗಿ ಮಿನಿ ಪ್ಲಾಂಟ್‌ಗಳ ಬಗ್ಗೆ ಹೇಳಬೇಕಾದರೆ ತಮಗೆ ಗೊತ್ತಿದ್ದ ಹಾಗೆ ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಸಿಮೆಂಟ್ ಉತ್ಪಾದನೆ ಮಾಡುವ ಅನೇಕ ಮಿನಿ ಪ್ಲಾಂಟ್‌ಗಳು ಇವೆ. ಈ ಮಿನಿ ಪ್ಲಾಂಟ್‌ಗಳ ಜೊತೆಗೆ ಎ.ಸಿ.ಸಿ. ಸಿಮೆಂಟ್ ಕಂಪನಿಯವರು, ಬಿರ್ಲಾ ಕಂಪನಿಯವರು ಸಹ ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಸಿಮೆಂಟ್ ಫ್ಯಾಕ್ಟರಿಗಳನ್ನು ನಡೆಸುತ್ತಿದ್ದಾರೆ. ಮಿನಿ ಪ್ಲಾಂಟ್‌ಗಳು ಹೆಚ್ಚು ಆಗಬೇಕೆಂದು ತಾವು ಪ್ರೋತ್ಸಾಹ ಕೊಡುತ್ತಿದ್ದೀರಿ. ಮಿನಿ ಪ್ಲಾಂಟ್‌ಗಳನ್ನು ತೆಗೆಯುವವರಿಗೆ ಸಬ್ಸಿಡಿಯನ್ನು ಸಹ ಸರ್ಕಾರ ಕೊಡುತ್ತಿದೆ. ಈ ಮಿನಿ ಪ್ಲಾಂಟ್‌ಗಳು ತಿಂಗಳಿಗೆ ೨೦ ಟನ್, ೩೦ ಟನ್‌ಗಳಷ್ಟು ಸಿಮೆಂಟ್ ಉತ್ಪಾದನೆ ಮಾಡುತ್ತವೆ. ನನ್ನ ಕ್ಷೇತ್ರವಾದ ಶಹಬಾದ್‌ನಲ್ಲೇ ೧೮ ಮಿನಿ ಪ್ಲಾಂಟ್‌ಗಳು ಕೆಲಸ ಮಾಡುತ್ತಿವೆ. ಈ ಮಿನಿ ಪ್ಲಾಂಟ್‌ಗಳಿಗೆ ಕೆ.ಎಸ್.ಎಫ್.ಸಿ.ನವರು ಮತ್ತು ಕೆನರಾ ಬ್ಯಾಂಕ್‌ನವರು ಹಾಗೂ ಇತರೆ ಬ್ಯಾಂಕ್‌ನವರು ಸಾಲ ಕೊಟ್ಟಿದ್ದಾರೆ, ಆದರೆ, ಈಗ ಈ ಮಿನಿ ಪ್ಲಾಂಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಈಗ ಇವರೆಲ್ಲಾ ಲಿಕ್ವಿಡೇಷನ್ ಮಾಡಿಕೊಳ್ಳಿ ಎಂದು ಸರ್ಕಾರವನ್ನು ಕೇಳುತ್ತಿದ್ದಾರೆ. ಕಾರಣ ಏನೆಂದರೆ, ಈ ಪ್ಲಾಂಟ್‌ಗಳಿಗೆ ಕೆ.ಇ.ಬಿ.ಯ ಸವಲತ್ತು ಇಲ್ಲ. ಇದರ ಜೊತೆಗೆ ಸಿಮೆಂಟ್ ತಯಾರು ಮಾಡುವುದಕ್ಕೆ ಅತಿ ಮುಖ್ಯವಾಗಿ ಬೇಕಾಗಿರುವ ಕೆಲವು ಕಚ್ಚಾ ವಸ್ತುಗಳನ್ನು ದೂರದ ನಾಗಪುರದಿಂದ ತರಿಸಿಕೊಳ್ಳಬೇಕಾಗುತ್ತದೆ. ದೂರದಿಂದ ತರಿಸಿಕೊಳ್ಳುವುದರಿಂದ ಟ್ರಾನ್ಸ್‌ಪೋರ್ಟೇಷನ್ ಚಾರ್ಜ್ ಬಹಳ ಜಾಸ್ತಿಯಾಗುತ್ತದೆ. ಇದೂ ಅಲ್ಲದೆ ಇವರುಗಳು ಸೇಲ್ಸ್ ಟ್ಯಾಕ್ಸ್, ಎಕ್ಸೈಸ್ ಟ್ಯಾಕ್ಸ್ ಮುಂತಾದ ಟ್ಯಾಕ್ಸ್‌ಗಳನ್ನೆಲ್ಲಾ ಕಟ್ಟಬೇಕಾಗುತ್ತದೆ. ಇದರ ಜೊತೆಗೆ ಪ್ಲಾಂಟ್‌ಗಳನ್ನು ನಡೆಸುವುದಕ್ಕೆ ಬ್ಯಾಂಕುಗಳವರಿಂದ ತೆಗೆದುಕೊಂಡ ಹಣಕ್ಕೆ ಬಡ್ಡಿಯನ್ನು ಕಟ್ಟಬೇಕಾ ಗುತ್ತದೆ. ಇಷ್ಟೆಲ್ಲಾ ಹಣವನ್ನು ಕಟ್ಟಿ ಲಾಭದಾಯಕವಾಗಿ ಪ್ಲಾಂಟ್‌ಗಳನ್ನು ನಡೆಸುವುದಕ್ಕಾಗುವುದಿಲ್ಲ ಸಿಮೆಂಟ್ ಪ್ಲಾಂಟ್‌ಗಳು ಸರಿಯಾಗಿ ಲಾಭ ಮಾಡುತ್ತಿಲ್ಲವಾದ್ದರಿಂದ ಅದಕ್ಕೆ ಸರ್ಕಾರ ಸಬ್ಸಿಡಿ ಹಣವನ್ನು ಕೊಡುವುದಕ್ಕೆ ಪ್ರಾರಂಭಿಸಿತು. ಕೆಲವು ಮಿನಿ ಪ್ಲಾಂಟ್ ನಡೆಸತಕ್ಕ ಜನರು ಏನು ಮಾಡುತ್ತಾರೆ ಎಂದರೆ, ಮೊದಲು ಬ್ಯಾಂಕುಗಳ ಮೂಲಕ ಹಣವನ್ನು ತೆಗೆದುಕೊಂಡು ಪ್ಲಾಂಟ್‌ಗಳನ್ನು ಸ್ಥಾಪನೆ ಮಾಡುತ್ತಾರೆ. ಪ್ಲಾಂಟ್ ತಯಾರಾದ ಮೇಲೆ ಸರ್ಕಾರದವರು ಕೊಡುವ ೬ ಲಕ್ಷ ಅಥವಾ ೧೦ ಲಕ್ಷ ರೂಪಾಯಿಗಳ ಸಬ್ಸಿಡಿ ಹಣವನ್ನು ತೆಗೆದುಕೊಂಡು ಪ್ಲಾಂಟ್ ನಡೆಸುವುದಕ್ಕೆ ಹೋಗುವುದಿಲ್ಲ. ಸಾಲ ಕೊಟ್ಟ ಬ್ಯಾಂಕ್‌ನವರು ಬೇಕಾದರೆ ಪ್ಲಾಂಟ್‌ಗಳನ್ನು ಆಕ್ಷನ್ ಮಾಡಿಕೊಳ್ಳಲಿ ಎಂದು ಕೆಲವರು ಸುಮ್ಮನೆ ಆಗುವ ಉದಾಹರಣೆಗಳೂ ಇವೆ. ಆದ್ದರಿಂದ, ನಾನು ಹೇಳುವುದು ಸರ್ಕಾರದವರು ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಿ, ಈ ಮಿನಿ ಸಿಮೆಂಟ್ ಪ್ಲಾಂಟ್‌ಗಳು ಯಾವ ಕಾರಣದಿಂದ ನಷ್ಟ ಹೊಂದುತ್ತವೆ. ನಷ್ಟವಾಗುವುದಕ್ಕೆ ಕಾರಣ ಏನು ಈ ಮಿನಿ ಸಿಮೆಂಟ್ ಪ್ಲಾಂಟ್‌ಗಳು ಲಾಭ ಮಾಡುವುದಕ್ಕೆ ಏನು ಮಾಡಬೇಕು ಎಂಬ ಬಗ್ಗೆ ಒಂದು ವರದಿಯನ್ನು ತರಿಸಿಕೊಳ್ಳಬೇಕು. ಈಗಾಗಲೇ ತಯಾರಾಗಿರುವ ಪ್ಲಾಂಟ್‌ಗಳಿಗೆ ಸಬ್ಸಿಡಿ ಹಣವನ್ನು ಕೊಡಲಾಗಿದೆ. ಆದರೆ, ಕೆಲವು ಪ್ಲಾಂಟ್‌ಗಳಿಗೆ ಇನ್ನೂ ಸಬ್ಸಿಡಿಯನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ಕೆಲವು ಪ್ಲಾಂಟ್‌ನವರು ನನ್ನ ಹತ್ತಿರ ಬಂದು ಸಬ್ಸಿಡಿ ಹಣವನ್ನು ಕೊಡಿಸಿಕೊಡಿ ಎಂದು ಕೇಳಿಕೊಂಡಿದ್ದರು. ಇದರ ಬಗ್ಗೆ ನಾನು ಸಂಬಂಧಪಟ್ಟ

ಡೈರೆಕ್ಟರುಗಳಿಗೆ ಹೇಳಿದ್ದೇನೆ. ಮಾನ್ಯ ಮಂತ್ರಿಗಳಾದ ಶ್ರೀ ಜೆ. ಹೆಚ್. ಪಟೇಲರಿಗೂ ಹೇಳಿದ್ದೇನೆ. ಆದರೂ ಇದುವರೆಗೂ ಅವರಿಗೆ ಸಬ್ಸಿಡಿ ಹಣ ಸಿಕ್ಕಿಲ್ಲ. ಒಟ್ಟಿನಲ್ಲಿ ಈ ಸಿಮೆಂಟ್ ಪ್ಲಾಂಟ್‌ಗಳ ಬಗ್ಗೆ ದಯಮಾಡಿ ತಾವು ಸ್ಟಡಿ ಮಾಡಬೇಕು,

ಈ ವಿಚಾರವನ್ನು ತಾವು ದಯಮಾಡಿ ಸ್ಟಡಿ ಮಾಡಬೇಕು. ತಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನ್ನು ನಾವು ಪ್ರತಿಯೊಂದು ಜಿಲ್ಲೆಯಲ್ಲಿಯೂ ನೋಡಿದ್ದೇವೆ. ಅದೇ ರೀತಿಯಲ್ಲಿ ಯಾವುದೇ ಸಿಟಿ ಮತ್ತು ಟೌನ್‌ಗಳಲ್ಲಿ ಇಂಡಸ್ಟ್ರೀಯಲ್ ಎಸ್ಟೇಟ್‌ಗಳನ್ನು ಮಾಡಿದ್ದೀರಿ. ನಮ್ಮ ಶಹಾಬಾದ್‌ನಲ್ಲಿ ಹಲವಾರು ಇಂಡಸ್ಟ್ರೀಗಳು ಇವೆ,

ಇನ್ನು ಒಂದು ವಿಚಾರವನ್ನು ಮಾನ್ಯ ದೇಶಪಾಂಡೆಯವರು ಇದ್ದಾಗಲೂ ಹೇಳಿದ್ದೇನೆ. ಮತ್ತು ರಘುಪತಿಯವರಿಗೂ ಹೇಳಿದ್ದೇನೆ ಅದೇನೆಂದರೆ, ಹತ್ತಾರು ವರ್ಷಗಳಿಂದ ಒಂದು ಪ್ರದೇಶದಲ್ಲಿ ಅವರು ಹರಿಜನಗಿರಿಜನರಾಗಿರಲಿ, ಅಥವಾ ಬೇರೆಯವರಾಗಿರಲಿ ೧೫-೨೦ ಎಕರೆ ಜಾಗವನ್ನು ಹೊಂದಿದ್ದರೆ, ಅವನದ್ದು ದೊಡ್ಡ ಕುಟುಂಬವಾಗಿದ್ದರೆ ಅಂತಹವರ ಜಮೀನನ್ನು ಈ ಕೈಗಾರಿಕಾ ಉದ್ದೇಶಗಳಿಗೆ ಸ್ವಾಧೀನಮಾಡಿಕೊಳ್ಳಬಾರದು ಎಂದು ಹೇಳಿದ್ದೇನೆ. ಆ ರೀತಿಯಲ್ಲಿ ಸರಕಾರದ ಒಂದು ಕನ್‌ವೆನ್‌ಶನ್ ಕೂಡ ಇದೆ. ಅಲ್ಲಿ ಒಂದು ಐದಾರು ಜನ ಅಣ್ಣತಮ್ಮಂದಿರು ಇರುವ ಕುಟುಂಬದವರು ಹೊಸದಾಗಿ ಅಂದರೆ ೧೪ ಎಕರೆ ಜಮೀನನ್ನು ತೆಗೆದುಕೊಂಡರು. ಅದೇ ರೀತಿಯಲ್ಲಿ ಮೊದಲಿನ ಎರಡು ಎಕರೆ ಜಮೀನು ಇದೆ. ಅಲ್ಲಿ Pulversing Limestone Plant ಒಂದನ್ನು ಅವರು ಹಾಕಿದ್ದಾರೆ ಆ ಲ್ಯಾಂಡ್‌ನ್ನು ಅವರು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಗಾಗಿ ತೆಗೆದುಕೊಂಡಿದ್ದರು ಆ ಎರಡು ಎಕರೆ ಜಮೀನನ್ನು ಕೂಡ ಕೆ.ಎಸ್.ಎಸ್.ಐ.ಡಿ.ಸಿ.ಯವರು ತೆಗೆದುಕೊಂಡು ತಾನು ಸ್ವತಃ ಇಂಡಸ್ಟ್ರೀ ಮಾಡುತ್ತೇನೆ ನನಗೆ ಆ ಜಾಗವನ್ನು ಬಿಟ್ಟುಬಿಡಿ ಎಂದರೂ ಕೂಡ ಬಿಡಲಿಲ್ಲ. ಈಗ ಅದು ಒಂದು ದೊಡ್ಡ ಸಮಸ್ಯೆಯಾಗಿಬಿಟ್ಟಿದೆ. ಕೆ.ಎಸ್.ಎಸ್.ಐ.ಡಿ,ಸಿ.ಯವರನ್ನು ಕೇಳಿದರೆ ಅವರು ಬೇರೆ ಉತ್ತರವನ್ನು ಕೊಡುತ್ತಾರೆ. ಹೀಗೆ ಯಾರಾದರೂ ಸ್ವತಃ ಇಂಡಸ್ಟ್ರೀ ಮಾಡುವುದಿದ್ದಲ್ಲಿ ಆ ಜಮೀನನ್ನು ಅಕ್ವೈರ್ ಮಾಡಬಾರದು. ಬಿಟ್ಟುಕೊಡಬೇಕು, ಇನ್ನು ಶಹಾಬಾದ್ ಪ್ರದೇಶದಲ್ಲಿ ೭ ಶೆಡ್ಡುಗಳು ಇವೆ. ನನಗೆ ತಿಳಿದ ಹಾಗೆ ಆ ಶೆಡ್ಡುಗಳಲ್ಲಿ ಈಗ ಯಾರೂ ಇಲ್ಲ ಕೆ.ಎಸ್.ಎಫ್.ಸಿ ಯವರು ಹಣ ಸಹಾಯ ಕೊಡುತ್ತಾರೆ. ಅದನ್ನು ತೆಗೆದುಕೊಂಡು ಇವರು fabrication works, Casting works-they were doing. ಆದರೆ ಎಲ್ಲವೂ ಅಲ್ಲಿ ಸ್ಥಗಿತಗೊಂಡಿದೆ. ಹಣ ಕೊಟ್ಟ ಸಂಸ್ಥೆಯವರು ಇವೊತ್ತು ಪಡೆದವರ ಮೇಲೆ ಬಡ್ಡಿ ಸಮೇತ ವಸೂಲ್ ಮಾಡಲು ಡಿಕ್ರಿ ತಂದಿದ್ದಾರೆ. ಇದರ ಬದಲಾಗಿ ಪ್ಲಾಟ್‌ಗಳನ್ನು ಇವರಿಗೆ ಕೊಡಬೇಕು. ಹಾಗೆ ಮಾಡಿದಲ್ಲಿ ಇವರಿಗೆ ಕಡಿಮೆ ಬೆಲೆಯಲ್ಲಿ ಸಿಕ್ಕ ಹಾಗೆ ಆಗುತ್ತದೆ. ಸ್ಥಳ ಸಿಕ್ಕ ಮೇಲೆ ತನ್ನ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಶೆಡ್ ಹಾಕಿಕೊಳ್ಳುತ್ತಾನೆ. ಅದನ್ನು ಬಿಟ್ಟು ನೀವು ಒಂದು ಲಕ್ಷ ರೂಪಾಯಿ ಅಥವಾ ಕಡಿಮೆಗೆ ಶೆಡ್‌ನ್ನು ತಯಾರು ಮಾಡಿಕೊಟ್ಟರೆ ಅವರು ಇಂಡಸ್ಟ್ರೀ ಪ್ರಾರಂಭ ಮಾಡುವ ಹೊತ್ತಿಗೆ ಹಣದ ಬಿಕ್ಕಟ್ಟಿನಲ್ಲಿ ಇರುತ್ತಾರೆ ಸಣ್ಣ ಸಣ್ಣ ಇಂಡಸ್ಟ್ರೀ ಪ್ರಾರಂಭ ಮಾಡುವವರು ತಮಗೆ ಬೇಕಾದ ಯಂತ್ರೋಪಕರಣಗಳು, ಇತ್ಯಾದಿ ಮಾಡಿಕೊಳ್ಳುವಾಗ ಸಾಕಷ್ಟು ಹಣವನ್ನು ತೊಡಗಿಸಬೇಕಾಗುತ್ತದೆ, ಹೀಗೆ ನೀವೇ ಕೊಟ್ಟ ಶೆಡ್ ಸಲುವಾಗಿ ಪರದಾಡುವಂತಹ ಪರಿಸ್ಥಿತಿ ಬಂದರೆ, ಅವರಿಗೆ ಕಷ್ಟವಾಗುತ್ತದೆ. ಆದುದರಿಂದ ಅಂತವರಿಗೆ ಜಾಗವನ್ನು ಕೊಡುವಂಥ ವ್ಯವಸ್ಥೆ ಮಾತ್ರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ತಾವು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ನಂಬಿದ್ದೇನೆ.

ಇನ್ನು ಹಟ್ಟಿ ಗೋಲ್ಡ್‌ಮೈನ್ಸ್ ವಿಚಾರ. ಅಲ್ಲಿ ನಮ್ಮ ಯೂನಿಯನ್ ಇದೆ. ಅಲ್ಲಿಗೆ ನಾನು ಯಾವಾಗಲೂ ಹೋಗುತ್ತಿರುತ್ತೇನೆ. ನಮ್ಮ ಯೂನಿಯನ್ ಪ್ರೆಸಿಡೆಂಟ್ ಮಾಳಿಬೆನ್ನೂರ್ ಎನ್ನುವವರು ಇದ್ದಾರೆ, ಅಲ್ಲಿ ಚಿನ್ನವನ್ನು ತಯಾರು ಮಾಡುತ್ತಾರೆ. ಆವರೆ ಅವರ ಸಮಸ್ಯೆಗಳು ಬೇರೆ, ಅಲ್ಲಿ ತಯಾರು ಮಾಡಿದಂಥ ಚಿನ್ನವನ್ನು ಹೈದ್ರಾಬಾದ್ ರಿಸರ್ವ್‌ಬ್ಯಾಂಕ್‌ನಲ್ಲಿ ಇಡಲಾಗುತ್ತಿದೆ. ಅಲ್ಲಿಂದ ಆ ಚಿನ್ನವನ್ನು ಡೆಲ್ಲಿಗೆ ತೆಗೆದುಕೊಂಡು ಹೋಗಬೇಕು. ಹಾಗೆ ಶಿಪ್ಟ್ ಮಾಡುವಾಗ ಅವರಿಗೆ ಪ್ರೊಟೆಕ್ಷನ್ ಇಲ್ಲ ಎಂದು ಹೇಳುತ್ತಾರೆ. ಹೀಗಾಗಿ ಗೋಲ್ಡ್‌ವ್ಯಾಲ್ಯೂವನ್ನು ಕಂಪನಿಯವರಿಗೆ ಸಂಬಂಧಪಟ್ಟವರು ಕೊಡುತ್ತಿಲ್ಲವಾದುದರಿಂದ ತುಂಬಾ ಕಷ್ಟವಾಗಿದೆ. ಆದುದರಿಂದ ಈ ಬಗ್ಗೆ ಏನು

ಕ್ರಮಗಳನ್ನು ಜರುಗಿಸಬೇಕೋ ಅದನ್ನು ಮಾಡಿ, ಮೈನ್ಸ್‌ನವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆ.ಇ.ಬಿ.ಯವರ ಬಗ್ಗೆ ಹೇಳುವುದಾದರೆ, ಅಲ್ಲಿ ಸುಮಾರು ೪೦ ಸಾವಿರ ಕಾರ್ಮಿಕ ವರ್ಗದವರು ಇದ್ದಾರೆ. ಆರ್.ಇ.ಸಿ.ಸ್ಕೀಮ್ ಪ್ರಕಾರ ಕೇಂದ್ರ ಸರಕಾರದವರು ಅನುದಾನ ಕೊಟ್ಟು ೧೯೮೫ರೊಳಗಾಗಿ ಎಲ್ಲಾ ಗ್ರಾಮಗಳಿಗೂ ವಿದ್ಯುದೀಕರಣ ಮಾಡಬೇಕೆಂಬ ಒಂದು ಗುರಿ ಇಟ್ಟುಕೊಂಡಿದ್ದರು. ಆದರೆ ಆ ಅವಧಿಯೊಳಗಾಗಿ ಆ ಕಾರ್ಯ ಆಗಿಲ್ಲವಾದುದರಿಂದ ಅದನ್ನು ಮುಂದುವರಿಸಿದ್ದಾರೆ ಎಂದು ಕಾಣುತ್ತದೆ. ಈ ಕುರಿತಾಗಿ ನಮ್ಮ ಸಮಸ್ಯೆಗಳನ್ನು ಹೇಳುತ್ತೇನೆ, ನಮ್ಮಲ್ಲಿ ೩೫೬ ತಾಂಡಾಗಳು ಇವೆ. ಅವುಗಳಿಗೆ ಇನ್ನೂ ವಿದ್ಯುದ್ದೀಕರಣವಾಗಬೇಕಾಗಿದೆ. ಸೆಂಟ್ರಲ್ ಗವರ್ನಮೆಂಟ್‌ನವರು ಮತ್ತು ನೀವೂ ಕೂಡಿ ಇದೇ ವರ್ಷದಲ್ಲಿ ಸ್ಕೀಮ್‌ಗಳನ್ನು ಮುಗಿಸುವ ಸಾಧ್ಯತೆ ಇದೆ. ಅದನ್ನು ಆದಷ್ಟು ಬೇಗ ಇಂಪ್ಲಿಮೆಂಟ್ ಮಾಡಿಸಬೇಕು. ಎರಡನೆಯದು ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಮಸ್ಯೆ ಇದೆ. ನಮ್ಮಲ್ಲಿ ೧೮೦೦ ಅರ್ಜಿಗಳು ವಿದ್ಯುತ್ ಬೇಕೆಂದು ಬಿದ್ದಿವೆ. ಯಾರೂ ಹೆಚ್ಚು ಕಡಿಮೆ ಏನೋ ಮಾಡಿದರೆ ಅವರಿಗೆ ಮಾತ್ರ ಅಲ್ಲಿ ಸಿಗುತ್ತಿದೆಯೋ ಹೊರತು ಒಂದು ಕ್ರಮವಿಲ್ಲ. ಮೊದಲೇ ನಮ್ಮ ಭಾಗ ಬರಗಾಲದ ಏರಿಯಾ, ಕೆರೆಗಳಿಂದಲೋ ಹಳ್ಳಗಳಿಂದಲೋ ಹೇಗೋ ನೀರು ಪಂಪ್ ಮಾಡಿಕೊಳ್ಳಲು ಬೇಕಾದ ವಿದ್ಯುತ್ ಕೊಡಿ. ವಾರದಲ್ಲಿ ಎರಡು ಮೂರು ದಿನ ಮಾತ್ರ ಸಪ್ಲೈ ಮಾಡದೆ ರೈತರಿಗೆ ಆದಷ್ಟು ಜಾಸ್ತಿ ವಿದ್ಯುತ್ ಪ್ರೊವೈಡ್ ಮಾಡಬೇಕೆಂದು ಹೇಳುತ್ತಾ ಹಳ್ಳಿಗಳಲ್ಲಿ ಇರುವ ಲೈನ್‌ಮೆನ್‌ಗಳು ಏನಿದ್ದಾರೆ ಅವರು ಬೇಕಾಬಿಟ್ಟಿ ಕೆಲಸ ಮಾಡದ ಹಾಗೆ ಅವರ ಮೇಲೆ ಒಂದು ನಿಗಾ ಇಟ್ಟು ರೈತರಿಗೆ ತೃಪ್ತಿಯಾಗದಂತೆ ನೋಡಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SMT. MUKHTARUNNISA BEGUM (NARASIMHARAJA).--Respected Speaker, industries in Karnataka are suffering due to several wrong programmes and policies of the Government. Due to various factors involved no industries can run and flourish without the help of the Government but the Government has created a big fence which is not allowing industries to survive leave alone about it prosperity. Right now there is no industrial policy in the State. The term of the previous announced policy ended in October 1987. For seven months Karnataka is without an industrial policy or technically it is not announced to follow the old policy also. How can industries live or grow in the total absence of an industrial policy ? May I know why the industrial policy was not revived? What prevented the Government from announcing the policy ? Is it possible for the industries to take appropriate decision without guidelines of Governmental policy ? I emphatically urge upon the Government to announce the policy and help the industry and industrialists. This is an urgent matter, Sir. About Finance, finance is not easily avaialable to industrialists. Financing agencies like the Financial Corporation etc., are known for their delays. Some times, the concerned officials ask such details that one is not in a position to furnish the answer. Many a time it happens that by the time a project is cleared by these Governmental agencies, the products lose market because they make so much delay. Entreperneurs lose enthusiasm and simultaneously lose the market also, and the

principle of demand and supply fails utterly because of the official side delay, Sri as regards the development loan and subsidy, It is very very important to develop the industries. I learn that the assessment of subsidy and development loan from the Government seems to be Rs. 38 crore but only a sum of Rs. 8 crore has been sanctioned. t is a surprise to me that they have sentioned only Rs. 8 crore out Rs. 38 crore and the new incentive is announced. Sir. this means only one-fifth of the assessed amount of subsidy and development loan has been released The added fun is the announcement of incentives. What are these so called new incentives? Is there any basis for these when the Government is not helping the present industries to continue? Where is the logic of drum-beating about the new incentives, I would like to ask. The Governmental financial poverty is hitting badly every field of activity and not only industry but also other sectors. Now Government is without money. Even ordinary public say, "Govenment without money. Government without policy, Government with false new incentives and Government with false new promises" Allow the industries to live, Stop your false promises to industries which are yet to commence and which are yet to start. Sir, I will ask how the backlog will be covered up. It is very difficult to cover up which as accumulated since years, Taking into consideration the piling of backlog the new package of incentive scheme is bogus. It is only to fool the industries, to fool the public that your Government is making false propoganda. Sir, I am amazed to see the target fixed for new industries. The target was to give permission to 1000 new industries per month. I would like to ask where is the power, where is the finance, where is the loan etc. The whole Karnataka knows that there is a shortage of power. Everyone in the State is suffering in one way or the other because of the electricity problem. When your Government is no t in a position to supply infrastructure to existing industries, what is the big fun in boasting that you wish to have 1000 new industries every month? It is impossible. When you have announced that you will give new incentives and that you will give permission for 1000 industries per month, even that unemployed youth who are having a very little amount, will come forward to start industries out unfortunately they will be a failure. So, for God's sake please stop it when there is no money. Sir, why try to fool the unemployed people? Already the unemployed people are suffering without job. Now if they read in the paper that the Government is permitting small industries, they will come farward. So to avoid this I urge upon the Government to be more practical and pragmatic and sensible in its programme and action. Think before you ink,

Sir, I would like to ask. The most important thing is given on page No. 15. I make out there are about 28/3) Corporations and Companies functioninig under the Ministry of Industries.

They are very good Out of this 28-30, more than 22 are sick, under loss and out of this 28 institutions, 22 are headed by IAS Officers and what is the achievement I would like to ask. The 7th Annual Report of the Public Sector Enterprices clearly says, that most of these are running under loss. It is my considered opinion Sir that losses are incurred because people with appropriate technical knowledge and experience are not heading these companies and corporations, Sir, several large industries started by Joint Sector with KSIIDC are now sick. Several crores of rupees have been wasted and several hundreds rendered jobless because of these sick units. It is a common complaint that beautiful project reports are got prepared to get a sanction and once the desired money is sanctioned, the whole project report is changed. Nobody will check properly. For example, if the target is about Rs. 1 crore, the actual target is about 50 lakhs. They will make it one crore. Somehow or the other, with great influence, they will get sanction and as soon as it is sanctioned they will run it for 3 years and then they will close. Why not take action against such industrialists? Why they are not examining before they sanction the project? This automatically results in loss, frustration, failure of policy and several other unhappy consequences. Here it is mentioned that Mysore Paper Mills, Mysore Sugar Company, Lac & Paints, all these companies are under loss. It is mentioned that they are headed by the officers. What action the Government has taken? I do not know. Most important thing is unemployment.

MR. SPEAKER.—Mr. Shivananjappa, don't disturb the Minister

ಶ್ರೀ ಜಿ. ಎಸ್. ಶಿವನಂಜಪ್ಪ — ಅವರು ಕೇಳುತ್ತಿದ್ದಾರೆ.

ಅಧ್ಯಕ್ಷರು.—ಅವರು ನಿಮ್ಮ ಕೂಡಾ ಮಾತನಾಡುತ್ತಿದ್ದಾರೆ, ಮೇಡಂ ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ.

SRI M. RAGHUPATHY.—Everybody loves to hear her voice and not disturb her.

ಶ್ರೀಮತಿ ಮುಕ್ತಾರುನ್ನೀಸಾ.—ನಾನು ಹೇಳುವುದನ್ನು ಮಂತ್ರಿಗಳು ನೋಟ್ ಮಾಡುವುದಿಲ್ಲ. ನಮಗೆ ರಿಪ್ಲೈ ಕೂಡಾ ಸರಿಯಾಗಿ ಸಿಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಇದಾರೆ, ಅವರು ಮಾತನಾಡುತ್ತಿದ್ದಾರಾ ಅಥವಾ ಕೇಳುತ್ತಿದ್ದಾರಾ ಬರೀ ವಾಯ್ಸ್ ಕೇಳಿದರೆ ಹೇಗೆ ಅವರು ರಿಪ್ಲೈ ಕೊಡಬೇಕಲ್ಲಾ ಸ್ವಾಮಿ. ಮೊದಲು ರಿಪ್ಲೈ ಬೇಕು. ಮೊದಲು ಎರಡು ಮೂರು ವಿಚಾರಗಳಿಗೆ ಉತ್ತರ ಹೇಳುತ್ತಾರೆ, ಆ ಮೇಲೆ ಏನೂ ಹೇಳುವುದಿಲ್ಲ. ಎಷ್ಟು ಫ್ಯಾಕ್ಟರಿಗಳಿಗೆ ಇನ್‌ಸೆಂಟೀವ್ ಕೊಟ್ಟಿದ್ದೀರಿ I suggest a High Power Committee be appointed to go into the details particularly the large and medium industries. They are sick, they are under loss or closed or locked up. So, I

request the concerned Minister and the Hon Chief Minister also to appoint a High Power Committee to go into the details. Public, not only Legislators, has right to know that exactly is going on and why public sectors are showing constant loss. There is another thing, You have got Assurance Committee to know whether the assurances were fulfilled. Government is paying for them. The Previous Hon. Minister for Small Scale Industry had assured that a Directorate for Handloom would start functioning from April 1988. The Handloom Corporation is encouraging Sarees and Dhotis only. No other things, no export, no other designs will be introduced and you are announcing one lottery also during the feast that a Scooter as prize if you purchase cloth. God knows who gets the prize. I ask two months have elapsed since ths Hon. Minister said that the Directorate will start functioning from April. There is no sign of fulfilment of that assurance. What is the use of forming an assutance committee ? Government is silent about sick industries, nothing worthwhile done to revive sick industries I do not want to go into sick units all over Karnataka. For example KR Mills of Mysore, After my election as MLA since three years I am repeating the same question about KR Mills. Since then more than 3000 people are unemployed and they are wandering on footpaths. We have done Sathyagraha, we were arrested, we have requested, we have appealed and we have attended more than 15 meetings. They had agreements also that they will reopen within one month and our Hon. Chief Minister he spoke one day in Urdu also. He asked me why did not I attend the meeting, Mr. Handa, Chairman of Binny Mills had attended the meeting etc. He also said that he is discussing with the Chairman and shortly they will purchase KR Mills. I was very happy. I believed Till now you have not done and the machinery during midnights are beind robbed I do not want to say the same. You also don't like it. That day the Chief Minister said that he would do justice, But the mills are not still open. Those 3000 workers do not have any money even to start any business.

MR. SPEAKER.— Please conclude.

SMT. MUKTHARUNNISA.—Please don't disturb. The Hon. Chief Minister is here, I am requesting him. I will bring to his notice that the world famous Mysore Sandal Wood Oil factory is sinking. Lady labourers have lost their lobs. Now they are facing hardship.

4-30 P.M.

Even the ladies cannot start any business. The financia institutions have also failed to lend the money. They are suffering

They are unemployed. The banks will not come forward to give money to start the business. Age bar problem is also there. They are all ladies. I brought it to the kind notice of the Hon. Chief Minister to take immediate action to start the world famous Sandal-Wood Oil Factory. It is a very sad thing that local people are denied employment opportunities in factories and industries. Particularly the Government should give instructions to each factory to take the local unemployed youth. It is not done. They should place restriction. Last time I asked the statistics also. They have failed to give that statistics. I would request this time the Hon. Small Scale Industries Minister to see as to how many local youths are employed in factories that have come up in Mysore and Bangalore. They are taking the benefit of water, they are taking the benefit ofhand, They are taking the benefit of subsidy or development loan. They are taking the benefit of power. But local unemployed youths have to wander on the footpath. In such a case why should we allow them to start such type of industries in Karnataka ? Let them go to their own state. First, let them give job to unemployed local youths. They are encouraging small scale industries. The medium and large scale industries are very close to small scale industries. But, they do not purchase from small scale industries. They purchase from outside. You should make one restriction when you give permission, and when you approve the medium and large industries that they should purchase from the small scale industries. Then they will get good market and the small scale industries will not be sick. Now there is no market. That is why small scale industries are sick. Another thing is about self-employment scheme. Our Central Government sanctions the assistance to the unemployed persons. In this connection also I have asked last time. For those who are unemployed, those who are unable to get the job in factories or in governmental organisations, they will pay 25% or Rs. 35,000/- loan with subsidy to start small business. as a welfare measure, It is a humbug I will tell you. I would like to ask you as to how many projects you have approved. What are the approved industries mentioned in the office. They should follow it. But, lastly what happens is that they will disburse it in such a way that those people will not utilise it properly. I want statistics from Hon. Minister Sri J.H. Patel as to how many unemployed male are benefitted and how many female unemployed are benefitted. Last time both myself and Sri Hemmige asked the information regarding Mysore. I am sorry to say they are not benefitted. But, anyhow I leave it to you. You please check up and inform me as to how many women are benefited and how many youths are benefited in Karnataka As regards new hotels in city. I will talk only about Mysore. Mysore

is called a tourist centre. Many tourists come from all over the world to Mysore to visit Palace. Zoo Garden, Brindavan Garden. Chamundi Temple and Sriranga Patna. So many hotels are coming up in the city for the facility of the public and tourists. I learn that the policy is to cancel the subsidy for hotels which are constructed in the city. Before, the policy was that the industries which are 5 kms. from the corporation limits are eligible subsidy for Now, for the hotels also it seems that the policy is changed to cancel the subsidywhichareconstructed in city limit. I ask the government if the hotels are not constructed in the city for the facilities of tourists and public, then what is the use to construct them out of the corporation limit ? I urge the government to modify that policy in connection with hotels.

ಅಧ್ಯಕ್ಷರು.—ಜನರಲ್ಲಾಗಿ ಹೇಳಿಬಿಡಿ.

ಶ್ರೀಮತಿ ಮುಕ್ತರುನ್ನೀಸಾ.— ಈರೀತಿ ಡಿಸ್ಟರ್ಬ್ ಮಾಡಿದರೆ ಹೇಳುವುದನ್ನೂ ನಾನು ಹೇಳುವುದಕ್ಕಾಗುವುದಿಲ್ಲ. ಈ ರೀತಿ ಡಿಸ್ಟರ್ಬ್ ಮಾಡಬಾರದು.

MR. SPEAKER —You have taken maximum 25 minutes. ಆದ್ದರಿಂದ ಜನರಲ್ಲಾಗಿ ಸರ್ಕಾರಕ್ಕೆ ಏನು ಹೇಳಬೇಕೋ ಅದನ್ನು ಹೇಳಿಬಿಡಿ.

ಶ್ರೀಮತಿ ಮುಕ್ತರುನ್ನೀಸಾ.—ನಾನು ೩–೪ ಕೊಶ್ಚನ್ಸ್ ಕೇಳಿದ್ದೇನೆ. ಅದಕ್ಕೆ ಉತ್ತರ ಹೇಳಬೇಕು. About the amount mentioned for development loan and subsidy it is Rs. 38 crores. But, you have sanctioned about Rs. 8 crores. How you will manage with Rs. 8 crores. Meanwhile you have introduced a new scheme of starting 1000 factories per month, Hon. Member Sri Moily also stated about the new incentives. That is a very important question. Secondly, last time also we asked all these questions about the sick industry. Chamundi Moped factory is sick. Why you are not keeping technical persons to know, before the industries get money. Whatever questions we have asked, you have to take interest. We are not just speaking because you are in government and we are in opposition. It is our right. For the benefit of the public we are putting these questions. You have to rectify this to help the public. Thank you very much.

ಶ್ರೀ ಎ. ಲಕ್ಷ್ಮೀಸಾಗರ್.—ಬೇಗಂರವರು ಚೆನ್ನಾಗಿ ಮಾತನಾಡಿದ್ದಾರೆ.

ಅಧ್ಯಕ್ಷರು.—ಚೆನ್ನಾಗಿ ಮಾತನಾಡಿದ್ದಾರೆ, ಕಾಂಪ್ಲಿಮೆಂಟ್ಸ್. ೩೫ ಕೋಟಿ ೨೦ ಲಕ್ಷ ೫೭ಸಾವಿರ ಆಕ್ಯುಮಲೇಟೆಡ್ ಲಾಸ್, ೧೯೮೬–೮೭ರಲ್ಲಿ ೧೧೦೭.೩೪.೧೮ ರಘುಪತಿಯವರೇ, ಇದನ್ನು ನೋಡಿ.

†ಶ್ರೀ ಚಂದ್ರಕಾಂತ್‌ಜಿ ಬೆಲ್ಲದ್ (ಧಾರವಾಡ).—ಮಾನ್ಯ ಅಧ್ಯಕ್ಷರೆ, ವಿದ್ಯುಚ್ಛಕ್ತಿ ಇಲಾಖೆಯ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ಇವತ್ತಿನ ದಿವಸ ಅನೇಕ ಮಾನ್ಯ ಸದಸ್ಯರು ಈ ವಿದ್ಯುಚ್ಛಕ್ತಿಯ ಬಗ್ಗೆ ತಮ್ಮ ಸಲಹೆಗಳನ್ನೂ, ಅದರಲ್ಲಿರುವಂಥ ನ್ಯೂನತೆಗಳನ್ನೂ ಮತ್ತು ಆಗಬೇಕಾದ ಕೆಲಸಗಳ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ತಮಗೆಲ್ಲಾ ತಿಳಿದಿರುವಂತೆ ನಮ್ಮ ರಾಜ್ಯವು, ಅನೇಕ ವರ್ಷಗಳಿಂದ ಇಡೀ ರಾಷ್ಟ್ರದಲ್ಲಿಯೇ ಅತ್ಯಂತ ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿದ್ದರೂ ಸಹ ಇವತ್ತು ಮಳೆಯ ಅಭಾವದಿಂದಾಗಿ ಉತ್ಪಾದನೆ ಬಹಳಷ್ಟು ಕಡಿಮೆಯಾಗಿದೆ. ಇದರಿಂದಾಗಿ ನಮ್ಮ ರಾಜ್ಯದ ಆದಾಯವೂ ಕೂಡ ಬಹಳಷ್ಟು ಕಡಿಮೆಯಾಗಿದೆ. ಇದರ ಜೊತೆಗೆ ಈ ವಿದ್ಯುಚ್ಛಕ್ತಿಯ

ಮೇಲೆಯೇ ಅವಲಂಬಿಸಿರತಕ್ಕ ಕೃಷಿ ಉದ್ಯಮಕ್ಕಂತೂ ಬಹಳ ದೊಡ್ಡ ಆಘಾತವಾಗಿ ರಾಜ್ಯದ ಆದಾಯಕ್ಕೆ ಹಾಗೂ ಉದ್ಯೋಗಾವಕಾಶಕ್ಕೆ ಅತ್ಯಂತ ಅಘಾತವಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ಆಹಾರಧಾನ್ಯಗಳು ಎಷ್ಟು ಮುಖ್ಯವೋ ಅದಕ್ಕಿಂತಲೂ ಹೆಚ್ಚಿನ ಮುಖ್ಯವಾದುದು ಎಂದರೆ ಈ ವಿದ್ಯುಚ್ಛಕ್ತಿ. ಹಿಂದೆ ಒಂದುಕಾಲದಲ್ಲಿ ಇಡೀ ಇಂಡಿಯಾದಲ್ಲೇ ನಮ್ಮ ಕರ್ನಾಟಕ ರಾಜ್ಯವು ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿತ್ತು. ಆಗ ನಾವು ಯಾವುದೇ ಮುಂದಾಲೋಚನೆ ಇಲ್ಲದೆ ಅನೇಕ ಉದ್ಯಮಗಳಿಗೆ ನಾವು ಕೊಟ್ಟುಬಿಟ್ಟೆವು. ಆದರೆ ಇವತ್ತು ನಮ್ಮಲ್ಲಿರತಕ್ಕ ಅನೇಕ ಉದ್ದಿಮೆಗಳಿಗೆ ನಾವು ವಿದ್ಯುಚ್ಛಕ್ತಿಯನ್ನು ಕೊಟ್ಟು ಅವು ಕೆಲಸ ಮಾಡುವಂತೆ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ವಿದ್ಯುಚ್ಛಕ್ತಿ, ಇವತ್ತು ನಮಗೆ ಬಹಳ ಮಹತ್ವಪೂರ್ಣವಾದುದು. ಈ ಉದ್ದಿಮೆಗಳ ಜೊತೆಗೆ ಕೃಷಿ ಉತ್ಪಾದನೆಗೆ ನಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ. ಇವತ್ತು ನಮ್ಮ ಕೃಷಿ ಉತ್ಪಾದನೆಗೆ ಮೂಲವಾಗಿರತಕ್ಕ ಪಂಪ್‌ಸೆಟ್ಟುಗಳಿಗೆ ವಿದ್ಯುತ್‌ನ್ನು ಕೊಡಬೇಕಾಗಿದೆ. ಆದರೆ ಸಾಕಷ್ಟು ವಿದ್ಯುತ್ ಇಲ್ಲದಿರುವುದರಿಂದ ಪಂಪ್‌ಸೆಟ್ಟುಗಳಿಗೆ ಬಹಳ ಆತಂಕವಾಗಿದೆ. ಕೆಲವು ಕಡೆಗಳಲ್ಲಿ ಹಗಲು ಹೊತ್ತು ನಾವು ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುತ್ತಿಲ್ಲ. ರಾತ್ರಿವೇಳೆಯಲ್ಲಿ ವಿದ್ಯುಚ್ಛಕ್ತಿಯನ್ನು ಕೊಟ್ಟರೆ ಕೆಲಸಗಾರರು ಸಿಕ್ಕುವುದಿಲ್ಲ, ಇದರಿಂದಾಗಿ ಕೃಷಿಗೆ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ರೈತರಿಗೆ ಸಾಧ್ಯವಾಗುತ್ತಿಲ್ಲ.

ಇದರ ಜೊತೆಗೆ ಇನ್ನೊಂದು ಸಮಸ್ಯೆ ಎಂದರೆ ವೋಲ್ಟೇಜ್ ಡ್ರಾಪ್ ಆಗುವುದರಿಂದ ಪಂಪ್‌ಸೆಟ್ಟುಗಳು ಸುಟ್ಟುಹೋಗುತ್ತಿವೆ, ಇದರಿಂದಾಗಿ ಬಡ ರೈತರು ಬಹಳ ಕಷ್ಟವನ್ನು ಅನುಭವಿಸಬೇಕಾಗಿದೆ. ವೋಲ್ಟೇಜ್ ಯಾವಾಗ ಸರಿಯಾಗಿರುವುದಿಲ್ಲ, ಆಗ ಪಂಪ್‌ಸೆಟ್ಟುಗಳು ಮೇಲಿಂದ ಮೇಲೆ ಸುಟ್ಟು ಹೋಗುತ್ತಿರುತ್ತವೆ. ನನಗೆ ತಿಳಿದಂತೆ ಕೆ.ಇ ಬಿ.ಯವರು ತಪ್ಪು ಮಾಡುತ್ತಿದ್ದಾರೆ. ರೈತರಿಗೆ ಆಗುತ್ತಿರುವ ನಷ್ಟದ ಬಗ್ಗೆ, ಉದ್ದಿಮೆಗಳಲ್ಲಿ ಆಗುತ್ತಿರುವ ನಷ್ಟದ ಬಗ್ಗೆ ಅಂದರೆ ಕೆ.ಇ.ಬಿ.ಯವರಿಗೆ ಸಂಬಂಧಪಟ್ಟಂತೆ ವಿದ್ಯುಚ್ಛಕ್ತಿಯಿಂದ ಆಗುತ್ತಿರುವ ನಷ್ಟದ ಬಗ್ಗೆ ಏನಾದರೂ ಅಂಕಿಸಂಖ್ಯೆಗಳನ್ನು ಇಟ್ಟುಕೊಂಡಿದ್ದಾರೆಯೋ ಎಂದರೆ ನಮಗೆ ಆ ಬಗ್ಗೆ ಏನೂ ಕಾಣುತ್ತಿಲ್ಲ. ಇದು ಒಂದು ವಿಷಾದಕರ ಸಂಗತಿ. ವಿದ್ಯುಚ್ಛಕ್ತಿ ವೋಲ್ಟೇಜ್ ಡ್ರಾಪ್ ಆದಾಗ ಅನೇಕ ಪಂಪ್‌ಸೆಟ್ಟುಗಳು ಸುಟ್ಟು ಹೋಗುತ್ತಿರುತ್ತವೆ. ಇದರಿಂದ ಬಡ ರೈತರು ಲುಕ್ಸಾನು ಅನುಭವಿಸುತ್ತಿದ್ದಾರೆ. ಈ ದೃಷ್ಟಿಯಿಂದ ಕೆ.ಇ.ಬಿ.ಯವರು ವಿದ್ಯುಚ್ಛಕ್ತಿಯನ್ನು ವಿತರಣೆ ಮಾಡುವಾಗ ಯಾವುದೇ ರೀತಿಯಿಂದಲೂ ವೋಲ್ಟೇಜ್ ಡ್ರಾಪ್ ಆಗದಂತೆ ನೋಡಿಕೊಳ್ಳಲು ಮಂಡಲಿಯವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಮಾನ್ಯ ವಿದ್ಯುಚ್ಛಕ್ತಿ ಖಾತೆಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅನೇಕ ರೀತಿಯ ಮೆಷಿನರಿಗಳು ವಿದ್ಯುಚ್ಛಕ್ತಿ ಆಧರಿಸಿ ನಡೆಯುವಂಥವು ಇವೆ. ಅವು ಸಂಪೂರ್ಣವಾಗಿ ಆಟೋಮ್ಯಾಟಿಕ್ ಮೆಷಿನರಿಗಳು. ನಿಮ್ಮ ವಿದ್ಯುಚ್ಛಕ್ತಿ ಷಟ್‌ಡೌನ್ ಆಗುವುದಕ್ಕಿಂತ ಮುಂಚಿತವಾಗಿ ಅವರಿಗೆ ನೀವು ತಿಳಿಸದಿದ್ದರೆ ಆ ಮೆಷಿನರಿಗಳು ಸುಟ್ಟುಹೋಗಿ ಬಹಳ ನಷ್ಟವಾಗುತ್ತದೆ. ಇಂಥ ಪ್ರಕರಣಗಳಲ್ಲಿ ಕೂಡ ಅನೇಕರು ನಿಮ್ಮ ಕೆ.ಇ.ಬಿ.ಯಮೇಲೆ ಕೇಸು ಹಾಕಿರುವುದುಂಟು. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಗೋಸ್ಕರ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದಿಂದ ಹೆಚ್ಚಿನ ಹಣವನ್ನು ತೆಗೆದುಕೊಂಡು ವಿದ್ಯುಚ್ಛಕ್ತಿಯನ್ನು ಮಾಡಿ ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

ಇವತ್ತು ಕೈಗಾ ವಿದ್ಯುತ್ ಸ್ಥಾವರ ಬರುತ್ತಿದೆ. ಇದರ ಬಗ್ಗೆ ಅನೇಕ ರೀತಿಯ ಊಹಾಪೋಹಗಳು ಕೇಳಿ ಬರುತ್ತಿವೆ. ಈ ವಿಚಾರದಲ್ಲಿ ಅನೇಕ ತಾಂತ್ರಿಕ ತಜ್ಞರು ಬಹಳಷ್ಟು ಸಲಹೆಗಳನ್ನು ಕೊಟ್ಟರು. ಅದರ ಮೇಲೆ ಅನೇಕ ರೀತಿಯ ಪ್ರತಿರೋಧ ಇಲ್ಲಿ ಕಂಡುಬಂತು. ಆದರೂ ಈಗ ಈ ಅಣು ವಿದ್ಯುತ್ ಸ್ಥಾವರವನ್ನು ಪ್ರಾರಂಭ ಮಾಡಿದ್ದೀರಿ.

ನಮ್ಮ ರಾಜ್ಯದಲ್ಲಿ ಈಪತ್ತಿನದಿವಸ ಉದ್ಯಮಗಳು ಬಹಳವಾಗಿ ಬೆಳೆದು ಬರುತ್ತಿದೆ. ಉದ್ಯಮಗಳು ಹೆಚ್ಚಾದ ಹಾಗೆಲ್ಲ ನೀರಾವರಿಯನ್ನೂ ಕೂಡ ಹೆಚ್ಚು ಮಾಡಬೇಕು. ನೀರಾವರಿಗೆವಿದ್ಯುಚ್ಛಕ್ತಿಯ ಅವಶ್ಯಕತೆ ಬಹಳವಾಗಿ ಇರುತ್ತದೆ. ನಮಗೆ ಆಹಾರಧಾನ್ಯಗಳು ಎಷ್ಟು ಅವಶ್ಯಕತೆ ಇದೆಯೋ ಅಷ್ಟೇ ವಿದ್ಯುಚ್ಛಕ್ತಿಯ ಅವಶ್ಯಕತೆ ಇರುತ್ತದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರದಮೇಲೆ ಒತ್ತಡವನ್ನು ತರಬೇಕು ಅನೇಕ ಯೋಜನೆಗಳನ್ನು ಈಗಾಗಲೇ ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಲಾಗಿರುತ್ತದೆ. ಕಳುಹಿಸಿದ ಅವೆಲ್ಲಕ್ಕೂ ಒಪ್ಪಿಗೆಯನ್ನು ಪಡೆದು ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಹೆಚ್ಚು ಮಾಡಬೇಕು ಮುಖ್ಯ

ವಾಗಿ ರಾಜ್ಯದಲ್ಲಿ ಬೆಳೆಯುತ್ತಿರುವಂಥ ಉದ್ಯಮಗಳು ಕೇವಲ ಬೆಂಗಳೂರಿನಲ್ಲಿ ಮಾತ್ರ ಬೆಳೆದರೆ ಸಾಲದು ಗ್ರಾಮಾಂತರ ಪ್ರದೇಶಗಳಿಗೂ ಉದ್ಯಮಗಳು ಬರಬೇಕು. ಗ್ರಾಮಾಂತರ ಪ್ರದೇಶಗಳಿಗೆ ಉದ್ಯಮಗಳು ಬಂದಲ್ಲಿ ಗ್ರಾಮಗಳಿಗೆ ವಿದ್ಯುತ್ ಬರುವುದಕ್ಕೆ ಸಹಾಯವಾಗುತ್ತದೆ, ಈರೀತಿ ಜಿಲ್ಲಾ ಪ್ರದೇಶ, ತಾಲ್ಲೂಕು ಪ್ರದೇಶಗಳಲ್ಲಿ ಹೆಚ್ಚು ವಿದ್ಯುತ್ ಸರಬರಾಜು ಮಾಡತಕ್ಕಂಥ ವ್ಯವಸ್ಥೆಮಾಡಿ ಉದ್ಯಮಗಳು ಬೆಳೆದು ಬರುವುದಕ್ಕೆ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಹೆಚ್ಚಿನ ಸಹಾಯವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಈವತ್ತಿನ ದಿವಸ ವಿದ್ಯುತ್‌ನಲ್ಲಿರುವಂಥ ಟ್ರಾನ್ಸ್‌ಮಿಷನ್ ಲೈನ್ಸ್‌ನಿಂದ ಬಹಳವಾಗಿ ಲಾಸ್ ಆಗುತ್ತಿದೆ, ಸಾಕಷ್ಟು ಉತ್ಪನ್ನವನ್ನು ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ವಿದ್ಯುತ್ ಟ್ರಾನ್ಸ್‌ಮಿಷನ್‌ನಿಂದ ಎಲ್ಲಿ ಲಾಸ್ ಆಗುತ್ತಿದೆ ಎನ್ನುವುದನ್ನು ಕಂಡುಹಿಡಿದು ಲೈನ್‌ಗಳನ್ನು ಸದುಪಯೋಗವಾಗುವಂತೆ ಬಳಸಿಕೊಳ್ಳುವುದು ಬಹಳ ಮುಖ್ಯವಾದ ವಿಷಯವಾಗಿದೆ. ಇದರ ಜೊತೆಗೆ ಇಲಾಖೆಯಲ್ಲಿ ಸಾಕಷ್ಟು ವಿದ್ಯುತ್‌ನ ಒಂದು ದರೋಡೆ ಮಾಡಿ ಉಪಯೋಗ ಮಾಡುತ್ತಿರುವುದು ಕಂಡು ಬಂದಿದೆ. ಮೀಟರ್ ಇಲ್ಲದೆ ಉಪಯೋಗ ಮಾಡುತ್ತಿರುವಂಥ ದರೋಡೆಗಳು ನಡೆಯುತ್ತಿದೆ. ಅನೇಕ ಕಡೆ ಉದ್ಯಮಗಳನ್ನು ನಡೆಸುತ್ತಿರುವ ಉದ್ದಿಮೆದಾರರು ನಡೆಸುತ್ತಿರುವ ದರೋಡೆಯನ್ನು ಕಂಡುಹಿಡಿಯುವ ಸಲುವಾಗಿ ಒಂದು ಯೋಜನೆಯನ್ನು ರೂಪಿಸಿಕೊಳ್ಳಬೇಕು ರೂಪಿಸಿದಂಥ ಯೋಜನೆಯಿಂದ ಎಷ್ಟು ಜನ ಸಿಕ್ಕಿಹಾಕಿಕೊಳ್ಳುತ್ತಾರೋ ಅವರಮೇಲೆ ಕೇಸನ್ನು ಹಾಕಬೇಕು. ಅಲ್ಲದೆ ಉತ್ಪಾದನೆಯನ್ನು ಸೂಕ್ತ ರೀತಿಯಲ್ಲಿ ಉಪಯೋಗಮಾಡಿಕೊಳ್ಳಲು ಮಾನ್ಯ ಮಂತ್ರಿಗಳಾದ ಜೆ ಎಚ್. ಪಟೇಲ್ ರವರು ಆಸಕ್ತಿಯನ್ನು ವಹಿಸಿ ಒಂದು ಬಹುಮಾನ ಕೊಡುವ ಯೋಜನೆಯನ್ನು ತಂದಿರುವುದರಿಂದಾಗಿ ಈವತ್ತು ವಿದ್ಯುಚ್ಛಕ್ತಿ ಪ್ರಯೋಜನವಾಗುವಲ್ಲಿ ಹೆಚ್ಚಿನ ಮುತುವರ್ಜಿ ವಹಿಸಬೇಕೆಂಬುದು ಕಂಡು ಬರುತ್ತಿದೆ. ಪಬ್ಲಿಕ್ ಸೆಕ್ಟರ್‌ನಲ್ಲಿ ವಿದ್ಯುತ್ ಕಳವು ಮಾಡುತ್ತಿರುವುದು ಸಾಧಾರಣವಾಗಿ ಅವರ ಜೊತೆಗೆ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿರತಕ್ಕಂಥ ಅಧಿಕಾರಿಗಳು ಶೇಕಡಾ ೯೦ ಪಟ್ಟು ಸಹಾಯಮಾಡುವುದರ ಮೂಲಕ ಅನುಕೂಲಮಾಡಿಕೊಡುತ್ತಿದ್ದಾರೆ. ಮುಖ್ಯವಾಗಿ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿರುವ ಸಿಬ್ಬಂದಿಯೇ ಇದಕ್ಕೆ ಕಾರಣರು ಎನ್ನುವ ಒಂದು ಕೂಗು ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕೆಂದು ಹೇಳುತ್ತೇನೆ ಇತ್ತೀಚೆಗೆ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ, ಲೈನ್‌ಮೆನ್ ಇಲ್ಲ ಎನ್ನುವ ಕೂಗು ಇದೆ. ಈವತ್ತಿನ ದಿವಸ ವಿದ್ಯುತ್ ಸರಬರಾಜು ಎಷ್ಟು ಬರುತ್ತಿದೆ ಅದಕ್ಕೆ ತಕ್ಕಂತೆ ಅಷ್ಟು ಲೈನ್‌ಮೆನ್‌ಗಳು ಇಲ್ಲ. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಈ ಕೂಗು ಬಹಳವಾಗಿ ಇದೆ. ಆರೋಪವಿದೆ, ಯಾವ ಲೈನ್‌ಮ್ಯಾನ್ ಸರಿಯಾಗಿ ಬಂದು ಸಹಾಯಮಾಡುತ್ತಿಲ್ಲ ಎನ್ನುವ ಕೂಗನ್ನು ಕೇಳುತ್ತಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಬಡ ರೈತರು ಇರುತ್ತಾರೆ ಅವರಿಗೆ ಇಲಾಖೆಯಿಂದ ಆಗುತ್ತಿರುವಂಥ ಹಾನಿ, ಕಿರುಕುಳ ಏನು ಇದೆ ಇದನ್ನು ಹೋಗಲಾಡಿಸುವ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಕಾಳಜಿಯನ್ನು ವಹಿಸಬೇಕೆನ್ನುವ ವಿಚಾರ ಮತ್ತು ಇಲಾಖೆಯಲ್ಲಿ ಭ್ರಷ್ಟಾಚಾರ ಸಾಕಷ್ಟು ಇದೆ ಎನ್ನುವ ದೃಷ್ಟಿಯಲ್ಲಿ ಅನೇಕ ಜನ ಶಾಸಕರು ಹೇಳಿದ್ದಾರೆ. ವಿದ್ಯುಚ್ಛಕ್ತಿ ರಾಷ್ಟ್ರದ ಆದಾಯದಲ್ಲಿ ಬಹಳ ಮುಖ್ಯವಾದುದಾಗಿರುತ್ತದೆ. ಆದ್ದರಿಂದ ಕೇಂದ್ರ ಸರ್ಕಾರವನ್ನು ಒತ್ತಾಯಮಾಡಿ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚುಮಾಡಿಕೊಳ್ಳಬೇಕು. ರೈತರಿಗೆ, ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಹೆಚ್ಚು ಉದ್ಯಮಗಳು ಬೆಳೆದು ಬರುವುದಕ್ಕೆ ಸಹಾಯ ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡಬೇಕು. ಇದರಲ್ಲಿರತಕ್ಕಂಥ ಅನೇಕ ದೋಷಗಳು, ಆಡಳಿತ ದೋಷಗಳು, ಯಂತ್ರೋಪಕರಣ ದೋಷಗಳನ್ನು ಕಡಿಮೆ ಮಾಡಿ ಸಾಕಷ್ಟು ವ್ಯವಸ್ಥಿತವಾಗಿ ಇಟ್ಟು ರಾಷ್ಟ್ರದಲ್ಲಿ ಇದು ಮಾದರಿ ಇಲಾಖೆಯಾಗುವಂತೆ ಮಾಡಬೇಕು. ಬಹಳಷ್ಟು ಜನ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಇಂಜಿನಿಯರ್‌ಗಳು ಬಹಳ ಪ್ರಾಮಾಣಿಕರಾಗಿಯೂ ಮತ್ತು ದಕ್ಷರಾಗಿಯೂ ಇರುತ್ತಾರೆ, ಆಡಳಿತ ವೈಖರಿ ಸರಿಯಾದ ದೃಷ್ಟಿಯಲ್ಲಿ ನಡೆಯಲು ಈ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಕಾರ್ಯ ಮಾಡಬೇಕು. ವಿದ್ಯುತ್ ಉತ್ಪಾದನೆಯ ಜೊತೆಗೆ ಉದ್ಯಮಗಳೂ ಕೂಡ ಬೆಳೆದುಬರುವುದಕ್ಕೆ ಸಹಾಯ ಮಾಡಿ ಈ ಭಾಗದಲ್ಲಿರುವಂಥ ಜನರಿಗೆ ಸಹಾಯ ಮಾಡಬೇಕು. ಇರುವಂಥ ಉದ್ಯಮಗಳಿಗೆ ವಿದ್ಯುತ್ ಕೊರತೆಯನ್ನು ಪಡ್‌ನ್ ಮಾಡಬೇಕು. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಾ, ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ತಮ್ಮ ಗಮನವನ್ನು ಕೊಟ್ಟು ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವಲ್ಲಿ ಆಡಳಿತದಲ್ಲಿನ ಯಂತ್ರವನ್ನು ಸದುಪಯೋಗ ಮಾಡಿಕೊಳ್ಳುವ ದಿಸೆಯಲ್ಲಿ ಕಾರ್ಯ

ಮಾಡುತ್ತಾರೆನ್ನುವ ಆಶಯವನ್ನು ವ್ಯಕ್ತಪಡಿಸುತ್ತಾ ನಾನು ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಜಿ. ನಂಜಯ್ಯನ ಮಠ (ಗುಳೇದಗುಡ್ಡ),—**ಮಾನ್ಯ** ಅಧ್ಯಕ್ಷರೆ, ಸರ್ಕಾರ ಮಂಡಿಸಿರುವಂಥ ವಿದ್ಯುತ್ ವಿಷಯವಾಗಿ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆಗಳ ವಿಷಯವಾಗಿ ಬಂದಿರತಕ್ಕ ಧೋರಣೆ ಮತ್ತು ಅದಕ್ಕೆ ತೊಡಗಿಸಿರತಕ್ಕ ಹಣಕಾಸಿನ ವಿಷಯವಾಗಿ ಈ ಒಂದು ಸಮಯದಲ್ಲಿ ಅದನ್ನು ವಿರೋಧಿಸಿ ತಮ್ಮ ಮುಖಾಲಕ ಹಲವಾರು ಸಲಹೆ ಸೂಚನೆಗಳನ್ನು ಕೊಡ ಲಿಚ್ಛಿಸುತ್ತೇನೆ. ಭಾರೀ ಹಾಗೂ ಸಣ್ಣ ಕೈಗಾರಿಕೆ ವಿಷಯವಾಗಿ ಹಿರಿಯ ಸದಸ್ಯರಾದ ಮೊಯ್ಲಿ ಯವರು ಸಾಕಷ್ಟು ಪ್ರಮಾಣದಲ್ಲಿ ಸರ್ಕಾರಕ್ಕೆ ಅಂಕಿ ಅಂಶಗಳ ಸಮೇತವಾಗಿ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ರಾಜ್ಯದ ಹಿತದೃಷ್ಟಿಯಿಂದ ಅವುಗಳನ್ನು ಜಾರಿಯಲ್ಲಿ ತಂದು ಜನತೆಗೆ ಉಪಕಾರ ಮಾಡಲು ಕೇಳಿಕೊಂಡು ವಿದ್ಯುತ್ ಇಲಾಖೆಯ ವಿಷಯವಾಗಿ ನನ್ನ ಎರಡು ಮಾತುಗಳನ್ನು ಸರ್ಕಾರದ ಗಮನಕ್ಕೆ ತಮ್ಮ ಮುಖಾಲಕ ತರುವುದೇನೆಂದರೆ, ಈ ಸಾರಿ ಟ್ರಾನ್ಸ್‌ಫಾರ್ಮರ್‌ಗಳ ಪೂರೈಕೆ ಇಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ತಿನ ಉಪಯೋಗ ಪಡೆದುಕೊಂಡು ತಮ್ಮ ಹೊಲಗಳಿಗೆ, ತೋಟಗಳಿಗೆ ನೀರು ಹಾಯಿಸಿಕೊಂಡು ಬದುಕುವಂಥ ರೈತರಿಗೆ ಭಾರೀ ಪ್ರಮಾಣದಲ್ಲಿ ತೊಂದರೆ ಯಾಗಿದೆ. ಒಂದೊಂದು ಕಡೆ ಟ್ರಾನ್ಸ್‌ಫಾರ್ಮರ ಸುಟ್ಟರೆ ಒಂದೊಂದು ತಿಂಗಳ ಕಾಲ ಟ್ರಾನ್ಸ್‌ಫಾರ್ಮರ್ ಹಾಕುವ ವ್ಯವಸ್ಥೆಯನ್ನು ಇಲಾಖೆಯ ಅಧಿಕಾರಿಗಳು ಮಾಡುವುದಿಲ್ಲ. ರೈತರು ಅಷ್ಟು ದೂರದಿಂದ ಬಂದು ಟ್ರಾನ್ಸಫಾರ್ಮರ ಸುಟ್ಟು ೧೫–೨೦ ದಿವಸವಾಯಿತು. ಬೆಳೆ ಒಣಗುತ್ತಿದೆ, ಏಕೆ ಸುಮ್ಮನೆ ಕುಳಿತಿದ್ದೀರಿ ಎಂದು ಇಲಾಖೆಯ ಅಧಿಕಾರಿಗಳನ್ನು ಕೇಳಿದರೆ ನಮ್ಮಲ್ಲಿ ಅವುಗಳ ಪೂರೈಕೆ ಆಗಿಲ್ಲ, ನಾವು ಏನು ಮಾಡೋಣ ಎಂಬ ಮಾತನ್ನು ಅವರಿಂದ ಕೇಳಬೇಕಾಯಿತು. ಹೊಳೆಯ ದಂಡೆಯ ಮೇಲಾಗಲಿ, ಬಾವಿ ನೀರಿನ ಮುಖಾಲಕವಾಗಲಿ ಒಕ್ಕಲುತನವನ್ನು ಅವಲಂಬಿರತಕ್ಕ ಕೃಷಿ ಅವಲಂಬಿತ ಜನರಿಗೆ ಟ್ರಾನ್ಸ್‌ಫಾರ್ಮರ್‌ಗಳ ಪೂರೈಕೆ ಇಲ್ಲದೆ ಭಾರೀ ಪ್ರಮಾಣದಲ್ಲಿ ತೊಂದರೆಆದದ್ದನ್ನು ಸರ್ಕಾರ ತೀವ್ರವಾಗಿ ಗಮನಿಸಬೇಕು. ಅದರ ಜೊತೆಗೆ ಒಂದು ಸಲಹೆಯನ್ನು ಕೊಡಲಿಚ್ಛಿಸುತ್ತೇನೆ. ಕೆಲವು ಭಾಗಗಳಲ್ಲಿ ಮುಖ್ಯ ಇಂಜಿನಿಯರ್‌ಗಳನ್ನು ನೇಮಿಸಿದ್ದೀರಿ. ಅಧಿಕಾರವಿಕೇಂದ್ರೀಕರಣವಾಗ ಬೇಕೆಂಬ ಇಚ್ಛೆಯನ್ನು ಮತ್ತು ಹೇಳಿಕೆಯನ್ನು ಕೊಡತಕ್ಕ ಸರ್ಕಾರ ಪ್ರತಿಯೊಂದು ನಿರ್ಣಯವನ್ನು ಸಾಮೂಹಿಕವಾಗಿ ರಾಜ್ಯಮಟ್ಟಕ್ಕೆ ಬಂದು ತೆಗೆದುಕೊಳ್ಳುವಂತೆ ಮಾಡಿರುವುದನ್ನು ಗಮನಿಸಬೇಕು. ಕೆ.ಇ.ಬಿ. ಗೆ ಬೇಕಾದ ಹಲವಾರು ಉಪಕರಣಗಳು ಸಲಕರಣೆಗಳು ಬಾಂಬೆಯಿಂದ ಹುಬ್ಬಳ್ಳಿ ಮುಖಾಂತರ ಬೆಂಗಳೂರಿಗೆ ಬಂದು ಸೇರುತ್ತವೆ. ಬೆಂಗಳೂರಿಗೆ ಬಂದು ಸೇರಿದ ಮೇಲೆ ಹುಬ್ಬಳ್ಳಿಗೆ ಅಥವಾ ಧಾರವಾಡ, ಕಾರವಾರ, ಬಿಜಾಪುರ, ಬೆಳಗಾಂ, ಬೀದರ್, ರಾಯಚೂರಿಗೆ, ಅದೇ ಮಾರ್ಗವಾಗಿ ಬಂದು ಸಲಕರಣೆ ಬೆಂಗಳೂರಿಗೆ ಬಂದು ಪುನಃ ಬೆಂಗಳೂರಿನಿಂದ ಅಲ್ಲಿಗೆ ಹೋಗುವ ವ್ಯವಸ್ಥೆ ಇದೆ. ಇದರಿಂದ ಡಬಲ್ ಟ್ರಾನ್ಸ್‌ಪೋರ್ಟೇಷನ್ ಚಾರ್ಜ್ ಆಗುತ್ತದೆ ಈ ಹೊರೆಯನ್ನು ತಪ್ಪಿಸಲು ವಿಭಾಗೀಯ ವ್ಯವಸ್ಥೆಯಲ್ಲಿ ಮಾಲು ಅಲ್ಲೇ ಬಂದು ಇಳಿಯುವ ಹಾಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಆಯಾಯ ವಿಭಾಗದ ಮುಖ್ಯ ಇಂಜಿನಿಯರ್‌ಗೆ ಈ ಜವಾಬ್ದಾರಿ ಕೊಡಬೇಕು. ಹುಬ್ಬಳ್ಳಿಯಲ್ಲಿ ಚೀಫ್ ಇಂಜನಿಯರ್ ಇದ್ದಾರೆ. ಬೆಳಗಾಂ ಮತ್ತು ಗುಲ್ಬರ್ಗದಲ್ಲಿ ಡಿವಿಜನ್ ಇದೆ. ಪ್ರತಿಯೊಂದು ನಿರ್ಣಯ ತೆಗೆದುಕೊಳ್ಳುವ ಹಕ್ಕನ್ನು ಅವರಿಗೆ ಕೊಡಿ. ಎಲ್ಲವೂ ಬೋರ್ಡಿಗೆ ಬಂದು ಹೋಗುವ ಬದಲು ಅಲ್ಲಲ್ಲೇ ಇರತಕ್ಕ ಮುಖ್ಯ ಇಂಜಿನಿಯರ್‌ಗಳಿಗೆ ಅಧಿಕಾರ ಕೊಡಿ. ಇನ್ನು ಎಷ್ಟು ಪಂಪ್ಸಸೆಟ್ಟುಗಳಿಗೆ ವಿದ್ಯುತ್ ಪೂರೈಕೆ ಮಾಡಿದ್ದಾರೆ ಎಂಬುದಕ್ಕಿಂತ ಮುಖ್ಯವಾಗಿ ರೈತ ಅರ್ಜಿ ಸಲ್ಲಿಸಿದ ಮೇಲೆ ಎಷ್ಟು ದಿನ ಗಳಲ್ಲಿ ಅವನಿಗೆ ವಿದ್ಯುತ್ ಪೂರೈಕೆ ಮಾಡಿದ್ದಾರೆಂಬುದನ್ನು ಗಮನಿಸಬೇಕಾಗಿದೆ. ವಿದ್ಯುತ್ ಪೂರೈಕೆ ಗಾಗಿ ಅರ್ಜಿ ಕೊಟ್ಟಮೇಲೆ ಒಂದೆರಡು ತಿಂಗಳ ಕಾಲ ಕೃಷಿ ಅವಲಂಬಿತ ವ್ಯಕ್ತಿ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಇದೆ. ಈ ಒಂದು ವಿಷಯದಲ್ಲಿ ಸರ್ಕಾರ ತೀವ್ರ ಗಮನ ಕೊಡಬೇಕು. ಅಗತ್ಯ ಸಲಕರಣೆ ಗಳನ್ನು ಪೂರೈಸುವುದರ ಜೊತೆಗೆ ಅರ್ಜಿ ಕೊಟ್ಟ ರೈತರಿಗೆ ೧೫ ದಿನಗಳಲ್ಲಿ ವಿದ್ಯುತ್ ಪೂರೈಕೆಯ ವ್ಯವಸ್ಥೆ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಎಷ್ಟು ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆ ಮಾಡಿದ್ದಾ ರೆಂಬುದಕ್ಕಿಂತ ಎಷ್ಟು ದಿನಗಳಲ್ಲಿ ವಿದ್ಯುತ್ ಪೂರೈಕೆ ಮಾಡಿದ್ದಾರೆಂಬುದು ಮುಖ್ಯ. ಈ ಒಂದು ಆಧಾರದ ಮೇಲೆ ರೈತನ ಅಭಿವೃದ್ಧಿ ಆಗಲು ಸಾಧ್ಯವಾಗುತ್ತದೆಂದು ವಿದ್ಯುತ್ ವಿಷಯದಲ್ಲಿ ತಿಳಿಸುತ್ತಾ, ನೇರವಾಗಿ ಕೈಮಗ್ಗದ ಅಭಿವೃದ್ಧಿಯ ವಿಷಯಕ್ಕೆ ಬರುತ್ತೇನೆ.

ಕೈಮಗ್ಗದ ವಿಷಯದಲ್ಲಿ ಹೇಳುವುದಾದರೆ ರಾಜ್ಯದಲ್ಲಿ ಭಾರಿ ಪ್ರಮಾಣದ ಹಾಹಾಕಾರ ಇವತ್ತು ಎದ್ದಿದೆ. ಸುಮಾರು ಐದಾರು ತಿಂಗಳಿಂದ ನೂಲಿನ ಬೆಲೆ ಹೆಚ್ಚಾಗಿ ನೇಕಾರರಿಗೆ ಬೇಕಾದ ನೂಲಿನ ಪೂರೈಕೆ ಇಲ್ಲದೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಒಂದು ವೇಳೆ ಹೆಚ್ಚಿನ ಹಣ ಸಂದಾಯ ಮಾಡಿ ನೂಲನ್ನು ತಂದು ತನ್ನ ಮಾಲನ್ನು ಉತ್ಪಾದನೆ ಮಾಡಿದರೂ ನೂಲಿನ ಬೆಲೆ ಕಡಿಮೆ ಇದ್ದಾಗ ಯಾವ ರೇಟಿಗೆ ಮಾಡುತ್ತಿದ್ದನೋ ಅದೇ ರೇಟಿಗೆ ಈಗಲೂ ಮಾಡಬೇಕಾದ ಪರಿಸ್ಥಿತಿ ಉಂಟಾಯಿತು. ನೂಲಿನ ರೇಟಿನ ಪ್ರಮಾಣ ಏನಾಗಿತ್ತು ಅಂದರೆ ೧೯೮೩-೮೪ರಲ್ಲಿ ನಾಲ್ಕೂವರೆ ಕೆ. ಜಿ. ಯ ಒಂದು ಬಂಡಲ್ ನೂಲು ೧೬೫ ರೂಪಾಯಿ ಇದ್ದರೆ ಇವತ್ತು ೨೮೦ ರೂಪಾಯಿಗಳಿಗೆ ಏರಿದೆ. ಇದಕ್ಕೆ ಕೇಂದ್ರಸರ್ಕಾರ ಜವಾಬ್ದಾರಿಯೋ ರಾಜ್ಯ ಸರ್ಕಾರ ಜವಾಬ್ದಾರಿಯೋ ಎಂಬ ಬಗ್ಗೆ ನಾನು ವಿಂಗಡಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ರಾಜ್ಯದ ಜವಾಬ್ದಾರಿ ಹೊತ್ತಿರುವ ತಾವು ಯಾವುದಾದರೂ ಆಳತೆಗೋಲು ಮಾಡಿ ಕೇಂದ್ರಸರ್ಕಾರದ ಜೊತೆಯಲ್ಲಿ ವಿಚಾರ ವಿನಿಮಯ ಮಾಡಿ ಅಸಮರ್ಪಕವಾದ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಬೇಕು. ಶಿವರಾಮನ್ ಸಮಿತಿ ಈ ವಿಷಯದಲ್ಲಿ ವರದಿ ಕೊಟ್ಟಿದೆ. ಕಡೇಪಕ್ಷ ಶೇಕಡ ೪೦ರಷ್ಟನ್ನಾದರೂ ನೂಲಿನ ಗಿರಣಿಗಳಲ್ಲಿ ನೂಲನ್ನು ಹ್ಯಾಂಡ್‌ಲೂಂ ಡೆವಲಪ್‌ಮೆಂಟ್‌ಗೆ ಕಾದಿರಿಸ ಬೇಕೆಂದು ೧೯೭೩-೭೪ರಲ್ಲೇ ಶಿವರಾಂ ಕಮಿಟಿ ವರದಿ ಕೊಟ್ಟರೂ ಅದು ಜಾರಿಯಲ್ಲಿಲ್ಲ. ನೀವು ಒಂದು ಐದು ವರ್ಷಗಳಾದರೂ ಜಾರಿಯಾಗಲಿಲ್ಲ. ಈ ಸಾರಿ ಎಷ್ಟೋ ಕಡೆ ವಿಶೇಷವಾಗಿ ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ಆಯಾ ವಿಭಾಗೀಯ ಕಚೇರಿಗಳಿಗೆ ಮಗ್ಗಗಳನ್ನು ಬಂದ್ ಮಾಡ ಬೇಕು ಎಂದು ಆದೇಶ ಹೋಗಿದೆ. ಯಾವುದಾದರೂ ಒಬ್ಬ ವ್ಯಕ್ತಿ ಇದೇ ಒಂದು ಉದ್ದಿಮೆಯ ಮೇಲೆ ಅವಲಂಬಿತನಾಗಿರುವಾಗ, ಇದರಿಂದಲೇ ಎರಡು ಹೊತ್ತು ಊಟ ಮಾಡುವ ಸಂದರ್ಭ ಹೊಂದಿರುವಾಗ ಇದನ್ನು ಬಂದ್ ಮಾಡಿದರೆ ಎಲ್ಲಿ ಹೋಗಬೇಕು. ನೇಕಾರ ಎಂದರೆ ಆಸ್ತಿಯನ್ನು ಹೊಂದಿರತಕ್ಕವರಲ್ಲ. ಹೊಲ ಮನೆಗಳನ್ನು ಹೊಂದಿರುವುದಿಲ್ಲ. ಆತನ ಆಸ್ತಿ ಎಂದರೆ ಮಗ್ಗ. ಅದರಲ್ಲಿ ಸೀರೆಯನ್ನೋ ಧೋತಿಯನ್ನೋ ಉತ್ಪಾದಿಸಿ ಅದನ್ನು ಮಾರಿ ತನ್ನ ಹೊಟ್ಟೆ ತುಂಬಿಸಿಕೊಳ್ಳ ಬೇಕಾದ ಪರಿಸ್ಥಿತಿ ನೇಕಾರರಿಗಿದೆ. ಈ ವರದಿಯಲ್ಲಿ ಎಷ್ಟು ಮೀಟರ್ ಬಟ್ಟೆ ಉತ್ಪಾದನೆಯಾಗಿದೆ ಎಂದು ಇದೆ. ನಾಲ್ಕೈದು ತಿಂಗಳ ಕಾಲ ಇದರಲ್ಲಿ ಅಭಾವ ಇತ್ತು. ಹಾರ್ಡ್ ಸಿಲ್ಕ್ ಸಿಗಲಿಲ್ಲ. ರೇಷ್ಮೆ ಸಿಗಲಿಲ್ಲ. ಹಾರ್ಡ್ ಸಿಲ್ಕಿನ ಬೆಲೆ ಒಂದು ಕೆ. ಜಿ.ಗೆ ೪೦ ರೂಪಾಯಿ ಇದ್ದದ್ದು ೧೩೦ ರೂಪಾಯಿಗೆ ಏರಿದೆ, ಆದರೆ ಉತ್ಪಾದಿತ ಬಟ್ಟೆ ಬೆಲೆ ಏರಲಿಲ್ಲ. ಕೈಗಾರಿಕಾ ಸಹಕಾರ ಸಂಘಗಳು ಭಾರಿ ಪ್ರಮಾಣದಲ್ಲಿ ತೊಂದರೆಗೆ ಒಳಗಾಗಿವೆ. ನಾನು ನನ್ನ ಕ್ಷೇತ್ರವಾದ ಗುಳೇದಗುಡ್ಡದ ಉದಾಹರಣೆ ಹೇಳಬೇಕಾದರೆ ನಾಲ್ಕಾರು ದಿನ ಆಫೀಸಿನಲ್ಲಿ ಕೇಳಿದರೂ ಎಂ. ಡಿ. ಯವರಿಗೆ ಟೆಲಿಗ್ರಾಂ ಕೊಟ್ಟರೂ, ಸರ್ಕಾರಕ್ಕೆ ನಿವೇದನೆ ಮಾಡಿಕೊಂಡರೂ ನೂಲನ್ನು ಕೊಡಲಿಲ್ಲ. ಕೆ. ಎಚ್. ಡಿ. ಸಿ. ಯನ್ನು ನಂಬಿ ಕೊಂಡಿರುವ ಮಗ್ಗಗಳನ್ನು ಏಕಾಏಕಿ ಬಂದ್ ಮಾಡಬೇಕು ಎಂದು ಹೇಳಿದರೆ ಅವರು ಏನು ಮಾಡಿ ಕೊಂಡು ಬದುಕಬೇಕು ? ಅವರು ಕೃಷಿ ಕಾರ್ಮಿಕರಾಗಿ ಹೋಗುವುದಕ್ಕಾಗುವುದಿಲ್ಲ. ಏಕೆಂದರೆ ತಲೆತಲಾಂತರಗಳಿಂದ ಇದೇ ಉದ್ದಿಮೆಗಳನ್ನು ಅವಲಂಬಿಸಿದ್ದಾರೆ. ಮಗ್ಗಗಳನ್ನು ಬಂದ್ ಮಾಡ ಬೇಕೆಂದು ಸರ್ಕಾರದ ಆದೇಶ ಹೊರಟಾಗ ಅವರು ಎಲ್ಲಿ ಹೋಗಿ ಬದುಕಬೇಕು ಎಂಬುದನ್ನು ಯೋಚನೆ ಮಾಡಬೇಕು. ಕಾಲದಿಂದ ಕಾಲಕ್ಕೆ ನಿರ್ಣಯಗಳನ್ನು ಬದಲಾಯಿಸುತ್ತಾ ಹೋಗುವುದು ಸರಿಯಲ್ಲ. ಈ ಬಗ್ಗೆ ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳಬೇಕು. ನೀವು ಪರ್ಟಿಂಗ್ ನೇಯಿರಿ ಎಂದು ಆದೇಶ ಹೋಗುತ್ತದೆ. ಅದಕ್ಕೆ ಲಾಳಿ, ತಟ್ಟು ಮುಂತಾದ ಕೆಲವು ಸಲಕರಣೆಗಳು ಬರುತ್ತವೆ. ನಿಮ್ಮ ಆದೇಶದ ಮೇರೆಗೆ ಅವರು ಷರ್ಟಿಂಗ್ ನೇಯುತ್ತಾರೆ. ಅವರು ಕಷ್ಟಪಟ್ಟು ಹಣ ಖರ್ಚು ಮಾಡಿ ನೇಯುತ್ತಿರುವಾಗ ಷರ್ಟಿಂಗ್ ಬಂದ್ ಮಾಡಿ ಎಂದು ಹೇಳುತ್ತಾರೆ. ೩೦೦–೪೦೦ ರೂಪಾಯಿ ಖರ್ಚು ಮಾಡಿ ಅವರು ಮೊದಲಿನ ವಿನ್ಯಾಸವನ್ನು ಬದಲಾವಣೆ ಮಾಡಿ ಕೊಂಡಿರುತ್ತಾರೆ. ಆಗ ಷರ್ಟಿಂಗ್ ನೇಯುವುದು ಬೇಡ ಎಂದು ಆದೇಶ ಹೋಗುತ್ತದೆ. ಆಗ ಮತ್ತೆ ಅವರು ೩೦೦-೪೦೦ ರೂಪಾಯಿ ಖರ್ಚು ಮಾಡಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಮೇಲಿಂದ ಮೇಲೆ ಅಸಮರ್ಪಕ ವಾದ ಆಡಳಿತದ ಪೆಟ್ಟು ಅವರ ಮೇಲೆ ಬಿದ್ದು ತೊಂದರೆಗೆ ಈಡಾಗುತ್ತಾರೆ.

ಅಧ್ಯಕ್ಷರು.—ಮುಗಿಸಿ.

ಶ್ರೀ ಎಸ್. ಜಿ. ನಂಜಯ್ಯನಮಠ.—ನಾಲ್ಕೈದು ಜನ ಆಬ್ಸೆಂಟ್ ಇದ್ದಾರೆ. ಆದ್ದರಿಂದ ನನಗೆ ಹೆಚ್ಚು ಸಮಯಬೇಕೆಂದು ಕೇಳಿಕೊಳ್ಳುತ್ತೇನೆ, ಇದು ಗಂಭೀರವಾದ ವಿಷಯ.

ಅಧ್ಯಕ್ಷರು.—ಇನ್ನೂ ನಾಲ್ಕು ಜನ ಇದ್ದಾರೆ, ಒಬ್ಬೊಬ್ಬರಿಗೆ ಹತ್ತತ್ತು ನಿಮಿಷ ಕೊಟ್ಟರೂ ಒಂದು ತಾಸು ಬೇಕು.

೫-೦೦ ಪಿ.ಎಂ.

ಇದರ ಜೊತೆಗೆ ಇನ್ನೊಂದು ಅಸಮರ್ಪಕವಾದ ವ್ಯವಸ್ಥೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸಂಬಂಧಪಟ್ಟ ಮಂತ್ರಿಗಳ ಜೊತೆ ನಿವೇದನೆ ಮಾಡಿದ್ದೆನೆ. ಕಾರ್ಯದರ್ಶಿ ಹಾಗೂ ಅಧ್ಯಕ್ಷರ ಜೊತೆ ಸಮಾಲೋಚನೆ ಮಾಡಿ ಅಗತ್ಯವಾದ ನಿರ್ಣಯವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಈ ವಿಷಯಕ್ಕಾಗಿ ನಾನು ಅವರಿಗೆ ಅಭಿನಂದಿಸುತ್ತಾ ಇನೂ ಮುಂದುವರಿದು ಹೇಳುವುದಾದರೆ ರಂಜಾನ್ ಪ್ರಯುಕ್ತ ಸರ್ಕಾರ ಒಂದು ರಿಬೇಟನ್ನು ೩-೫-೧೯೮೮ ರಿಂದ ೧೫-೫-೧೯೮೮ರ ವರೆಗೆ ಕೊಟ್ಟಿತು. ಆದರೆ ಇದು ಜಾರಿಯಾಗಿದ್ದು ೭-೫-೧೯೮೮ ರಿಂದ. ಮೊದಲಾಗಿದ್ದರೆ ವಿಷಯ ನೇರವಾಗಿ 'ಸರ್ಕಾರ'ದಿಂದ ಜನರಲ್ ಮೇನೇಜರ್‌ಗೆ ಹೋಗುತ್ತಿತ್ತು. ತದನಂತರ ಅವರು ಇದನ್ನು ಸಹಕಾರ ಸಂಘಗಳಿಗೆ ತಿಳಿಸುತ್ತಿದ್ದರು. ಆದರೆ ಈಗ ಮಧ್ಯದಲ್ಲಿ ಏನೂ ಇಲ್ಲದಿದ್ದರೂ ಕಂಬ ಸುತ್ತುವಹಾಗೆ ಜಿಲ್ಲಾ ಪರಿಷತ್ತಿನ ಮೂಲಕ ಸಹಕಾರ ಸಂಘಗಳಿಗೆ ವಿಷಯ ತಿಳಿಯಬೇಕಾಗಿದೆ. ಈ ರೀತಿಯಾಗಿ ಎಲ್ಲಾ ಜಿಲ್ಲೆಗಳಿಗೂ ಸಿಕ್ಕ ರಮ್‌ಜಾನ್ ರಿಬೇಟ್ ನಮ್ಮ ಬಿಜಾಪುರ ಜಿಲ್ಲೆಗಂತೂ ಅನುಕೂಲ ಆಗಿಲ್ಲ. ಇದರಿಂದಾಗಿ ೮೫-೯೦ ಲಕ್ಷದಷ್ಟು ಮಾರಾಟ ನಡೆಯದೇ ಉಳಿದಿತ್ತು. ಇದರ ಬಗ್ಗೆ ಸಹಾನುಭೂತಿಯ ಹಾದಿಯನ್ನು ಹುಡುಕುತ್ತೇನೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಅತಿಶೀಘ್ರವಾಗಿ ಈ ತಿಂಗಳಲ್ಲೇ ಅದನ್ನು ಮಾಡುವುದರ ಜೊತೆಗೆ ಈ ಸ್ಪಷ್ಟ ಆದೇಶವನ್ನೂ ತಿಳಿಸಬೇಕು. ಯಾವಾಗ ರಿಬೇಟ್ ಬಗ್ಗೆ ಆಜ್ಞೆ ಮಾಡುತ್ತೀರೋ ಅದಕ್ಕಿಂತಾ ಕನಿಷ್ಟ ಮೂರು ದಿವಸಗಳ ಮುಂಚೆಯಾದರೂ ಟೆಲಿಗ್ರಾಮ್ ಮೂಲಕವಾಗಲೀ, ಟೆಲಿಫೋನ್ ಮೂಲಕವಾಗಲೀ, ತಿಳಿಸಿದರೆ ಅಗತ್ಯವಾಗಿರತಕ್ಕ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ತಿಳಿಸುತ್ತೇನೆ. ಕೆಲವೊಂದು ನೇಕಾರಿ ಸಹಕಾರಿ ಸಂಘಗಳು ಇವತ್ತಿನ ದಿವಸ ಭಾರೀ ಪ್ರಮಾಣದಲ್ಲಿ ತೊಂದರೆಗಳನ್ನು ಅನುಭವಿಸುತ್ತಿವೆ. ಈ ರಾಜ್ಯದಲ್ಲಿರತಕ್ಕ ೧ ಲಕ್ಷದ ೪೦ ಸಾವಿರ ಮಗ್ಗಗಳಲ್ಲಿ ಅರ್ಧದಷ್ಟು ಇವತ್ತು ಸಹಕಾರಿ ರಂಗದ ಕೆಳಗಡೆ ಇವೆ. ಇವತ್ತು ರಿಬೇಟ್ ಜೊತೆಗೆ ಮನೆ ಕಟ್ಟುವ ಯೋಜನೆಯನ್ನೂ ಸರ್ಕಾರ ಮಾಡಿದೆ. ಇದು ಆದಮೇಲೆ ಸಾಕಷ್ಟು ನೇಕಾರರು ಮನೆ ಇಲ್ಲದೇ ಬಾಡಿಗೆ ಮನೆಗಳಲ್ಲಿ ಮಗ್ಗ ಹಾಕಿದ್ದವರಿಗೆ ಅನುಕೂಲ ಆಗಿದೆ. ಇದರ ಜೊತೆಗೆ ಇವರಿಗೆ ಏನು ಆಗಬೇಕಾಗಿದೆ ಎಂದರೆ ಶೇಕಡಾ ೯ ರಷ್ಟು ಬಡ್ಡಿ ೮೫ರ ವರೆಗೆ ಇತ್ತು. ಇವತ್ತು ಅದು ಶೇಕಡಾ ೧೪ ಆಗಿದೆ. ನಿಮ್ಮ ಸರ್ಕಾರದಿಂದ ಬಡ್ಡಿ ಹೆಚ್ಚಿನ ಒಂದು ಕೊಡುಗೆ, ಬಳುವಳಿ ಈ ನೇಕಾರರಿಗೆ ಸಿಕ್ಕಿದೆ ಎಂದು ಹೇಳಬೇಕಾಗಿದೆ. ಈ ಮನೆಗಳ ಮೇಲೆ ಶೇಕಡಾ ೪ ರಷ್ಟು ಬಡ್ಡಿಯನ್ನು ತಾವು ಹಾಕಿದರೆ ಈ ಮನೆಯಲ್ಲಿ ಅವರು ಜೀವನ ಮಾಡಿಕೊಂಡು ಹೋಗಿ ಅವರಿಗೆ ಬರುವ ಅಲ್ಪ ಆದಾಯದಲ್ಲಿ ಇದನ್ನೂ ಕಟ್ಟಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ನೀವು ಈಗ ಹಾಕಿರತಕ್ಕ ಬಡ್ಡಿಯನ್ನು ನೋಡಿದರೆ ಮನೆಯ ಬೆಲೆ ೨೦ ಸಾವಿರ ರೂಪಾಯಿ ಆದರೆ ಕೊನೆಯವರೆಗೆ ಅವನು ಬಡ್ಡಿಯನ್ನೂ ಸೇರಿಸಿ ೩೦ ರಿಂದ ೪೦ ಸಾವಿರ ರೂಪಾಯಿಗಳವರೆಗೆ ಆತ ಸಂದಾಯ ಮಾಡಬೇಕಾಗುತ್ತವೆ. ಈ ಬಗ್ಗೆ ಸರ್ಕಾರ ಸ್ಪಷ್ಟ ಧೋರಣೆ ತೆಗೆದುಕೊಂಡು ಈಗ ಏನು ಬಡ್ಡಿಯನ್ನು ವಿಧಿಸಲಾಗಿದೆ ಅದನ್ನು ಮನ್ನಾ ಮಾಡಿ ಶೇಕಡಾ ೪ ರಷ್ಟು ಬಡ್ಡಿಗೆ ವ್ಯವಸ್ಥೆ ಮಾಡಿದರೆ ಬಡ ನೇಕಾರರಿಗೆ ಅನುಕೂಲವಾದೀತೆಂದು ತಿಳಿಸಿ, ಶೇಕಡಾ ೩೫ ರಿಂದ ಶೇಕಡಾ ೫೦ ರಷ್ಟು ರೈತ ಸಮೂಹಕ್ಕೆ ತಾವು ಬಡ್ಡಿ ಮನ್ನಾ ಮಾಡಿದ್ದು ಈ ೪೦-೫೦ ಲಕ್ಷ ನೇಕಾರರಿಗೆ ಸಹಾಯ ಮಾಡುವುದರಿಂದ ತಮಗೆ ಏನೂ ಹೊರೆಯಾಗಲಾರದೆಂದು ಹೇಳುತ್ತೇನೆ. ಈ ದಿಸೆಯಲ್ಲಿ ರಾಜ್ಯದಲ್ಲಿರತಕ್ಕ ೫ ಲಕ್ಷ ನೇಕಾರರಿಗೆ ಈ ಅನುಕೂಲತೆಯನ್ನು ಒದಗಿಸಿಕೊಡಬೇಕೆಂದು ಹೇಳಿ, ೪ ಪರ್ಸೆಂಟ್ ಬಡ್ಡಿಯನ್ನು ಏನು ಮುಂದೆ ಮಾಡಬೇಕೆಂದು ಹೇಳಿದ್ದೇನೆ. ಅದರ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಮನೆ ಕಟ್ಟುವುದಕ್ಕೆ ಏನು ಸಾಲವನ್ನು ಕೊಡುತ್ತೀರಿ ಅದರಲ್ಲಿ ೨ ವರ್ಷದಲ್ಲಿ ಮನೆ ಕಟ್ಟಿ ಮುಗಿಸಬೇಕೆಂದು ನಿಯಮ ಇದೆ. ಆದರೆ ಬಡ್ಡಿಯನ್ನು ವಸೂಲಿ ಮಾಡುವುದು ಯಾವಾಗಿನಿಂದ ? ಸಹಕಾರ ಸಂಘಗಳಿಂದ ಮನೆ ಕಟ್ಟಲು ಯಾವಾಗ ಹಣವನ್ನು ಕೊಡುತ್ತಾರೆ ಅಲ್ಲಿಂದಲೇ ಬಡ್ಡಿಯನ್ನೂ ಕೂಡಾ ವಸೂಲಿ ಮಾಡುತ್ತಾರೆ. ೨ ವರ್ಷಗಳ ಒಳಗಾಗಿ ಆ ಹಣವನ್ನು ಯುಟಿಲೈಸ್ ಮಾಡಿ ಮನೆ ಕಟ್ಟಿ ಆತ ವಾಸಕ್ಕೆ ಹೋಗಬೇಕೆಂದು ನಿಯಮ ಇರುವಾಗ, ಆತ

ಯಾವಾಗ ಆ ಮನೆಗೆ ಕಾನೂನು ರೀತ್ಯ ಹೋಗಿ ಜೀವನ ಮಾಡಲು ಪ್ರಾರಂಭ ಮಾಡುತ್ತಾನೆ ಅಲ್ಲಿಂದ ಬಡ್ಡಿ ಹಾಕಬೇಕು ಎಂದು ಹೇಳುತ್ತೇನೆ. ಇಲ್ಲದಿದ್ದರೆ ಆತ ಬರೀ ಬಡ್ಡಿಯನ್ನೇ ತುಂಬಬೇಕಾಗುತ್ತದೆಂದು ಈ ಸಂದರ್ಭದಲ್ಲಿ ತಿಳಿಸಿ, ನೇಕಾರರಿಗೆ ಹಸಿರು ಕಾರ್ಡ್ ಕೊಡುವ ವ್ಯವಸ್ಥೆ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳೂ ಹಾಗೂ ಕೆಲವು ಮಂತ್ರಿಗಳ ಜೊತೆ ಈ ಬಗ್ಗೆ ಮಾತನಾಡಿದಾಗ ಹಸಿರು ಕಾರ್ಡ್ ಇವರಿಗೂ ಕೊಡಬಹುದೆನ್ನುವ ಭರವಸೆಯನ್ನು ಕೊಟ್ಟರು. ಇವತ್ತು ನೇಕಾರರನ್ನು ಎರಡು ವಿಧದಲ್ಲಿ ಗುರ್ತು ಮಾಡಬಹುದು, ಕೆಎಚ್‌ಡಿಸಿ ಅಧೀನದಲ್ಲಿ ನೇಯ್ಗೆ ಮಾಡುವಂತಹ ನೇಕಾರರ ಲಿಸ್ಟ್ ಅಲ್ಲಿ ನಮಗೆ ಸಿಗುತ್ತದೆ. ಅದೇ ರೀತಿ ಸಹಕಾರಿ ಸಂಘಗಳ ಮುಖಾಂತರ ನೇಯ್ಗೆ ಕೆಲಸ ಮಾಡುವವರ ಲಿಸ್ಟ್ ಕೂಡಾ ನಮಗೆ ಸಿಗುತ್ತದೆ.

ಇವುಗಳನ್ನು ಮುಂದಿಟ್ಟುಕೊಂಡು ಈ ಒಂದು ಉದ್ಯಮದಲ್ಲಿ ಇವತ್ತು ಬಡವರಾಗಿ ಕೆಲಸ ಮಾಡುತ್ತಿರುವಂಥ ನೇಕಾರರಿಗೆ ಹಸಿರು ಕಾರ್ಡುಗಳನ್ನು ಕೊಡುವ ವ್ಯವಸ್ಥೆ ಮಾಡಿದರೆ ಬಹುಶಃ ಇದರ ಲಾಭವನ್ನು ಅವರು ಪಡೆದುಕೊಳ್ಳುತ್ತಾರೆ. ಇದರಿಂದ ಅವರಿಗೆ ಪ್ರಯೋಜನ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿ ಖಾದಿ ವಿಷಯವಾಗಿ...

ಅಧ್ಯಕ್ಷರು.—ಶ್ರೀ ನಂಜಯ್ಯಮಠ್ ಅವರೇ, ನಿಮಗೆ ಸಮಯದ ಮಹತ್ವ ಗೊತ್ತಿದೆಯೋ ಹೇಗೆ?

ಶ್ರೀ ಎಸ್. ಜಿ. ನಂಜಯ್ಯನಮಠ್.—ಖಾದಿ ವಿಷಯ ಬಹಳ ಮುಖ್ಯವಾದದ್ದು ಇದರ ಬಗೆ ಎರಡು ಮಾತುಗಳನ್ನು ನಾನು ಹೇಳಬೇಕಾಗುತ್ತದೆ,

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಎಸ್. ಜಿ. ನಂಜಯ್ಯನಮಠ್.—ಹೀಗೆ ಮಾಡಿದರೆ ಹೇಗೆ ಸ್ವಾಮಿ? ನಾನು ಇಷ್ಟು ತಯಾರು ಮಾಡಿಕೊಂಡಿದ್ದು ಏನು ಉಪಯೋಗ ಆಯಿತು? ಖಾದಿ ವಿಷಯದ ಬಗ್ಗೆ ಮಾತನಾಡಲಿಕ್ಕೆ ಐದು ನಿಮಿಷವಾದರೂ ಅವಕಾಶ ಕೊಡಿ. ನಾನು ಯಾವತ್ತೂ ತಮ್ಮನ್ನು ಕಾಡಿ ಸಮಯವನ್ನು ಕೇಳಿಯೇ ಇಲ್ಲ.

ಅಧ್ಯಕ್ಷರು.—ಇಲ್ಲ, ಸಾಧ್ಯವಿಲ್ಲ. ಶ್ರೀ ಲೈಕುದ್ದೀನ್ ಅವರೇ ನೀವು ಶುರುಮಾಡಿ.

ಶ್ರೀ ಜಿ. ಎಸ್. ನಂಜಯ್ಯನಮಠ್.—ತಾವು ಬೆಲ್ ಹೊಡೆದಾಗೆಲ್ಲ ನಾನು ಕುಳಿತುಕೊಂಡಿದ್ದೇನೆ.

ಅಧ್ಯಕ್ಷರು.—ನೀವು ಹೀಗೆ ಮಾಡಿದರೆ ಹೇಗೆ? ಈಗ ಐದು ಗಂಟೆಯಾಗಿದೆ. ಇನ್ನೂ ಒಂದು ತಾಸು ಕೂತಿರಬೇಕು ಅಂತೀರೇನು?

ಶ್ರೀ ಎಸ್. ಜಿ. ನಂಜಯ್ಯನಮಠ್.—ಕೂತರೆ ಏನಾಯಿತು?

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ...

ಅಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಏನು ಹೇಳುತ್ತೇನೆ ಎಂದು ಸ್ವಲ್ಪ ಕೇಳಿ ಸ್ವಾಮಿ.

ಅಧ್ಯಕ್ಷರು.—ನೀವು ಹೇಳುವುದು ನನಗೆ ಬೇಕಾಗಿಲ್ಲ. ಸಭೆ ಹೇಗೆ ನಡೆಸಬೇಕು ಎನ್ನುವುದು ನನಗೆ ಗೊತ್ತಿದೆ. ದಯವಿಟ್ಟು ಕುಳಿತುಕೊಳ್ಳಿ. ಇಲ್ಲಿ ಓದುತ್ತೇನೆ ಕೇಳಿ

"The Speaker may if he thinks fit, prescribe a time limit for speeches"

You are a senior member in this House. You know all the rules of proceduer in this House. ನಿಮಗೆ ೩ ನಿಮಿಷ ಕೊಟ್ಟಿದ್ದೇನೆ. ಇನ್ನೂ ಸಾಲದು ಎನ್ನುತ್ತೀರಿ. ಆಯಿತು. ಕೊನೆಯದಾಗಿ ಸರ್ಕಾರಕ್ಕೆ ಹೇಳಿಬಿಡಿ. ಟೈಮ್ ಇದ್ದರೆ ನಾನು ಅವಕಾಶ ಮಾಡಿಕೊಡುತ್ತೇನೆ. ನೀವುಗಳು ಸಹಕರಿಸಬೇಕಾಗುತ್ತದೆ.

† ಶ್ರೀ ಎಸ್. ಜಿ. ಸಂಜಯ್ಯನವುಠ್.—ಅಧ್ಯಕ್ಷರೇ, ಈ ಕೈಗಾರಿಕೆ ವಿಷಯವಾಗಿ ನಾನು ಸರ್ಕಾರದ ಗಮನಕ್ಕೆ ತರುವುದಾದರೆ ಏಪ್ರಿಲ್ ತಿಂಗಳಿನಲ್ಲಿ ಪ್ರತ್ಯೇಕವಾದಂಥ ನಿರ್ದೇಶನಾಲಯಂ ಪ್ರಾರಂಭಿಸುತ್ತೇವೆ ಎಂಬ ಮಾತನ್ನು ಸರ್ಕಾರದವರು ಹೇಳಿದ್ದರು. ಅವತ್ತು ಇದ್ದಂಥ ಶ್ರೀ ಜೀವಿಜಯ ಅವರು ಇವತ್ತು ಅಧಿಕಾರದಲ್ಲಿ ಇಲ್ಲ, ಅಧ್ಯಕ್ಷರೇ, ಏಪ್ರಿಲ್ ಹೋಗಿ, ಮೇ, ಜೂನ್ ಬಂದರೂ ಕೂಡ ಯಾವುದೇ ಒಂದು ಬೆಳವಣಿಗೆಯಾಗಲಿ, ಯಾವುದೇ ಒಂದು ವ್ಯವಸ್ಥೆಯಾಗಲೀ ಆಗುತ್ತಿಲ್ಲ ಅದನ್ನು ತೀವ್ರವಾಗಿ ಮಾಡುವುದರ ಜೊತೆಗೆ ಇನ್ನೊಂದು ಸನ್ನಾಹ ನಡೆದಿದೆ, ಅದು ಏನೆಂದರೆ ಐ. ಎ. ಎಸ್. ಅಧಿಕಾರಿಯನ್ನು ತಂದು ಇಲ್ಲಿ ಕೂಡಿಸಬೇಕು ಎಂಬುದು ನಾನು ಐ. ಎ. ಎಸ್. ಅಧಿಕಾರಿಗಳ ವಿರೋಧಿಯಲ್ಲ, ಆದರೆ ಹ್ಯಾಂಡ್‌ಲೂಮ್ ವಿಷಯದಲ್ಲಿ ಪರಿಣಿತರಾಗಿರತಕ್ಕಂಥ ಎಷ್ಟೋ ಅಧಿಕಾರಿಗಳು ನಮ್ಮಲ್ಲಿ ಇದ್ದಾರೆ, ಅವರಿಗೆ ಲಾಳಿ ಎಂದರೆ ಗೊತ್ತು ನೂಲು ಎಂದರೆ ಗೊತ್ತು ನೌಕರರ ಸಮಸ್ಯೆಗಳೇನು, ಅವರ ಬವಣೆಗಳೇನು ಎಂದು ಗೊತ್ತಿರತಕ್ಕಂಥವರು ಇದ್ದಾರೆ. ಅಂತಹವರು ಯಾರಾದರೊಬ್ಬರನ್ನು ಇಲ್ಲಿಗೆ ನಿರ್ದೇಶಕರನ್ನಾಗಿ ನೇಮಿಸಿದರೆ ಈ ಒಂದು ಉದ್ಯಮಕ್ಕೆ ಸಹಾಯವಾಗಿ ಅದರ ಬೆಳವಣಿಗೆಯಾಗುವುದರ ಜೊತೆಗೆ ಸಮಸ್ಯೆಗಳು ಪರಿಹಾರವಾಗಲಿಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸುತ್ತೇನೆ. ಗಾಂಧೀಜಿಯವರ ಕನಸಿನ ರಾಮರಾಜ್ಯ ಸ್ಥಾಪನೆ ಆಗಬೇಕಾದರೆ ಗಾಂಧಿ ವಿಚಾರಧಾರೆ ರಾಜ್ಯದಲ್ಲಿ ಆಗಲಿ, ರಾಷ್ಟ್ರದಲ್ಲಾಗಲೀ ಸಾಕಷ್ಟು ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬರಬೇಕು. ಖಾದಿ ವಿಷಯದಲ್ಲಿ ಭಾರಿ ಪ್ರಮಾಣದ ಅನಾಸ್ಥೆಯನ್ನು ಸರ್ಕಾರ ತೋರಿಸಿದೆ. ಸ್ವಾಮಿ, ೧೪೪೧ ರಿಜಿಸ್ಟರ್ಡ್ ಸಂಘಗಳು ಇದ್ದರೆ, ೧೭೪೩ ಸಹಕಾರ ಸಂಘಗಳು ಇದ್ದರೆ ಒಂದು ಲಕ್ಷ ೫೦ ಸಾವಿರ ಜನರಿಗೆ ಉದ್ಯೋಗಾವಕಾಶ ಸಿಗುತ್ತದೆ. ಇಷ್ಟು ಪ್ರಮಾಣದಲ್ಲಿ ಜನರಿಗೆ ಉದ್ಯೋಗವನ್ನು ದೊರಕಿಸಿಕೊಟ್ಟಿದ್ದು ಖಾದಿ ಒಂದು ಸ್ಪಿನ್ನಿಂಗ್ ಮಿಲ್‌ಗೆ ೨೫ ಕೋಟಿ ರೂಪಾಯಿ ಬಂಡವಾಳ ಬೇಕು ೨೪ ಕೋಟಿ ಬಂಡವಾಳ ಹೂಡಿದರೆ ಎಂಟುನೂರು ಅಥವಾ ಸಾವಿರ ಜನರಿಗೆ ಎರಡು ಸಾವಿರಗಿಂತ ಹೆಚ್ಚು ಜನರಿಗೆ ಕೆಲಸ ಒದಗಿಸುವುದಕ್ಕೆ ಆಗುವುದಿಲ್ಲ. ಆದರೆ ಕಡಿಮೆ ಬಂಡವಾಳವನ್ನು ಹೂಡಿ ಲಕ್ಷಾನುಗಟ್ಟಲೆ ಜನಕ್ಕೆ ಉದ್ಯೋಗ ಕೊಡುವಂಥಾದ್ದು ಈ ಖಾದಿ ವ್ಯವಸ್ಥೆ. ಇದರಲ್ಲಿ ಪ್ರತಿಸಾರಿಯೂ ನಿಗದಿ ಮಾಡಿದಷ್ಟು ಹಣ ಕೊಡುತ್ತಿಲ್ಲ. ಅವರು ಕೇಳಿದ್ದು ಮುನ್ನೂರು ಲಕ್ಷ ಕೊಟ್ಟಿದ್ದು ತೊಂಭತ್ತೈದು ಲಕ್ಷ, ಇದರ ಜೊತೆಗೆ ೫೫-೫೬, ೫೬-೫೭, ೫೭-೫೮ ಸಾಲಿಗೆ ಕೊಡಬೇಕಾದ ರಿಬೇಟ್ ಅನ್ನು ಇನ್ನೂ ಕೊಟ್ಟಿಲ್ಲ. ಸುಮಾರು ಎರಡೂವರೆ ಕೋಟಿ ರೂಪಾಯಿ ಈ ಖಾದಿ ವಿಷಯವಾಗಿ ರಿಬೇಟ್ ಸರ್ಕಾರದಿಂದ ಈ ಸಂಸ್ಥೆಗಳಿಗೆ ಕೊಡಬೇಕಾಗಿರತಕ್ಕಂಥಾದ್ದು ಇದೆ, ಇದರ ಜೊತೆಗೆ ದಯವಿಟ್ಟು ಮಾರಾಟದ ವ್ಯವಸ್ಥೆಯನ್ನು ಮಾಡಿ. ನಾನು ತಮ್ಮ ಮೂಲಕ ವಿಷಾದದಿಂದ ಒಂದು ಮಾತನ್ನು ಹೇಳುವುದೇನೆಂದರೆ ತಮ್ಮ ಕ್ಷಮೆಕೇಳಿ ಇವತ್ತು ಸಲಹೆಯನ್ನು ಇಡುತ್ತಿದ್ದೇನೆ. ಇವತ್ತು ಜನರ ಪ್ರತಿನಿಧಿಗಳಾದಂಥ ನಾವೇ ಅಂದರೆ ಸದಸ್ಯರು, ಖಾದಿಯನ್ನು ಧರಿಸಿಕೊಂಡು ಬರಬೇಕೆನ್ನುವ ವ್ಯವಸ್ಥೆ ಮಾಡಿದರೆ ಎಷ್ಟೋ ಉಪಕಾರವನ್ನು ಗಾಂಧೀಜಿಯವರಿಗೆ ಸಲ್ಲಿಸಿದಂತಾಗುತ್ತದೆ ಎಂದು ನಾನು ಪ್ರಾಮಾಣಿಕವಾಗಿ ಕೇಳಿಕೊಳ್ಳುತ್ತೇನೆ. ಇಲ್ಲಿ ಶ್ರೀ ರಘುಪತಿಯವರು ಜಪಾನ್ ಸಿಲ್ಕ್ ಬಟ್ಟೆ ಧರಿಸಿಕೊಂಡು ಬರುತ್ತಾರೆ. ಆದ್ದರಿಂದ ಇಂತಹ ಒಂದು ವ್ಯವಸ್ಥೆಯನ್ನು ಈ ಸದನದಲ್ಲಾದರೂ ಮಾಡಿ ಮಹಾತ್ಮಾ ಗಾಂಧಿಯವರ ಕನಸನ್ನು ನನಸು ಮಾಡುವಂಥ ಕೆಲಸ, ಅಧಿವೇಶನ ನಡೆಯುವಾಗ ದಿನಕ್ಕೆ ಆರೆಂಟು ತಾಸು ಆದರೆ ಎಷ್ಟೋ ಸಹಾಯವನ್ನು ನಾವು ಈ ಉದ್ಯಮದಲ್ಲಿರುವವರಿಗೆ ಮಾಡಿದಂತಾಗುತ್ತದೆ. ಎಷ್ಟೋ ಉದ್ಯೋಗಾವಕಾಶವನ್ನು ಒದಗಿಸಿಕೊಟ್ಟಂತಾಗುತ್ತದೆ ಎನ್ನುವ ವಿಷಯವನ್ನು ತಿಳಿಸುವುದರ ಜೊತೆಗೆ ಸರ್ಕಾರ ನೇರವಾಗಿ ಖಾದಿ ಖರೀದಿ ವ್ಯವಸ್ಥೆಯನ್ನು ಮಾಡಬೇಕು.

ಇವತ್ತು ಬರೀ ಆರೋಗ್ಯ ಇಲಾಖೆಗೆ ಬೆಡ್‌ಷೀಟ್ ಸಪ್ಲೈ ಮಾಡಿದರೆ ಸಾಕು, ಎಷ್ಟೋ ಲಕ್ಷ ಖಾದಿ ನೇಕಾರರು, ಖಾದಿ ಕೂಲಿಕಾರರು ಚೆನ್ನಾಗಿ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಖಾದಿ ವಸ್ತುಗಳನ್ನೇ ಖರೀದಿ ಮಾಡಬೇಕೆಂದು ಸರ್ಕಾರಿ ಆಜ್ಞೆ ಆಗಿದೆ. ಆದರೆ ಇದುವರೆಗೆ ಯಾರೂ ಖರೀದಿ ಮಾಡಿಲ್ಲ. ಇದು ಯಾವ ಇಲಾಖೆಯಲ್ಲಿ ಜಾರಿಯಾಗಿದೆ ಹೇಳಿ. ಅಷ್ಟೇ ಅಲ್ಲ, ಶಾಸಕರ ಭವನದಲ್ಲಿ ಕೂಡ ದೊಡ್ಡ ದೊಡ್ಡ ಫ್ಯಾಕ್ಟರಿಗಳಾದ ದಿಗ್ವಿಜಯ, ದಿನೇಶ್, ವಿಜಯ ಫ್ಯಾಕ್ಟರಿಗಳ ಬೆಡ್‌ಶೀಟುಗಳನ್ನು ಉಪಯೋಗ ಮಾಡುತ್ತಿದ್ದಾರೆ. ಕೊನೆಯ ಪಕ್ಷ ಅಲ್ಲಿ ಹ್ಯಾಂಡಲೂಮ್ ಬಟ್ಟೆಯ

ನ್ನಾದರೂ ಹಾಕುವ ವ್ಯವಸ್ಥೆ ಮಾಡಬೇಕು, ಹೀಗೆ ಮಾಡಿದರೆ ಅನುಕೂಲವಾಗುತ್ತದೆ. ಈ ಕಸುಬನ್ನೇ ಅವಲಂಬನೆ ಮಾಡಿರುವವರು ಬದುಕುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿ, ದಯವಿಟ್ಟು ಸರ್ಕಾರ ಖಾದಿ ಬಟ್ಟೆಗಳನ್ನೇ ಖರೀದಿ ಮಾಡುವ ವ್ಯವಸ್ಥೆ ಮಾಡಬೇಕು. ಇವತ್ತು ೨೯೦ ಖಾದಿ ಭಂಡಾರಗಳು ಇವೆ. ಈ ರಾಜ್ಯದಲ್ಲಿ ಇವು ಖಾದಿ ಬಟ್ಟೆಯನ್ನು ಮಾರಾಟ ಮಾಡುತ್ತಿವೆ. ಈ ೨೯೦ ಖಾದಿ ಭಂಡಾರಗಳು ಸರ್ಕಾರದಭಂಡಾರಗಳಲ್ಲ. ಹಾಗಾದರೆ ಈಖಾದಿ ಜಗತ್ತಿಗೆ ಸರ್ಕಾರದ ಕೊಡುಗೆ ಏನು ಖಾದಿ ಭಂಡಾರಗಳು. ಖಾದಿ ಸಂಸ್ಥೆಗಳು ಉತ್ಪಾದನೆ ಮಾಡುವಂಥ ವಸ್ತುಗಳನ್ನು ಮಾಡುತ್ತವೆ. ಇವು ಮಾಡದೇಹೋದರೆ, ೪೦೦-೫೦೦ ಜನರಿಗೆ ಈ ಖಾದಿಯ ಕಸಬನ್ನು ಅವಲಂಬನೆ ಮಾಡಿರುವವರಿಗೆ ಕೂಲಿಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಉತ್ಪಾದಿತ ವಸ್ತುಗಳನ್ನು ದಯಮಾಡಿ ಸರ್ಕಾರ ಖರೀದಿ ಮಾಡಬೇಕು. ಒಂದೇ ಒಂದು ಆರೋಗ್ಯ ಇಲಾಖೆಗೆ ಕೊಟ್ಟರೆ ಸಾಕು, ಖಾದಿ ಜಗತ್ತು ಬದುಕು ವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಲಹೆ ಕೊಟ್ಟಿದ್ದರು. ಏನೆಂದರೆ ಒಂದು ಕೋಟಿ ರೂಪಾಯಿ ಬೆಲೆಯ ಪಾಲಿಸ್ಟರ್ ಖಾದಿ ಉತ್ಪಾದನೆ ಮಾಡಿ, ಅದನ್ನು ತೆಗೆದು ಕೊಳ್ಳೋಣ ಎಂದು ಇದರ ಬಗ್ಗೆ ಸ್ಪಷ್ಟವಾದ ಆದೇಶ ಬರಲಿಲ್ಲ. ಇದರ ಬಗ್ಗೆ ಸ್ಪಷ್ಟವಾದ ಆದೇಶ ವನ್ನು ಹೊರಡಿಸಿ, ಉತ್ಪಾದನೆಯಾಗುವ ಖಾದಿಯನ್ನು ಖರೀದಿ ಮಾಡುವ ವ್ಯವಸ್ಥೆಯನ್ನು ಮಾಡ ಬೇಕೆಂದು ಹೇಳುತ್ತೇನೆ. ಮಾರಾಟಕರ ನಮ್ಮ ರಾಜ್ಯದಲ್ಲಿ ಮಾತ್ರ ಇದೆ. ೧೦ ಲಕ್ಷ ರೂಪಾಯಿ ಮೀರಿದ ಉದ್ಯಮಕ್ಕೆ ಮಾರಾಟಕರ ವ್ಯವಸ್ಥೆಯನ್ನು ಮಾಡಿದ್ದಾರೆ. ಅದೇ ತಮಿಳುನಾಡಿನಲ್ಲಿ, ಕೇರಳ ದಲ್ಲಿ ಆಂಧ್ರದಲ್ಲಿ ಎಷ್ಟೇ ಉತ್ಪಾದನೆ ಮಾಡಲಿ, ಖಾದಿ ಗ್ರಾಮೋದ್ಯೋಗದಿಂದ ಉತ್ಪಾದನೆ ಮಾಡಿದ ವಸ್ತುಗಳ ಮೇಲೆ ಕರಗಳ ಸಂಪೂರ್ಣ ವಿನಾಯಿತಿ ಇದೆ. ನಮ್ಮ ಪಕ್ಕದ ರಾಜ್ಯಗಳಲ್ಲಿ ಈ ರೀತಿ ವ್ಯವಸ್ಥೆ, ಪ್ರೋತ್ಸಾಹ ಇದ್ದಾಗ, ದಯವಿಟ್ಟು ತಾವೂ ಕೂಡ ಅನುಕರಣೆ ಮಾಡಿ, ನಮ್ಮ ರಾಜ್ಯದಲ್ಲಿ ಈ ವ್ಯವಸ್ಥೆ ಬರಲಿ ಎಂದು ಹೇಳಿ, ಕೆಲವೊಂದು ಕಡೆ ಡಿ ಆರ್, ಡಿ. ಎಸ್. ಸಹಾಯದಿಂದ ಕೆಲವೊಂದು ಜಿಲ್ಲೆಗಳಲ್ಲಿ ಬಿಜಾಪುರ. ಚಿತ್ರದುರ್ಗ ಜಿಲ್ಲೆಗಳು, ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಖಾದಿ ಆಯೋಗದಿಂದ. ಖಾದಿ ಮಂಡಲಿಯಿಂದ ಉದ್ಯೋಗದ ವ್ಯವಸ್ಥೆ ಮಾಡಲಾಗಿದೆ. ಇದು ಇಷ್ಟೇ ಜಿಲ್ಲೆಗಳಿಗೆ ಮಾಡದೇ ದಯಮಾಡಿ ಎಲ್ಲಾ ಜಿಲ್ಲೆಗಳಿಗೂ ಖಾದಿ ಉದ್ಯಮದ ಸಲುವಾಗಿ ಡಿ ಆರ್, ಡಿ. ಎಸ್. ಸಹಾಯ ದೊರೆತು. ಫಲಾನುಭವಿಗಳಿಗೆ ಅನುಕೂಲವಾಗುವ ವ್ಯವಸ್ಥೆಯನ್ನು ಮಾಡಬೇಕು. ಎಲ್ಲಾ ಜಿಲ್ಲೆಗಳಲ್ಲಿ ಕೈಮಗ್ಗದ ನೇಕಾರರ ವ್ಯವಸ್ಥೆಯು ಡಿ. ಆರ್. ಡಿ. ಎಸ್. ಯೋಜನೆ ಕೆಳಗಡೆ ಬರುತ್ತದೆ. ಆದರೆ ಖಾದಿ ಕಾರ್ಯಕರ್ತರು, ಖಾದಿ ಮಗ್ಗಗಳಲ್ಲಿ ನೇಯುವವರು ಬರುವುದಿಲ್ಲ ಆದ್ದ ರಿಂದ ಇದನ್ನು ಎಲ್ಲಾ ಜಿಲ್ಲೆಗಳಲ್ಲೂ ಅಳವಡಿಸಬೇಕೆಂದು ಹೇಳುತ್ತೇನೆ. ಕೊನೆಯದಾಗಿ, ಖಾದಿ ಸಂಸ್ಥೆಯಲ್ಲಿ ಕೆಲಸ ಮಾಡುವವರು ಸುಮಾರು ೫೦-೬೦ ವರ್ಷಗಳು ಕೆಲಸ ಮಾಡಿದರೂ ಕೂಡ ಅವರಿಗೆ ೪೦೦-೫೦೦ ರೂಪಾಯಿಗಳಿಗಿಂತ ಹೆಚ್ಚಿನ ಸಂಬಳ ಇಲ್ಲ. ಈ ಸಂಘಗಳಿಗೆ ಆಯೋಗ ನಿರ್ಧಾರ ಮಾಡಿರ ತಕ್ಕ ದರದಲ್ಲಿ ಸಂಬಳ ಕೊಡಬೇಕಾಗುತ್ತದೆ. ಇಂತಿಷ್ಟು ಮಾರ್ಜಿನ್ ಸಂಬಳ ಕೊಡಬೇಕೆಂದು ನಿಯಮ ಇದೆ, ಶ್ರೀ ಮಾನ್ ಆರ್. ವಿ, ದೇಶಪಾಂಡೆಯವರು ಇದ್ದಾಗ, ಖಾದಿ ಜಗತ್ತಿನಲ್ಲಿ ಕೆಲಸ ಮಾಡುವ ನಾವೆಲ್ಲರೂ ಈ ವಿಚಾರದಲ್ಲಿ ಕೇಳಿ ಕೊಂಡಾಗ ಇದಕ್ಕೆ ಒಂದು ಸಮಿತಿಯನ್ನು ನೇಮಿಸುತ್ತೇವೆಂದು ಹೇಳಿದರು. ಆದರೆ ಅವರು ಈಗ ಬದಲಾಗಿ ಬಿಟ್ಟರು ಈಗ ತಾವು ಇದ್ದೀರಿ. ಇದಕ್ಕೆ ಒಂದು ಸಮಿತಿಯನ್ನು ನೇಮಿಸಿ ಈ ಖಾದಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸಾವಿರಾರು ಕಾರ್ಯಕರ್ತರುಗಳಿಗೆ ಸರ್ಕಾರದಿಂದ ಎಷ್ಟು ಸಂಬಳ ಸಿಗುತ್ತದೆ ಅದರಷ್ಟೇ ಹಣವನ್ನಾಗಲೀ. ಅದರ ಅರ್ಧದಷ್ಟು ಹಣವನ್ನಾ ಗಲೀ, ಸರ್ಕಾರ, ಖಾದಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಕೊಟ್ಟರೆ ಅನುಕೂಲವಾದೀತು ಎಂದು ಹೇಳುತ್ತೇನೆ. ಖಾದಿ ಭಂಡಾರಗಳಲ್ಲಿ, ಖಾದಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಕನ್ಯೆಯನ್ನು ಕೊಡು ವಂಥ ಪರಿಸ್ಥಿತಿಯೂ ಇಲ್ಲ, ಏಕೆಂದರೆ, ಇಲ್ಲಿ ೨೫೦ ರೂಪಾಯಿಯಿಂದ ೫೦೦ ರೂಪಾಯಿಗಳಿಗಿಂತ ಹೆಚ್ಚು ಸಂಬಳ ಇರುವವರು ಇಲ್ಲ. ಆದ್ದರಿಂದ ಈ ವ್ಯವಸ್ಥೆಯನ್ನು ಸರ್ಕಾರ ಮಾನವೀಯ ಅನು ಕಂಪದ ಆಧಾರದ ಮೇಲೆ ತೆಗೆದುಕೊಂಡು, ಇವರಿಗೆ ಅನುಕೂಲ ಮಾಡಬೇಕೆಂದು ತಿಳಿಸುತ್ತೇನೆ. ಜೊತೆಗೆ ಸರ್ಕಾರ ಈ ಖಾದಿಗೆ ಒಂದೇ ಒಂದು ಉಪಕಾರ ಮಾಡಿದರೆ ಸಾಕು, ಉತ್ಪಾದಿತ ವಸ್ತುಗಳನ್ನು ಖರೀದಿ ಮಾಡುವ ವ್ಯವಸ್ಥೆ ಮಾಡಿದರೆ, ಭಾರಿ ಪ್ರಮಾಣದ, ಅನುಕೂಲತೆ ಮಾಡಿಕೊಟ್ಟಂತಾಗುತ್ತದೆ ನ್ನುವ ಮಾತನ್ನು ತಿಳಿಸಿ, ಈ ಸಲಹೆಗಳನ್ನು ಸರ್ಕಾರ ಆದಷ್ಟು ತೀವ್ರವಾಗಿ ಜಾರಿಗೊಳಿಸುವಲ್ಲಿ ಮುಂದಾಗಬೇಕೆಂದು ತಿಳಿಸಿ, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI MOHAMED LAIQUDDIN (Bidar).—Mr. Speaker, Sir, the development of any country or any region or State depends upon the progress of the industrial march in that particular country or the State or the region. In Karnataka, we had reached to a certain point in the development of industrial matters. Quite a few years, our progress has become reversed and we are moving in a reverse direction, The policy of the State Government is now to develop industries around Bangalore City Mysore City which are already developed areas. They are concentrating more in and around Bangalore and Mysore Cities. The policy towards the rural part of the State is totally neglected and no head is being given to the areas which are more backward. I specifically stress on this point because the Government of India has declared Bidar District as 'No Industry District' and the Government of India has also created certain incentives for the new enterpreneurs and the new industrialists to start new industries in all districts. Balanced development of different regions within a particular part of the State is quite necessary. Success and failure will have to be evaluated in terms of social activity. A less profitable venture providing employment in a dispersed regions may be more desirable from the national point of view than the investment being made in the already over-populated areas My stress will be upon the areas where the industrial development is lesser. I would like to give an example of my own district, Bidar where several Industries have been set up. Let us study the circumstances under which those industries are now being sick. I will bring to the kind notice of the House as well as the Hon'ble Minister for industries about the sick industries in my district. The Hon'ble Minister, Sri J. H. Patel had visited Bidar last year and he had promised that the mini power plant at Bidar will be set up and this mini power plant run by diesel costing more than Rs. 18 Crores and budget provision was made for the past two years about this mini power plant. But this year, no budget provision has been made, I don't know the reason why it has been removed. I learn that the Central Government has given clearance for the establishment of mini power plant at Bidar but still our Government has not taken any interest to establish the mini power plant at Bidar. I want to ask the Hon'ble Minister for Industries why budget provision has not been made for this mini power plant during this year. It is more important to earmark money for this because the growth of industry depends upon the supply of power and water and the infrastructure provided by the Government. In the previous two years, for Bidar District, it was promised to supply water to the industrial area i.e., Navbagh and Kolag and the cost of the scheme was Rs. 6½ Crores. No budget provision has been made for

the supply of power to the industrial area in my district in this year's budget. My request to the Hon'ble Minister for Industries is this. Bidar District has already been declared as the 'No Industrial District' and our area happens to be the most backward area and in order to remove the regional imbalance, creation of potentials and infrastructures in the backward regions or in the backward areas is quite essential in the interest of public and also in order to provide employment opportunities to the people of backward areas. In order to give light to the already backward area, it is necessary to taken more interest in the developmental activities in those backward areas like Bidar, particularly in the field of industry.

with this background I will quote another instance of Naranga Sugar Factory. The Hon'ble Speaker may be knowing that Bidar is having a sugarcane production mach more than or other areas. We are already having an co-operative sector industry that is Hallikhed Bidar Sugar Factory, Sir. Sugar production in Bidar district is more than three times of the capacity which our sugar factories are now taking sugarcane from the farmers. The establishment of Naranga sugar factory is a must. Since the last three years we are stressing the Government that the entire papers should be built up and technical opinion should be taken. This matter is being pursued since the last three years but only a few months back i.e. in the month of January of February papers have been forwarded and that too incomplete papers have been forwarded. So, I request the Hon'ble Minister that in order to supplement the needs of the farmers Narange Sugar Factory should be established. Licence should be obtained from the Central Government and that industry should be started as early as possible. Share capital for the purpose of establishment of Naranga sugar factory, has been collected. So this factory may be established at an early date.

Now I will bring to the kind notice of the Hon'ble Minister that the sugar industry in our State is not having a good picture in the entire country. Sugar production or sugar industry has not attracted the attention of the Government The number of sugar factories was only 216 a decade before and now the growth of the sugar factories has gone up to nearly 350. As regards the loss and profit point of view the Bidar sugar factory is not under loss while other sugar factories are in loss. The other sugar factories are being provided with finances and other facilities but in our area it is not so. Sugarcane cultivation is taken up in an area of more than 80,000 acres. So, my humble submission will be that the Naranga sugar factory should be taken up because recovery of sugarcane in our area is more than that of Maharashtra, Tamil Nadu and the

Andhra Pradesh. Particularly Maharashtra has exceeded the sugar production while our Karnataka State is lagging behind in the sugar production.

Now I would like to bring to the notice of the Hon'ble Minister another local problem. I have brought it previously also. That is, Bidriware industry. It is an age old industry and a beautiful industry. Since last 500 years it has survived. Now I fear this beautiful Bidriware industry is going to be perished. After declaration of Bidar as no industry district Government is providing 25 percent subsidy to the enterpreneurs, that is all enterpreneurs-whether it is small or big. Industrialists are being given 25 percent subsidy and 15 per cent developmental loan free of interest in Bidar district. But Bidriware industry is not receiving a single pie as subsidy or development loan. The Project Officer is harassing the rural artisans like anything. I have brought this matter to the notice of the Hon'ble Minister also. Due to non-providing of raw materials to these Bidriware artisans they are migrating to the neighbouring State. The Bidriware industry which took birth in Bidar is perishing and it is being shifted to Andhra Pradesh. Half of the artisans have migrated to Hyderabed and there is no encouragement from the Government. Neither subsidy nor loan facility is being provided to the artisans. Revolving amount of Rs. 1500 was being provided. I had requested to raise it to Rs.3000 at least. But for releasing of that 1500 rupees also the project officer is harassing the artisans like anything. He is not giving raw material to the artisans. Raw material is not being given and also any finance is being given. Within that amount of Rs. 1500 they have to prepare the finished goods. Even for taking the finished goods also the project officer is harassing. He is rejecting the finished goods. In this process he is passing on one month, two months, or three months. He is giving raw materials after one month and for taking the finished goods also he is taking another one month. The artisans will get only 500 or 600 profit per month. Whether it is possible to survive within that amount. It is impossible. For that reason only this industry is being migrated. I request the Hon'ble Minister to post a good officer there. I am not interested in this man. I request the Hon'ble Minister to send a good man who is interested in the age old industry which is having international popularity. It is being damaged like anything and out of it the other State i.e. Andhra Pradesh is getting benefit.

As regards the subsidy and developmental loan, this subsidy is not being distributed. Subsidy of 25 per cent and developmental loan of 40 per cent will have to be given and the remaining 60 percent

will be supplemented by financial agencies. Government of Karnataka is not distributing the subsidy amount which is 25 per cent and also 15 per cent loan. As a result our projects are being delayed. Financial agencies who have released the amount are charging interest and in this way the interest amount is being piled up even before the starting of the industry.

5-30 P. M.

Since the very inception the industry becomes sick. This sickness of the Industry should be avoided and the new entrepreneurs who are investing their entire life, at times, by selling their jewelleries and hard earnings, are given proper encouragement. The most important thing is, whether their industry will be established and whether they will bring their respective products in the market. As regards release of the amount, about 40% constitute the subsidy and development loan. In my area and other parts of the State ; the financial agencies are not releasing the amount in time. They take months together. It is a sort of sickness, It should be avoided. If the amount is released earlier to the entrepreneurs, then the industery may come up early. There are single window agencies. There are TECSOK and other agencies who are preparing the project reports. When we actually start erecting machineries then there will be cost escalation by 1½ times. The cost of a project of Rs. 1 crore 50 lakhs, by the time it is completed, goes upto Rs. 2 crores. There are technical agencies who are advising to new entrepreneurs. They are mis guiding the new entrepreneurs they are I demand that these agencies should be abolished first. taking away the life of the industry itself. I want to tell you my own experience. I have started an industry and the cost of that industry was shown as only Rs. 1,51,000,00 Now, it would cost Rs. 2,25,000,00. In this way, the technical opinion which is being given by Single window agency, TECSOK or COSMOS, whatever it is-they are not giving correct opinion. When we go to financial agencies KSPFC or KSSIDC, we have to bargain. We have to hypothicate the entire factory, our own asset and property. This is the state of affairs which is being commonly experienced. I request the Hon. Minister to remove these anamolies.

Lastly Sir, agriculture is for food and forest for wood. The sugarcane not only gives sugar but several other industries will be spread out i.e., chemicals, alcohol, Paper-mills. Similarly, Eucalyptus plantation could be taken up. It is not forest. It can be use for industrial purpose. In this way. the industrial structure should be so formulated that it should

reach to the forthest part of the State and for the benefit of villagers in rural areas. Unfortunately our Government has not taken much interest in the agro-based industries as well as forest-based industries. I request the Government to make a special provision for establishment of agro-based industries and more encouragement should be given for forest-based industries. I would also bring to the notice of the Government that the traditional village artisans particularly engaged in Blacksmithy, Goldsmithy etc. are being neglected. They are not conversant with the new techniques. They are having the same old tools of hundred years back. There is no change in the design of their products. I request the Government to open training centres in the rural areas for the traditional artisans so that they may market more products, and improve their traditional technique. They should also be provided with modern tools and machines.

With these few words, I thank the Chair for giving me more time to speak on this Demand.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾಳೆ ಕಂಟಿನ್ಯೂ ಮಾಡೋಣ.

ಅಧ್ಯಕ್ಷರು.— ಇವತ್ತು ಸದಸ್ಯರೆಲ್ಲ ಮಾತಾಡಲೇಬೇಕು. ಬೇಕಾದರೆ ನಾಳೆ ಸಚಿವರಿಂದ ಉತ್ತರ ಕೊಡಿಸೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೋಡಿ, ಅವರ ಪಾರ್ಟಿ ಮೀಟಿಂಗ್ ಇದ್ದ ದಿವಸ ಬೇಗ ಅಡ್ಜರ್ನ್ ಮಾಡುತ್ತೀರಿ, ಇವತ್ತು ನಮ್ಮದೂ ಸ್ವಲ್ಪ ಕೆಲಸ ಇದೆ.

ಮಾನ್ಯ ಅಧ್ಯಕ್ಷರು.— ನನಗೆ ಎಲ್ಲರೂ ಒಂದೇ. ಅವರಿಗೆ ಬಿಟ್ಟಂತೆ ನಿಮ್ಮದಿರುವಾಗಲೂ ಬಿಟ್ಟಿದ್ದೇನೆ. ಇವತ್ತು ಇದು ಮುಗಿಯಲೇಬೇಕು.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.— ಸಭಾಧ್ಯಕ್ಷರೇ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಬಗ್ಗೆ ಎರಡು ಮಾತುಗಳನ್ನಾಡಬಯಸುತ್ತೇನೆ. ಕೈಗಾರಿಕೆಯಾಗಲಿ, ಅಗ್ರಿಕಲ್ಚರಾಗಲಿ ಅಥವಾ ಪಾಪ್ಯುಲೇಷನಾಗಲೀ ಈ ಮೂರು ನಮ್ಮ ಪ್ಲಾನಿಂಗ್‌ನಲ್ಲಿ ಮುಖ್ಯವಾದ ಪಾತ್ರ ವಹಿಸುತ್ತವೆ. ಆ ಮೂಲಕ ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಮತ್ತು ಬೆಳೆಸುವಲ್ಲಿ ಕಾರಣವಾಗುತ್ತವೆ. ಒಂದು ಪಕ್ಷ ಇವುಗಳಲ್ಲಿ ಸರಿಯಾಗಿ ಪ್ಲಾನಿಂಗ್ ಮಾಡದೇ ಹೋದರೆ ದೇಶ ಕಷ್ಟದಲ್ಲಿ ಸಿಕ್ಕಿ ಹಾಕಿಕೊಂಡು ಒದ್ದಾಡುವ ಪರಿಸ್ಥಿತಿಗೆ ಬರುತ್ತದೆ. ಇದುವರೆಗೂ ಕೂಡ ನಮ್ಮ ದೇಶ ವ್ಯವಸಾಯವನ್ನೇ ನಂಬಿಕೊಂಡು ಅದರ ಉತ್ಪತ್ತಿಯಲ್ಲೇ ಜೀವನಯಾಪನೆ ಮಾಡಿಕೊಂಡು ಬಂದಿತ್ತು. ಆದರೆ ಅದರಿಂದ ಇವತ್ತು ಜನಸಂಖ್ಯೆ ಜಾಸ್ತಿಯಾಗಿ ಅವರ ಬಾಯಿ ತುಂಬಲು ಸಾಕಷ್ಟು ಜಮೀನೇ ಇಲ್ಲ. ಅದಕ್ಕೋಸ್ಕರ ಕೈಗಾರಿಕೆಯನ್ನು ಹೆಚ್ಚಿಗೆ ಅವಲಂಬಿಸುವ ಪರಿಪಾಠ ಬಂದಿದ್ದು ಕೃಷಿ ಕ್ಷೇತ್ರದ ಸರ್ಪ್ಲಸ್ ಲೇಬರ್ಸ್ ಏನಿದ್ದಾರೆ ಅವರಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಅವಕಾಶ ಮಾಡಿಕೊಡಬೇಕಾದ ಪರಿಸ್ಥಿತಿ ಬಂದಿದೆ. ಅಂತಹ ಇಂಡಸ್ಟ್ರಿಗಳನ್ನು ಪ್ರೋತ್ಸಾಹಿಸುವುದು ಬಹಳ ಮುಖ್ಯ. ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವಾಗ ಅದರಿಂದ ಮುಂದಿನ ಅವಶ್ಯಕತೆಗಳು ಈಡೇರುವಂತಾಗಿ ತನ್ಮೂಲಕ ನಮ್ಮ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಉಂಟಾಗುವಂತಿರಬೇಕು. ಮತ್ತೊಂದು ವಿಚಾರವನ್ನು ಹೇಳಬೇಕೆಂದರೆ ಎಂಪ್ಲಾಯ್‌ಮೆಂಟ್ ಜನರೇಷನ್ ಆಗತಕ್ಕಂತಹ ಕೈಗಾರಿಕೆಗಳನ್ನು ಹೆಚ್ಚಿಗೆ ಸ್ಥಾಪನೆ ಮಾಡಬೇಕಾಗುತ್ತದೆ. ಸ್ಮಾಲ್‌ಸ್ಕೇಲ್ ಮತ್ತು ಕಾಟೇಜ್ ಇಂಡಸ್ಟ್ರೀಸ್‌ಗಳು ಮಾತ್ರ ಎಂಪ್ಲಾಯ್‌ಮೆಂಟ್ ಜನರೇಷನ್ ಅನ್ನು ಜಾಸ್ತಿ ಮಾಡತಕ್ಕಂತವುಗಳಾಗಿದೆ. ಅಂತಹ ಅವಕಾಶ ಅಲ್ಲಿ ಇದೆ. ಮೇಜರ್ ಇಂಡಸ್ಟ್ರೀಸ್‌ಗೆ ಕ್ಯಾಪಿಟಲ್ ಗೂಡ್ಸ್, ವಿದ್ಯುಚ್ಛಕ್ತಿ, ಸ್ಟೀಲ್ ಅತಿ ಮುಖ್ಯವಾದುದು. ಕೈಗಾರಿಕೆ ಎಂದರೆ ಮೇಜರ್ ಇಂಡಸ್ಟ್ರೀಸ್‌ನಲ್ಲಿ ಬರುತ್ತದೆ. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್, ಕಾಟೇಜ್ ಇಂಡಸ್ಟ್ರೀಸ್

ಅನ್ನು ಮಾಡಿದರೆ ಎಂಪ್ಲಾಯ್‌ಮೆಂಟ್ ಜನರೇಟ್ ಆಗುತ್ತದೆ. ಅವಶ್ಯಕ ವಸ್ತುಗಳನ್ನು ತಯಾರು ಮಾಡುವುದರಲ್ಲಿ ಇವು ಬಹಳ ಪ್ರಾಮುಖ್ಯತೆ ವಹಿಸುತ್ತವೆ. ನಾವು ಇದನ್ನು ಗಮನದಲ್ಲಿಟ್ಟುಕೊಂಡು ಕಾಟೇಜ್ ಇಂಡಸ್ಟ್ರೀ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳಿಗೆ ಹೆಚ್ಚು ಅವಕಾಶ ಕೊಡಬೇಕಾಗುತ್ತದೆ. ಕಾಟೇಜ್ ಇಂಡಸ್ಟ್ರೀ, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗಳನ್ನು ಸ್ಥಾಪನೆ ಮಾಡಬೇಕಾದರೆ ನಾವು ಕೆಲವು ಪಾಲಿಸಿಗಳನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಕಮಿಟಿಯನ್ನು ಮಾಡಬೇಕಾಗುತ್ತದೆ. ಇಂಡಸ್ಟ್ರೀಸ್ ಅನ್ನು ಸ್ಥಾಪನೆ ಮಾಡಬೇಕಾದರೆ ಪ್ರಾಮುಖ್ಯವಾಗಿ ಎಲೆಕ್ಟ್ರಿಸಿಟಿ, ಲೈಸನ್ಸ್ ತೆಗೆದುಕೊಳ್ಳಬೇಕು. ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಬೇಕು. ಇದನ್ನು ಮಾಡಲು ಕೆಲವು ಸಲಹೆಗಳನ್ನು ಗೈಡ್ ಲೈನ್ಸ್ ಅನ್ನು ಸರಕಾರದಿಂದ ಮತ್ತು ಇತರೇ ಏಜೆನ್ಸೀಗಳಿಂದ ತೆಗೆದುಕೊಳ್ಳಬೇಕಾಗುತ್ತದೆ. ಕೈಗಾರಿಕೆಯನ್ನು ಸ್ಥಾಪನೆ ಮಾಡಲಿಕ್ಕೆ ಫೀಸಿಬಲಿಟಿ ಸಿಕ್ಕಿದರೆ ಎಲೆಕ್ಟ್ರಿಸಿಟಿ ಸಿಗುವುದಿಲ್ಲ, ಎಲೆಕ್ಟ್ರಿಸಿಟಿ ಸಿಕ್ಕಿದರೆ ಇನ್‌ಫ್ರಾಸ್ಟ್ರಕ್ಚರ್ ಇರುವುದಿಲ್ಲ, ಇನ್‌ಫ್ರಾಸ್ಟ್ರಕ್ಚರ್ ಇದ್ದರೆ ರಾ ಮೆಟೀರಿಯಲ್ ಇರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಅದಕ್ಕೋಸ್ಕರವಾಗಿ ಎಲ್ಲವನ್ನೂ ಕ್ರೋಢೀಕರಿಸಿ ಲೈಸನ್ಸ್ ಕೊಡುವುದಕ್ಕಾಗಲೀ ಪವರ್ ಸ್ಯಾಂಕ್ಷನ್ ಮಾಡುವುದಕ್ಕಾಗಲೀ ಅಥವಾ ಇನ್ಯಾವುದೇ ಇನ್‌ಫ್ರಾಸ್ಟ್ರಕ್ಚರ್ ಆಗಲೀ, ರಾ ಮೆಟೀರಿಯಲ್ ಅನ್ನು ಒದಗಿಸುವುದಕ್ಕಾಗಲೀ ಅನುಕೂಲವಾಗುತ್ತದೆ. ಇದಕ್ಕೆ ಒಂದು ಕಮಿಟಿಯನ್ನು ಮಾಡಬೇಕು. ಸಿಂಗಲ್ ವಿಂಡೋ ಸಿಸ್ಟಂ ಪ್ರಕಾರ ಮಾಡಿ ಕಮಿಟಿಯವರು ನೀಡುವ ವರದಿಯನ್ನು ಸಲಹೆಗಳನ್ನು ತೆಗೆದುಕೊಂಡು ಸರಿಯಾದ ವಾತಾವರಣವನ್ನು ಸೃಷ್ಟಿ ಮಾಡಿಕೊಟ್ಟರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾಟೇಜ್ ಇಂಡಸ್ಟ್ರೀಸ್‌ಗಳು ಬೆಳವಣಿಗೆಯಾಗುವುದಕ್ಕೆ ಅನುಕೂಲವಾಗುತ್ತದೆ ಕಾಟೇಜ್ ಇಂಡಸ್ಟ್ರೀ, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಅನ್ನು ಓಲ್ಡ್ ಮೆಥೆಡ್‌ನಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ಅದಕ್ಕೆ ಸರಿಯಾದ ರೀತಿಯಲ್ಲಿ ಟೆಕ್ನಾಲಜಿಯನ್ನು ಕೊಟ್ಟಿಲ್ಲ. ಟೆಕ್ನಾಲಜಿ ಸ್ಕೂಲ್‌ಗಳನ್ನು, ಟೆಕ್ನಾಲಜಿ ಇನ್‌ಸ್ಟಿಟ್ಯೂಷನ್ಸ್‌ಗಳನ್ನು ಕೊಟ್ಟಿಲ್ಲ. ಟ್ರೈನಿಂಗ್ ಕೊಡತಕ್ಕಂತಹ ಶಾಲೆಗಳನ್ನು ಸೆಂಟರ್‌ಗಳನ್ನು ಮಾಡಿ ಈ ಒಂದು ಕಾಟೇಜ್ ಇಂಡಸ್ಟ್ರೀಸ್‌ಗಳು ಅಭಿವೃದ್ಧಿ ಹೊಂದುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ಸಚಿವರ ಗಮನಕ್ಕೆ ತರಬಯಸುತ್ತೇನೆ. ಹಣಕಾಸಿನ ಸೌಲಭ್ಯ ಸರಿಯಾದ ರೀತಿಯಲ್ಲಿ ಕಾಟೇಜ್ ಇಂಡಸ್ಟ್ರೀಸ್‌ಗಳಿಗೆ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳಿಗೆ ದೊರೆಯುತ್ತಿಲ್ಲ. ಇದಕ್ಕೆ ಹಣ ಕೊಡತಕ್ಕಂತಹ ಕೆ.ಎಸ್.ಎಫ್.ಸಿ. ಏನು ಇದೆ, ಇದರಲ್ಲಿ ಸುಮಾರು ಸಿಕ್ ಇಂಡಸ್ಟ್ರೀಸ್‌ಗಳು ಬಿದ್ದು ಒದ್ದಾಡುತ್ತಿವೆ. ಅವನ್ನು ಡಿಸ್‌ಪೋಸ್ ಮಾಡುವ ಹಾಗಿಲ್ಲ ಇದನ್ನು ಮತ್ತೆ ರೀಜನರೇಟ್ ಮಾಡಿ ಸ್ಥಾಪನೆ ಮಾಡಲಿಕ್ಕೆ ಅವಕಾಶ ಕೊಡುವ ಹಾಗಿಲ್ಲ. ಅಂತಹ ಪರಿಸ್ಥಿತಿ ಇದೆ. ಇವತ್ತು ಅನೇಕ ಸಿಕ್ ಇಂಡಸ್ಟ್ರೀಸ್‌ಗಳು ಕೆ.ಎಸ್.ಎಫ್.ಸಿ. ಹಿಡಿತದಲ್ಲಿ ಆಡಳಿತದಲ್ಲಿ ಬಿದ್ದು ಒದ್ದಾಡುತ್ತಿದೆ. ಈ ಸಿಕ್ ಆಗಿರತಕ್ಕಂತಹ ಇಂಡಸ್ಟ್ರೀಸ್‌ಗಳಿಗೆ ನಮ್ಮ ಸರಕಾರದ ಮತ್ತು ನಮ್ಮ ಜನಗಳು ಕೊಟ್ಟಂತಹ ಹಣವನ್ನು ಇನ್‌ವೆಸ್ಟಿಗೇಟ್ ಮಾಡಿದ್ದೇವೆ. ಆ ಹಣದ ಗತಿಯೇನು, ಡೆಡ್ ಕ್ಯಾಪಿಟಲ್ ಆಗಿ ಇಲ್ಲಿ ಇವತ್ತು ಕೋಟ್ಯಾಂತರ ರೂಪಾಯಿ ಬಿದ್ದಿದೆ. ಅದನ್ನು ಸರಿಯಾದ ರೀತಿಯಲ್ಲಿ ನಡೆಯುವಂತೆ ಪರಿವರ್ತನೆ ಮಾಡಿ ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸರಿ ಮಾಡಬೇಕಾದರೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಗೀವ್ ಅಂಡ್ ಟೇಕ್ ಪಾಲಿಸಿ ಇರಬೇಕಾಗುತ್ತದೆ. ಕೆಲವು ಇಂಡಸ್ಟ್ರೀಸ್‌ಗಳಲ್ಲಿ ಏನು ಲಾಸ್ ಆಗಿದೆ ಅಲ್ಲಿ ಮತ್ತೆ ಲಾಂಗ್ ಟರ್ಮಿನಲ್ಲಿ ಉತ್ಪಾದನೆಯಾಗಬಹುದು. ನಾವು ಏನು ಇನ್‌ವೆಸ್ಟಿಗೇಟ್ ಮಾಡಿದ್ದೇವೆ ಏನು ಲಾಸ್ ಆಗಿದೆ ಅದು ನಮಗೆ ವಾಪಸ್ ಬರತಕ್ಕಂತಹ ಪರಿಸ್ಥಿತಿಗೆ ತರತಕ್ಕಂಥಾದ್ದು ಅತಿ ಮುಖ್ಯವಾದುದು. ಮಾರ್ಕೆಟ್‌ನಲ್ಲಿ ಸಂಪೂರ್ಣವಾದಂತಹ ಸರ್ಕಾರದ ಕಂಟ್ರೋಲ್ ಇರಬೇಕೆಂಬ ಸಲಹೆಯನ್ನು ಕೊಡಲಿಚ್ಛಿಸುತ್ತೇನೆ. ಮಾರ್ಕೆಟ್‌ನಲ್ಲಿ ಕಾಂಪಿಟಿಷನ್ ಬಹಳ ಜಾಸ್ತಿಯಾಗುತ್ತಿದೆ. ಕೆಲವು ಸ್ಮಾಲ್ ಸ್ಕೇಲ್ ಇಂಡಸ್ಟ್ರೀ, ಕಾಟೇಜ್ ಇಂಡಸ್ಟ್ರೀಗಳಲ್ಲಿ, ಮೇಜರ್ ಇಂಡಸ್ಟ್ರೀಸ್‌ಗಳು ಕಾಂಪೀಟ್ ಮಾಡುತ್ತಿರುವುದರಿಂದ ಮಾರ್ಕೆಟಿಂಗ್ ಕಂಟ್ರೋಲ್ ಇಟ್ಟುಕೊಂಡು ಅದರ ಡಿಸ್ಟ್ರಿಬ್ಯೂಷನ್ ಸಿಸ್ಟಂ ಅನ್ನು ಸರಕಾರ ಇಟ್ಟುಕೊಳ್ಳಬೇಕು ಎಂಬ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡಲಿಚ್ಛಿಸುತ್ತೇನೆ.

ಇದಕ್ಕೆ ಕಾರಣವಿಷ್ಟೆ. ಪ್ರೊಡಕ್ಷನ್‌ನಲ್ಲಿ ಟೆಕ್ನಾಲಜಿಯನ್ನು ಕೂಡಾ ಅವರು ಕೊಡಬೇಕು. ಪ್ರೊಡಕ್ಷನ್ ಮಾಡುವುದರಲ್ಲಿ ಅವರಿಗೆ ಸರ್ವಸ್ವತಂತ್ರ್ಯವನ್ನು ಕೂಡಾ ಅವರಿಗೆ ಕೊಡಬೇಕು. ಅವರಿಗೆ ಬೇಕಾದಂಥ ಟೆಕ್ನಾಲಜಿಯನ್ನು ತಾವು ಕಲ್ಪಿಸಬೇಕು ಎನ್ನತಕ್ಕಂಥ ವಿಚಾರವನ್ನು ಕೂಡಾ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ರಾಜ್ಯದ ಪರಿಸ್ಥಿತಿಯನ್ನು ತೆಗೆದುಕೊಂಡರೆ

ನಿಜವಾಗಿ ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿದ್ದೇವೆ, ಕೈಗಾರಿಕೆಯಲ್ಲಿ ನಾವು ಯಾವತ್ತೂ ಮುಂದು ವರಿದಿಲ್ಲ. ಸಾವಿರಾರು ಕೈಗಾರಿಕಾ ಕ್ಷೇತ್ರಗಳನ್ನು ಸ್ಥಾಪನೆ ಮಾಡಿರಬಹುದು. ಸಾವಿರಾರು ಕೈಗಾರಿಕೆಗಳು ಕೂಡಾ ಇವತ್ತು ಸಿಕ್ ಇಂಡಸ್ಟ್ರೀಸ್ ಆಗಿ ಬಿದ್ದಿವೆ. ಈಗ ಏನು ನಾವು ಮುಂದೆ ಹೋಗಿದ್ದೇವೆಯೋ. ಮುಂದೆ ಹೋದರೂ ಕೂಡಾ ಅಷ್ಟೇ ಹಿಂದಕ್ಕೆ ಬರುತ್ತಿದ್ದೇವೆ. ಇದಕ್ಕೆ ಕಾರಣವಿಷ್ಟೆ, ನಮ್ಮಲ್ಲಿ ಸಿಕ್ ಇಂಡಸ್ಟ್ರೀಸ್‌ಗಳು ಜಾಸ್ತಿಯಾಗಿ ಸರಿಯಾದಂಥ ಪರಿಹಾರವನ್ನು ಅವರಿಗೆ ಕೊಡುತ್ತಿಲ್ಲ. ಸಿಕ್ ಇಂಡಸ್ಟ್ರೀಸ್‌ಗಳನ್ನು ಯಾವರೀತಿ ಬೆಳೆಸಬೇಕು. ಅದರಿಂದ ಯಾವ ರೀತಿಯದಂಥ ಪ್ರೊಡಕ್ಷನ್‌ನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥದರ ಬಗ್ಗೆ ಚಿಂತನೆ ಇಲ್ಲದೆ ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿದ್ದೇವೆ. ಮತ್ತು ಈ ಕ್ಯಾಪಿಟಲ್ ಗೂಡ್ಸ್ ಪ್ರೊಡಕ್ಷನ್‌ನಲ್ಲಿ ಬಹಳ ಹಿಂದುಳಿದಿದ್ದೇವೆ. ನಾವು ಈಗ ಹೊರದೇಶದವರನ್ನು ಜಾಸ್ತಿಯಾಗಿ ಅವಲಂಬಿಸುತ್ತಿದ್ದೇವೆ. ಎಲೆಕ್ಟ್ರಿಸಿಟಿ ಉತ್ಪಾದನೆ ಮಾಡಬೇಕಾದರೂ ಕೂಡಾ ಅದಕ್ಕೆ ಮೆಷಿನರೀಸ್‌ನ್ನು ತರಬೇಕು. ಅದನ್ನು ತರಬೇಕಾದರೂ ಕೂಡಾ ಉತ್ಪಾದನೆ ಮಾಡಬೇಕಾದರೂ ಕೂಡಾ ನಮ್ಮಲ್ಲಿ ಮೆಷಿನರೀಸ್ ಇಲ್ಲ. ಅದಕ್ಕಾಗಿ ಹೊರದೇಶದವರನ್ನು ನಾವು ಅವಲಂಬಿಸಬೇಕಾಗುತ್ತದೆ, ಆದುದರಿಂದ ನಮ್ಮಲ್ಲಿ ಕ್ಯಾಪಿಟಲ್ ಗೂಡ್ಸ್ ಪ್ರೊಡಕ್ಟ್ ಮಾಡತಕ್ಕಂಥದ್ದನ್ನು ನಾವು ಸ್ಥಾಪನೆ ಮಾಡಬೇಕು, ಇದಕ್ಕೆ ಉತ್ತೇಜನ ಕೊಡಬೇಕು ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಕಾರಣವಿಷ್ಟೆ, ಕ್ಯಾಪಿಟಲ್ ಗೂಡ್ಸ್ ಏನಾಗುತ್ತದೆ ಎಂದರೆ ಸ್ಮಾಲ್ ಸ್ಕೇಲ್ ಮತ್ತು ಕಾಟೇಜ್ ಇಂಡಸ್ಟ್ರೀಸ್‌ಗೆ ಇನ್-ಫ್ರಾಸ್ಟ್ರಕ್ಚರ್ ಆಗಿ ಪರಿವರ್ತನೆಯಾಗುತ್ತದೆ. Production of Steel is also a part of the infrastructure to the Small Scale and Cottage Industry, Electricity is also one of the capital goods. That also creates infrastructure to the Small Scale and Cottage industry.

ಇನ್ನು ಕ್ಯಾಪಿಟಲ್ ಗೂಡ್ಸ್‌ನ್ನು ತಯಾರು ಮಾಡುವುದರಲ್ಲಿ ಹೆಚ್ಚಿನ ಒಂದು ಟೆಕ್ನಾಲಜಿಕಲ್ ನೋ-ಹೌ ಅನ್ನು ಹೊರದೇಶದಿಂದ ತೆಗೆದುಕೊಂಡರೂ ಕೂಡಾ ನಮ್ಮಲ್ಲಿಯೇ ಆ ರೀತಿಯಾದಂಥ ಮೆಷಿನರೀಸ್‌ನ್ನು ಸ್ಥಾಪನೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಾವು ನಮ್ಮ ಸರ್ಕಾರದ ಧೋರಣೆ ಯಾವ ರೀತಿಯಾಗಿ ಇರಬೇಕು ಎಂದರೆ ನಾವು ಕೆಲವು ಪಬ್ಲಿಕ್ ಇಂಡಸ್ಟ್ರೀಸ್‌ನ್ನು ಸ್ಥಾಪನೆ ಮಾಡುತ್ತೇವೆ. ಆದರೆ ಅದೇ ಒಂದು ಯಾವುದನ್ನು ಅಬ್ಜೆಕ್ಟ್ ಅಚೀವ್ ಮಾಡಲಿಕ್ಕೋಸ್ಕರವಾಗಿ ಯಾವ ಒಂದು ಉದ್ದೇಶಕ್ಕೋಸ್ಕರ ಪಬ್ಲಿಕ್ ಇಂಡಸ್ಟ್ರೀಸ್‌ನ್ನು ಸ್ಥಾಪನೆ ಮಾಡುತ್ತೇವೆ, ಅದೇ ರೀತಿಯಾದಂಥ ಅಬ್ಜೆಕ್ಟೀವ್ ಮಾಡಲು ಪ್ರೈವೇಟ್ ಇಂಡಸ್ಟ್ರೀಸ್‌ನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇವೆ. ಪ್ರೈವೇಟ್ ಪರ್ಸನ್ಸ್ ಮನಿ ಇನ್‌ವೆಸ್ಟ್ ಮಾಡಲು ಅವರಿಗೆ ಅವಕಾಶವನ್ನು ಕೊಡುತ್ತೇವೆ. ಆಗ ಏನಾಗುತ್ತದೆ ಎಂದರೆ We have got morecontrol over the public induststries and also we have more problems in the public industries we have got to exercise more control over the private industries. ಪಬ್ಲಿಕ್ ಇಂಡಸ್ಟ್ರೀಸ್ ಮುಂದುವರಿಯು ವುದಕ್ಕೆ ಪ್ರೈವೇಟ್ ಇಂಡಸ್ಟ್ರೀಸ್‌ನವರು ಬಹಳ ಅಡಚಣೆಗಳನ್ನು ಮಾಡುತ್ತಾರೆ. ಪಬ್ಲಿಕ್ ಇಂಡಸ್ಟ್ರೀಸ್‌ನಲ್ಲಿ ನಾವು ಅವರಿಗೆ ಸರ್ವಸ್ವತಂತ್ರವನ್ನು ಕೊಡಬೇಕು. ಅವರಿಗೆ ಪ್ರೊಡಕ್ಷನ್‌ನಲ್ಲಾಗಲೀ, ವಿತರಣೆಯಲ್ಲಾಗಲೀ ಯಾವ ರೀತಿಯಾದ ಸ್ವತಂತ್ರ್ಯ ಇರುತ್ತದೋ ಅದೇ ರೀತಿಯಾದಂಥ ಸ್ವತಂತ್ರವನ್ನು ಪ್ರೈವೇಟ್ ಇಂಡಸ್ಟ್ರೀಸ್‌ಗೂ ಕೊಟ್ಟು ಅಲ್ಲಿ ಮಾರ್ಕೆಟ್ಟನ್ನು ಕಾಮನ್ ಆಗಿ ಇಡಬೇಕು, ಅಂದರೆ ಪ್ರೈವೇಟ್ ಇಂಡಸ್ಟ್ರೀಸ್ ಆಗಲೀ, ಪಬ್ಲಿಕ್ ಇಂಡಸ್ಟ್ರೀಸ್ ಆಗಲೀ ಕಾಮನ್ ಮಾರ್ಕೆಟಿಂಗ್ ಇರಬೇಕು, ಇನ್ನು ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್ ಬಗ್ಗೆ ಹೇಳುವುದಾದರೆ, ಅವುಗಳು ಬಹಳ ಬೇಜವಾಬ್ದಾರಿಯಿಂದ ವರ್ತಿಸುತ್ತಿವೆ. ಇವತ್ತು ಮುಖ್ಯವಾದದ್ದು ಕ್ರೆಡಿಟ್ ಫೆಸಿಲಿಟೀಸ್. ಯಾವುದೇ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕಾದರೆ ಕ್ರೆಡಿಟ್ ಫೆಸಿಲಿಟೀಸ್ ಸರಿಯಾದ ರೀತಿಯಲ್ಲಿ ನಮಗೆ ಬಾರದೇ ಇದ್ದರೆ ಇಂಡಸ್ಟ್ರೀ ಸಿಕ್ ಇಂಡಸ್ಟ್ರೀ ಆಗುತ್ತದೆ. ಅನೇಕ ಇಂಡಸ್ಟ್ರೀಸ್‌ಗಳನ್ನು ನಾವು ನೋಡುತ್ತಿದ್ದೇವೆ. ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ನಮ್ಮ ಬೇಡಿಕೆ ಏನು ಇದೆ, ಆ ಬೇಡಿಕೆಗೆ ಅನುಗುಣವಾಗಿ ಇವತ್ತು ಫೈನಾನ್ಸನ್ನು ಕೊಡುತ್ತಿಲ್ಲ. ಹಲವಾರು ಕ್ವೈರೀಸ್‌ಗಳನ್ನು ಹಾಕುತ್ತಾರೆ. ಹಲವಾರು ತಡೆಗಳನ್ನು ಒಡ್ಡುತ್ತಾರೆ. ಮತ್ತು ಇದಕ್ಕೆ

ಹಲವಾರು ರಾಜಕೀಯ ಒತ್ತಡ ತಂದವರಿಗೆ ಫೈನಾನ್ಸ್‌ನ್ನು ಕೊಡುತ್ತಾರೆ. ಇಂಡಸ್ಟ್ರೀಸ್‌ಗಳಿಗೆ ಫೀಸಿಬಿಲಿಟಿ ಇರುವುದಿಲ್ಲ. ಆದರೆ ಸ್ಥಾಪನೆ ಮಾಡಲಿಕ್ಕೆ ಹಲವಾರು ಒತ್ತಡಗಳಿಗೆ ಮಣಿದು ಫೈನಾನ್ಸ್ ಮಾಡುತ್ತಾರೆ. ಫೈನಾನ್ಸ್ ಮಾಡುವ ಸಂದರ್ಭದಲ್ಲಿ ಈ ವರ್ಷ ಚೆನ್ನಾಗಿ ನಡೆದಿದೆ ಮುಂದಿನ ವರ್ಷ ಅದು ಸಿಕ್ ಆಗುತ್ತದೆ.

ಆದ್ದರಿಂದ ಈ ಒಂದು ಇಂಟರ್‌ಫಿಯರೆನ್ಸ್ ತೆಗೆದುಹಾಕಬೇಕು ಮತ್ತು ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಏನು ಅವಶ್ಯಕತೆ ಇದೆ ಅಷ್ಟು ಹಣವನ್ನು ಸಂಪೂರ್ಣವಾಗಿ ಒದಗಿಸಿಕೊಡಬೇಕು. ಹಣ ಒದಗಿಸಿದರೆ ಮಾತ್ರ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಇದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು ಎಂಬ ವಿಚಾರವನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ರೂರಲ್ ಏರಿಯಾಸ್ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಏನು ಆಗಿದೆ ಅಂದರೆ ಸಿಟಿಯಲ್ಲಿ ಹೆಚ್ಚು ಜನ ಕಾನ್‌ಸೆಂಟ್ರೇಟ್ ಆಗುತ್ತಾರೆ. ಸಿಟಿಯ ವಾತಾವರಣಕ್ಕೆ ಹೆಚ್ಚು ಅಟ್ರಾಕ್ಟ್ ಆಗುತ್ತಾರೆ. ಹಳ್ಳಿಯ ವಾತಾವರಣದಲ್ಲಿ ಎಷ್ಟೋ ಫೆಸಿಲಿಟೀಸ್‌ಗಳು ಇದ್ದರೂ ಕೂಡ ಹೆಚ್ಚು ರಾ ಮೆಟೀರಿಯಲ್ಸ್ ಸಿಗುತ್ತಿದ್ದರೂ ಕೂಡ ಹಳ್ಳಿಯ ವಾತಾವರಣಕ್ಕೆ ಬೇಜಾರು ಆಗಿ ಸಿಟಿಯ ವಾತಾವರಣಕ್ಕೆ ಓಡಿ ಬರುತ್ತಾರೆ. ಅದೇ ರೀತಿಯಾಗಿ ನಾವು ಹೆಚ್ಚು ಒಳ್ಳೆಯ ರಾ ಮೆಟೀರಿಯಲ್ಸ್ ಸಿಕ್ಕತಕ್ಕಂಥ ಕೆಲವು ಹಳ್ಳಿಗಳನ್ನು ಮತ್ತು ಪಟ್ಟಣಗಳನ್ನು ನಾವು ಸೆಲೆಕ್ಟ್ ಮಾಡಿಕೊಂಡು ಅಲ್ಲಿ ಒಂದು ಇಂಡಸ್ಟ್ರೀಸ್‌ಗೆ ಹೆಚ್ಚು ಇನ್‌ಸೆಂಟೀವ್ ಕೊಟ್ಟುಕೊಂಡು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಹೆಚ್ಚಾಗಿ ಪ್ರೋತ್ಸಾಹವನ್ನು ಹಳ್ಳಿಗಳಲ್ಲಿ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ. In domestic production, we have no protection to domestic production. ನಮ್ಮ ಡೊಮೆಸ್ಟಿಕ್ ಪ್ರೊಡಕ್ಷನ್‌ನಿಂದ ನಮಗೆ ಪ್ರೊಟೆಕ್ಷನ್ ಇಲ್ಲ, ಯಾಕೆಂದರೆ ಫಾರಿನ್‌ನಿಂದ ಬರತಕ್ಕ ಆರ್ಟಿಕಲ್ಸ್, ಇಂಪೋರ್ಟ್‌ನಿಂದ ಮಾಡತಕ್ಕ ಆರ್ಟಿಕಲ್ಸ್‌ನಲ್ಲೂ ಕೂಡ ಕಾಂಪಿಟಿಷನ್ ಬರುತ್ತಿರುವುದರಿಂದ ನಮ್ಮ ಡೊಮೆಸ್ಟಿಕ್ ಪ್ರೊಡಕ್ಷನ್‌ಗೆ ಹೆಚ್ಚಿಗೆ ಪ್ರೊಟೆಕ್ಷನ್ ಕೊಡಬೇಕು. ಇದಕ್ಕೆ ಹೆಚ್ಚಾಗಿ ಪಾಪ್ಯುಲಾರಿಟಿ ಜಾಸ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಮೆಶರ್ಸ್ ಬಗ್ಗೆ ಸಂಕ್ಷಿಪ್ತವಾಗಿ ಹೇಳಲಿಚ್ಛಿಸುತ್ತೇನೆ.

ಅಧ್ಯಕ್ಷರು.—ಲಾಸ್ಟ್ ಹೇಳಿಬಿಡಿ.

ಶ್ರೀ ಸಿ. ಹೆಚ್. ಮೂಡಲಗಿರಿಯಪ್ಪ.—ಸಿಕ್ ಇಂಡಸ್ಟ್ರೀಸ್ ಬಗ್ಗೆ you releation must put on a healthy line. ಆ ಮೇಲೆ ಮ್ಯಾನೇಜ್‌ಮೆಂಟ್ ಬಗೆ ಹೇಳುವುದಾದರೆ industrial relationship is very important. ಇವೊತ್ತು ಏನು ಆಗಿದೆ ಅಂದರೆ ನಮ್ಮಲ್ಲಿ ಒಳ್ಳೆಯ ವಾತಾವರಣ ಮ್ಯಾನೇಜ್‌ಮೆಂಟ್ ಮತ್ತು ಲೇಬರರ್ಸ್‌ನಲ್ಲಿ ಇಲ್ಲದೇ ಇರುವುದರಿಂದ ಈ ಕಾರಣವಾಗಿ ಅನೇಕ ಇಂಡಸ್ಟ್ರೀಗಳು ಸಿಕ್ ಆಗಿವೆ. ಇವೊತ್ತು ವರ್ಕರ್ಸ್ ಸ್ಟ್ರೈಕ್ ಮಾಡುತ್ತಾರೆ, ಸ್ಟ್ರೈಕ್ ಮಾಡಿದರೆ ಏನು ಆಗುತ್ತದೆ ಅಂದರೆ ಮ್ಯಾನುಯಲ್ ಪವರ್, ಮ್ಯಾನುಯಲ್ ಇನ್‌ವೆಸ್ಟ್‌ಮೆಂಟ್, ಅಂದರೆ, ಮನುಷ್ಯನ ಶಕ್ತಿ ಏನು ಇದೆ, ಅದು ಸ್ಟ್ರೈಕ್ ಮಾಡುವುದರ ಮೂಲಕ ಆ ಶಕ್ತಿ ಹೊರಟು ಹೋಗುತ್ತದೆ. ಆದ್ದರಿಂದ ಲೇಬರರ್ಸ್ ಮತ್ತು ಮ್ಯಾನೇಜ್‌ಮೆಂಟ್ ನಡುವೆ ನಾವು ರಿಲೇಷನ್‌ಶಿಪ್ ಅನ್ನು ಎಸ್ಟಾಬ್ಲಿಶ್ ಮಾಡಬೇಕು. ಇವರಿಬ್ಬರ ನಡುವೆ ಒಳ್ಳೆಯ ಸಂಬಂಧವನ್ನು ಕಲ್ಪಿಸಿದರೆ ಮಾತ್ರ ಹೆಚ್ಚು ಅನುಕೂಲವಾಗುತ್ತವೆ, ಇಲ್ಲದಿದ್ದರೆ ಸಿಕ್ ಇಂಡಸ್ಟ್ರಿಗಳು ಆಗುವುದಕ್ಕೆ ಇದೂ ಒಂದು ಕಾರಣವಾಗುತ್ತದೆ ಎಂದು ಹೇಳುತ್ತೇನೆ. ಮ್ಯಾನೇಜ್‌ಮೆಂಟ್‌ನಲ್ಲಿ ಎಫಿಷಿಯನ್ಸಿಯನ್ನು ಇಂಪ್ರೂವ್ ಮಾಡಬೇಕಾಗುತ್ತದೆ. ಮ್ಯಾನೇಜ್‌ಮೆಂಟ್ ಏನು ಒಂದು ಇಂಡಸ್ಟ್ರಿಯನ್ನು ಸ್ಥಾಪನ ಮಾಡುವುದಕ್ಕೆ ಸರ್ಕಾರ ಸಾಲ ಕೊಡುತ್ತಾರೆ, ಅಲ್ಲಿ ಗವರ್ನಮೆಂಟ್‌ನಿಂದ ಒಬ್ಬ ಅಧಿಕಾರಿಯನ್ನು ನೇಮಿಸತಕ್ಕ ಕೆಲಸ ಮಾಡಬೇಕು. ಪ್ರತಿಯೊಂದು ಕೈಗಾರಿಕೆಯಲ್ಲಿ ಗವರ್ನಮೆಂಟ್ ಏಜೆನ್ಸಿ ಇರಬೇಕು ಅಥವಾ ಗವರ್ನಮೆಂಟ್ ಅಧಿಕಾರಿಗಳನ್ನು ಇಟ್ಟುಕೊಂಡು ಗವರ್ನಮೆಂಟ್ ಆಡಳಿತದಲ್ಲಿ ಇರತಕ್ಕ ಪರಿಸ್ಥಿತಿಯನ್ನು ನಾವು ಕ್ರಿಯೇಟ್ ಮಾಡಿ, ಮ್ಯಾನೇಜ್‌ಮೆಂಟ್ ಎಫಿಷಿಯಂಟ್ ಆಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಟೆಕ್ನಿಕಲ್ ಅಫಿಷಿಯಲ್ಸ್ ಇದ್ದಾರೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕು. ಟೆಕ್ನಿಕಲ್ ಲೈನ್‌ನಲ್ಲಿ ಎಫಿಷಿಯನ್ಸಿ ಇದೆಯೋ ಅಥವಾ ಇಲ್ಲವೋ ಎಂಬುದನು ನೋಡಬೇಕು. ಎಫಿಷಿಯೆಂಟ್ ಮತ್ತು ಬೆಟರ್ ಮ್ಯಾನೇಜ್‌ಮೆಂಟ್ ಮಾಡುವುದಕ್ಕೆ ಸರ್ಕಾರ ಯಾವುದಾದರೂ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂಬ ವಿಚಾರವನ್ನು ಹೇಳುತ್ತಾರೆ, ಮುಖ್ಯವಾಗಿ ಮಾರ್ಕೆಟಿಂಗ್

ನಲ್ಲಿ ಏನು ರಿಸ್ಟ್ರಿಕ್ಷನ್ಸ್ ಇವೆ, ಒಂದು ಇಂಡಸ್ಟ್ರಿ ಸ್ಟಾರ್ಟ್ ಮಾಡಬೇಕಾದಾರೆ ಹೆಚ್ಚು ರಿಸ್ಟ್ರಿಕ್ಷನ್ಸ್ ಇದೆ, ಆ ರಿಸ್ಟ್ರಿಕ್ಷನ್ ಅನ್ನು ಕಡಿಮೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಲು ಬಯಸುತ್ತೇನೆ. ಆನಂತರ ಪ್ರೈಸ್ ಪಾಲಿಸಿ ವಿಚಾರ ಹೇಳುವುದಾದರೆ Price Policy ls also very important in industrialisation. ಪ್ರೈಸ್ ಪಾಲಿಸಿಯಲ್ಲಿ ನಾವು ಒಂದು ಕಾಸ್ಟ್ ಆಫ್ ಪಾಲಿಸಿಯಲ್ಲಿ ನಾವು ಒಂದು ಕಾಸ್ಟ್ ಆಫ್ ಪ್ರೊಡಕ್ಷನ್‌ಗೆ ತಕ್ಕ ಹಾಗೆ ಪ್ರೈಸ್ ಪಾಲಿಸಿಯನ್ನು ಫಿಕ್ಸ್ ಮಾಡಿಕೊಂಡು ಹೋದರೆ ಮಾತ್ರ ಇಂಡಸ್ಟ್ರಿಯ ಲೈಸೇಷನ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಇಂಡಸ್ಟ್ರಿಯನ್ನು ಡೆವಲಪ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ it results in loss of production and loss of morey. ಆ ಮೇಲೆ ಇನ್‌ಸೆಂಟೀವ್ಸ್ ಅನ್ನು ಸಹಾ ನಾವು ಜಾಸ್ತಿ ಮಾಡಬೇಕಾಗುತ್ತದೆ, Industrial relationship in both private and private publice & private sector industries. sector ನಲ್ಲಿರಬೇಕು There must be a Corordination between ಇವನ್ನು ಕೂಡ ಮಾಡದೇ ಹೋದರೆ ಖಂಡಿತವಾಗಿಯೂ ನಾವು ಯಾವ ಮಾರ್ಗದಲ್ಲಿ ಹೋಗಬೇಕು, ಏನು ನಾವು ಸಾಧನೆ ಮಾಡಬೇಕು ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಾಟೇಜ್ ಇಂಡಸ್ಟ್ರಿ ಪ್ರಾರಂಭ ಮಾಡುವುದರಿಂದ ನಾವು ಸಾಮಾಜಿಕ ನ್ಯಾಯವನ್ನು ಜನರಿಗೆ ಕಲ್ಪಿಸಿಕೊಡಬಹುದು. ಸೆಲ್ಫ್ ಎಂಪ್ಲಾಯ್‌ಮೆಂಟ್‌ನಲ್ಲಿ ಕಾಟೇಜ್ ಇಂಡಸ್ಟ್ರಿ ಸ್ಥಾಪನೆ ಮಾಡುವುದರಿಂದ ಸೆಲ್ಫ್ ಎಂಪ್ಲಾಯ್‌ಮೆಂಟ್ ಅನ್ನು ಅಭಿವೃದ್ಧಿ ಪಡಿಸಬಹುದು. ಮತ್ತು ಹೆಚ್ಚು ಹೆಚ್ಚಾಗಿ ಕಾಟೇಜ್ ಇಂಡಸ್ಟ್ರಿಗಳನ್ನು ಮಾಡುವುದರಿಂದ ಹೆಚ್ಚಿನ ಜನರಿಗೆ ಕೆಲಸಗಳನ್ನು ಕೊಡಬಹುದು ಮತ್ತು ಲೇಬರ್ ಜನರೇಷನ್ ಅನ್ನು ಕೂಡ ಮಾಡಬಹುದು ಎಂದು ಹೇಳುತ್ತೇನೆ. ಇದರಿಂದ ಮತ್ತೊಂದು ಅನುಕೂಲ ಏನೆಂದರೆ decentralisation of economy ಆಗುತ್ತದೆ. ಆದ್ದರಿಂದ ಎಲ್ಲ ಹಳ್ಳಿಗಳಲ್ಲಿಯೂ ಕಾಟೇಜ್ ಇಂಡಸ್ಟ್ರಿಗಳನ್ನು ಮತ್ತು ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಇದರಿಂದ decentralisation of economic activities ಜಾಸ್ತಿ ಆಗುತ್ತದೆ. Decentralisation of economic activities ನಿಂದ equal distribution of incomeಗೆ ದಾರಿ ಮಾಡಿಕೊಟ್ಟಂತೆ ಆಗುತ್ತದೆ. ನಮ್ಮ ಹಳ್ಳಿಯ ಜನರು ಸಾಮೂಹಿಕವಾಗಿ ಕೆಲಸ ಮಾಡುವುದರಿಂದ ಮತ್ತು ಒಂದು ಉದ್ಯೋಗದಲ್ಲಿ ಅನೇಕ ಜನರು ಕೆಲಸ ಮಾಡುವುದರಿಂದ ಹಳ್ಳಿಗಳಲ್ಲಿ ಹೆಚ್ಚು ಹೆಚ್ಚು ಕಾಟೇಜ್ ಇಂಡಸ್ಟ್ರಿಗಳನ್ನು ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡಬೇಕು. ಇದರಿಂದ consumer goodsನ ಉತ್ಪಾದನೆ ಜಾಸ್ತಿ ಆಗುತ್ತದೆ. ಈ ರೀತಿ ಮಾಡುವುದರಿಂದ political and social benefits ಸಹ ಆಗುತ್ತದೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಸವಲಿಂಗಪ್ಪ (ಯಲಹಂಕ).—ಸನ್ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ. ನನಗೆ ಮಾತನಾಡಬೇಕೆಂಬ ಇಚ್ಛೆ ಇರಲಿಲ್ಲ. ಆದರೂ ಈ ಕೈಗಾರಿಕಾ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಕೈಗಾರಿಕಾ ಇಲಾಖೆ ಎರಡು ಉದ್ದೇಶಗಳಿಗಾಗಿ ಇದೆ. ಒಂದನೆಯ ಉದ್ದೇಶವೆಂದರೆ, ಇಡೀ ರಾಜ್ಯಾದ್ಯಂತ ಅಂದರೆ ಹಳ್ಳಿಗಳಿಂದ ಹಿಡಿದು ಪಟ್ಟಣಗಳವರೆಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ, ಹೆಚ್ಚು ಹೆಚ್ಚು ಕೆಲಸಗಳನ್ನು ನಿರ್ಮಾಣ ಮಾಡುವುದರ ಮೂಲಕ ಹೆಚ್ಚಿನ ಜನರಿಗೆ ಕೆಲಸ ಕೊಟ್ಟು ಆ ಮೂಲಕ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದು. ಎರಡನೆಯ ಉದ್ದೇಶವೆಂದರೆ, ಯಾರು ಆಸ್ತಿವಂತರಲ್ಲ, ಅವರಿಗೆ ಕೆಲಸದ ಅವಕಾಶ ಮಾಡಿಕೊಟ್ಟು ಅವರ ಜೀವನ ಮಟ್ಟವನ್ನು ಹಾಗೂ ಅವರ ಆರ್ಥಿಕ ಸಂಪತ್ತನ್ನು ಹೆಚ್ಚು ಮಾಡಬೇಕು ಎಂಬುದೇ ಈ ಇಲಾಖೆಯ ಉದ್ದೇಶ. ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕೈಗಾರಿಕಾ ಕ್ಷೇತ್ರದಲ್ಲಿ ಏನು ಒಂದು ವ್ಯವಸ್ಥೆ ಇತ್ತು ಮತ್ತು ನಿರೀಕ್ಷೆ ಇಸವಿಯಲ್ಲಿ ಇವರು ತಮ್ಮ ಒಂದು ಕೈಗಾರಿಕಾ ನೀತಿಯ ಬಗ್ಗೆ ಏನು ಘೋಷಣೆ ಮಾಡಿದರು, ಅಲ್ಲಿಂದ ಇಲ್ಲಿಯವರೆಗೆ ಇವರು ಏನೇನು ಸಾಧನೆಗಳನ್ನು ಮಾಡಿದ್ದಾರೆ ಎಂಬ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಈ ಹಿಂದೆ ಮಾನ್ಯ ಬೊಮ್ಮಾಯಿ ಅವರು ಕೈಗಾರಿಕಾ ಮಂತ್ರಿಗಳಾಗಿದ್ದರು. ಆಗ ಅವರು ಬಹಳ ಹುಮ್ಮಸ್ಸಿನಿಂದ ಒಂದು ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದರು. ಆದರೆ ಇವೊತ್ತು ಈ ಕೈಗಾರಿಕಾ ಇಲಾಖೆ ಅವರ ಕೈಯಲ್ಲಿ ಇಲ್ಲ. ಅವರು ಬೇರೆ ಇಲಾಖೆಗೆ ಹೋಗಿದ್ದಾರೆ. ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಸ್ಥಾಪನೆ

ಮಾಡಲು ನಿಮ್ಮ ಕೈಯಲ್ಲಿ ಆಗಲಿಲ್ಲ. ತಿಂಗಳಿಗೆ ಒಂದು ಸಾವಿರದಂತೆ ವರ್ಷಕ್ಕೆ ೧೨ ಸಾವಿರ ಮತ್ತು ೫ ವರ್ಷಗಳಲ್ಲಿ ೬೦ ಸಾವಿರ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾಗಿತ್ತು. ಇಷ್ಟು ಕೈಗಾರಿಕೆಗಳನ್ನು ಇವರು ಇಲ್ಲಿ ಸ್ಥಾಪನೆ ಮಾಡಿದ್ದಾರೆ ? ಅವರು ಕಳೆದ ೫ ವರ್ಷಗಳಲ್ಲಿ ಒಂದು ಸಾವಿರ ಕೈಗಾರಿಕೆಗಳನ್ನು ಸಹ ಸ್ಥಾಪನೆ ಮಾಡುವುದಕ್ಕೆ ಮನಸ್ಸು ಮಾಡಲಿಲ್ಲ. ಇವರು ಹೇಳಿದ ಪ್ರಕಾರ ಕಳೆದ ೫ ವರ್ಷಗಳಲ್ಲಿ ೬೦ ಸಾವಿರ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ನಮ್ಮ ನಿರುದ್ಯೋಗಿ ಯುವಕರು ಏನಿದ್ದಾರೆ, ವಿದ್ಯಾವಂತ ಮತ್ತು ಅವಿದ್ಯಾವಂತ ಯುವಕರು ಏನಿದ್ದಾರೆ ಅವರಿಗೆಲ್ಲಾ ಕೆಲಸವನ್ನು ಒದಗಿಸತಕ್ಕಂಥ ಸಾಹಸವನ್ನು ಇವರು ಮಾಡಬೇಕಾಗಿತ್ತು. ಆದರೆ ಇವರು ಹೇಳಿದಂತೆ ನಡೆದು ಕೊಳ್ಳಲಿಲ್ಲ. ಈ ರೀತಿ ವಾಗ್ದಾನ ಮಾಡಿ ಎಂದು ನಾವು ಯಾರು ಇವರನ್ನು ಕೇಳಿರಲಿಲ್ಲ. ಆದರೆ ಈ ಬಗ್ಗೆ ನೀವೇ ಜನತೆಗೆ ವಾಗ್ದಾನ ಮಾಡಿದ ಮೇಲೆ ಅದನ್ನು ನೀವು ನಡೆಸಬೇಕಾಗಿತ್ತು.

೬-೦೦ ಪಿ. ಎಂ.

ಈಗ ನೀವು ಇಂತಹ ವಾಗ್ದಾನ ಮಾಡಿಲ್ಲ ಎಂದು ಹೇಳಿದರೆ, ತಾವು ಏನೋ ಒಂದು ಹುಮ್ಮಸ್ಸಿನಲ್ಲಿದ್ದಾಗ ಏನನ್ನೋ ಮಾಡತಕ್ಕಂಥಾದ್ದು ಇರುತ್ತದೆ. ಆರಂಭ ಶೂರತ್ವ ಎಂದು ಸಂಸ್ಕೃತದಲ್ಲಿ ಹೇಳುತ್ತಾರೆ. ಆರಂಭ ಶೂರತ್ವದಲ್ಲಿ ತಮಗೆ ನಂಬಿಕೆ ಇದ್ದ ಹಾಗೆ ಕಾಣಿಸುತ್ತದೆ. ತಮಗೂ ನಂಬಿಕೆ, ತಮ್ಮ ಮುಖ್ಯ ಮಂತ್ರಿಗಳಿಗೂ ನಂಬಿಕೆ. ತಿಂಗಳಿಗೆ ಸಾವಿರ ಕೈಗಾರಿಕೆಗಳನ್ನು ಮಾಡುತ್ತೇವೆ ಎಂದು ಏನು ವಾಗ್ದಾನ ಮಾಡಿದ್ದರು, ಅದರಲ್ಲಿ ಎಷ್ಟು ಕಾರ್ಯಗತ ಮಾಡಿದ್ದಾರೆ. ಎನ್ನುವುದು ಈಗಿನ ಪ್ರಶ್ನೆ. ಮಾನ್ಯ ಬೊಮ್ಮಾಯಿಯವರು ಏನು ವಾಗ್ದಾನ ಮಾಡಿದ್ದಾರೆ ಅದನ್ನು ಇವತ್ತಿನವರೆಗೂ ಮಾಡಿಲ್ಲ. ಅದು ಹೋಗಲಿ, ಆದರೆ ಈಗ ಸಣ್ಣ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡುವಾಗ ಯಾರು ಯಾರಿಗೆ ಅನುಕೂಲವಾಗಬೇಕಾಗಿತ್ತು ಎನ್ನತಕ್ಕಂಥಾದ್ದು ಪ್ರಶ್ನೆ. ಯಾರು ಈ ದೇಶದಲ್ಲಿ ಸಂಪತ್ತು ಇಟ್ಟುಕೊಂಡಿದ್ದಾರೆ, ಹಣ ಇಟ್ಟುಕೊಂಡಿದ್ದಾರೆ, ಪ್ರಭಾವಶಾಲಿಗಳಾಗಿದ್ದಾರೆ, ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಳ್ಳುವುದಕ್ಕೆ ಅವರಿಗೆ ಸರ್ವಶಕ್ತಿ ಇದೆ. ಅಂತಹವರದ್ದು ಈ ಒಂದು ಸಣ್ಣ ಕೈಗಾರಿಕೆಯಲ್ಲೂ ಕೂಡ ಕೈವಾಡ ಇದೆ. ಕಾರಣ ಏನೆಂದರೆ, ನೀವು ಸಾಲ ಕೊಡುತ್ತೀರಿ, ಬ್ಯಾಂಕುಗಳಿಗೆ ಸರ್ಕಾರದಿಂದ ಗ್ಯಾರಂಟಿ ಕೊಡುತ್ತೀರಿ. ಅವರು ಒಂದು ಮಾಡಿದಮೇಲೆ ಎರಡು. ಮೂರು, ನಾಲ್ಕು, ಐದು, ಆರು — ಹೀಗೆ ಯಾರು ಭಾರಿ ಭಾರಿ ಉದ್ಯಮಕಿಗಳನ್ನು, ಕೈಗಾರಿಕೆಗಳನ್ನು ಈ ದೇಶದಲ್ಲಿ ಸ್ಥಾಪನೆ ಮಾಡಿದ್ದಾರೆ. ಅಂತಹವರ ಕೈಗೆ ಈ ಸಣ್ಣ ಕೈಗಾರಿಗಳೂ ಕೂಡ ಹೋಗಿವೆ. ಎಷ್ಟು ಜನ ಬಡವರಿಗೆ ನೀವು ಸಹಾಯ ಮಾಡಿದಿರಿ, ಎಷ್ಟು ಜನ ನಿಮ್ಮ ವರ್ಗದವರಿಗೆ ನೀವು ಸಹಾಯ ಮಾಡಿದ್ದೀರಿ ? ೫ ವರ್ಷಗಳಿಗೆ ೬೦ ಸಾವಿರ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾಗಿತ್ತಲ್ಲ, ಎಷ್ಟು ನಿಮ್ಮ ವರ್ಗದವರ ಸಲುವಾಗಿ ಮಾಡಿದ್ದೀರಿ, ನಾನು ಹೇಳುತ್ತೇನೆ, ೫ ಜನ ಸದಸ್ಯರಿಗೂ ಕೂಡ ನೀವು ಸಹಾಯ ಮಾಡಿಲ್ಲ. ಮುಸಲ್ಮಾನರಿಗೆ ಎಷ್ಟು ಮಾಡಿದ್ದೀರಿ. ಮುಸಲ್ಮಾನರು ಕೈಗಾರಿಕೆಯಲ್ಲಿ ತಜ್ಞರಿದ್ದಾರೆ, ಅವರು ಮಾಡುತ್ತಾ ಇದ್ದರೆ, ನೀವು ಹೊಸದಾಗಿ ವಾಗ್ದಾನ ಮಾಡಿದ ಮೇಲೆ ಮುಸಲ್ಮಾನರಿಗೆ ಎಷ್ಟು ಮಾಡಿದ್ದೀರಿ. ಹಿಂದುಳಿದ ವರ್ಗದವರು ಕೈಗಾರಿಕೆಗಳನ್ನು ಮಾಡಲಿಕ್ಕೆ ಎಷ್ಟು ಮುಂದೆ ಬಂದರು, ಅವರಿಗೆ ಉತ್ತೇಜನ ಏನು ಕೊಟ್ಟಿದ್ದೀರಿ ? ದೊಡ್ಡ ದೊಡ್ಡ ಅಧಿಕಾರಿಗಳು ಏನಿದ್ದಾರೆ, ಅವರು ಎಂಟರ್‌ಪ್ರಿನರ್ಸ್ ಇದ್ದಾರೆ, ಸಾಹಸಿಗಳು ಇದ್ದಾರೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲಿಕ್ಕೆ, ಅಂತಹವರ ಹತ್ತಿರ ಹೋಗಿ ಅವರಿಗೆ ಎನ್‌ಕರೇಜ್ ಮಾಡಿದರೇ ? ಎಸ್.ಐ.ಎಸ್.ಐ. ಎಂದು ಇಟ್ಟುಕೊಂಡಿದ್ದೀರಿ. ಅಧಿಕಾರಿಗಳು ಅಲ್ಲಿ ಕುಳಿತು ಜೀವನ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರೆಯೇ ಹೊರತಾಗಿ, ಇಂತಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡತಕ್ಕಂಥ ಸಾಹಸಿಗಳು ಏನಿದ್ದಾರೆ ಅವರ ಹತ್ತಿರ ಹೋಗಿ ಎಷ್ಟು ಜನ ಸ್ಥಾಪನೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ ? ಈ ಸಂದರ್ಭದಲ್ಲಿ ಒಬ್ಬರ ಹೆಸರನ್ನು ಹೇಳಬೇಕು ತಮಗೆ, ಕೆ. ನಂಜಪ್ಪನವರು ಎಂದು ಕೆ. ನಂಜಪ್ಪನವರು ಕೇಂದ್ರದಲ್ಲಿ ಈ ಸಣ್ಣ ಕೈಗಾರಿಕಾ ಅಭಿವೃದ್ಧಿ ಕಮಿಷನರಾಗಿದ್ದು ನಾನು ಅಲ್ಲಿ ಒಬ್ಬ ಸಲಹಾ ಸದಸ ನಾಗಿದ್ದೆ. ಇವತ್ತು ಅವರು ರಿಟೈರ್ ಆಗಿದ್ದಾರೆ ಅವರ ಹೆಸರು ಶಾಶ್ವತವಾಗಿ ಉಳಿದುಕೊಂಡಿದೆ ಪಂಜಾಬಿನಲ್ಲಿ ಹೋಗಲಿ, ಉತ್ತರ ಪ್ರದೇಶದಲ್ಲಿ ಹೋಗಲಿ, ಅಸ್ಸಾಂನಲ್ಲಿ ಹೋಗಲಿ, ಯಾವ ರಾಜ್ಯಕ್ಕೆ ಹೋದರೂ ಕೂಡ ಶ್ರೀಮಾನ್ ಕೆ. ನಂಜಪ್ಪನವರ ಹೆಸರು ಚಿರಸ್ಥಾಯಿಯಾಗಿದೆ. ಕಾರಣ ಎನೆಂದರೆ. ಯಾರ್ಯಾರು ಬಡವರಿದ್ದರು, ಯಾರಿಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಎಂಬ ಹುಮ್ಮಸು

ಇತ್ತು, ಅಂತಹವರಿಗೆ ಪ್ರೋತ್ಸಾಹ ಕೊಟ್ಟರು. ಅವರನ್ನು ಕರೆದುಕೊಂಡು ಬ್ಯಾಂಕುಗಳಿಗೆ ಹೋಗಿ ಸಾಲ ಕೊಡಿಸಿದರು. ಮಿಷಿನ್‌ಗಳು ಏನೇನು ಬೇಕಾಗಿತ್ತು ಅವನ್ನು ಕೊಡಿಸಿ, ಅವರಿಗೆ ವರ್ಕಿಂಗ್ ಕ್ಯಾಪಿಟಲ್ ಏನು ಬೇಕಾಗಿತ್ತು ಅದನ್ನು ಒದಗಿಸಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿಸಿದರು. ಪಂಜಾಬಿನಲ್ಲಿ ಈ ಕೈಗಾರಿಕೆಯಲ್ಲಿ ಶ್ರೇಷ್ಠತೆ, ಮೊದಲನೇ ದರ್ಜೆ ಕೀರ್ತಿಗಳಿಸಿದ್ದರೆ ಅದಕ್ಕೆ ಕಾರಣ ಶ್ರೀಮಾನ್ ಕೆ. ನಂಜಪ್ಪನವರು. ಹಾಗೆ ನೀವು ಅಂತಹ ಅಧಿಕಾರಿಗಳನ್ನು ಇಲ್ಲಿ ತಯಾರು ಮಾಡಬೇಕು. ಅಂತಹ ಅಧಿಕಾರಿಗಳು ಇಲ್ಲ ಅಂದರೆ ತಾವು ಅಂತಹವರನ್ನು ತಯಾರು ಮಾಡಬೇಕು. ನಾನು ೫ ವರ್ಷಗಳಿಂದ ತಮಗೆ ಹೇಳುತ್ತಾ ಬಂದಿದ್ದೇನೆ. ಈ ಐ. ಎ. ಎಸ್. ಆಫೀಸರ್ಸ್‌ನಿಂದ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಆಗುವುದಿಲ್ಲ. ಯಾರು ಪರಿಗಣಿತರಿದ್ದಾರ ಕೈಗಾರಿಕೆ ಸ್ಥಾಪನೆ ಮಾಡುವುದರಲ್ಲಿ ಬೆಳೆಸುವುದರಲ್ಲಿ, ಉತ್ತೇಜನ ಕೊಡುವುದರಲ್ಲಿ, ಬೆಂಬಲ ಕೊಡುವುದರಲ್ಲಿ ಯಾರಿದ್ದಾರೆ ಅಂತಹವರನ್ನು ತಮ್ಮ ಅಧಿಕಾರಿಗಳನ್ನಾಗಿ ಮಾಡಿಕೊಂಡರೆ ಈ ದೇಶದಲ್ಲಿ ಕೈಗಾರಿಕಾ ಅಭಿವೃದ್ಧಿ ಸಾಧ್ಯವೇ ಹೊರತಾಗಿ ನೀವು ಎಲ್ಲದಕ್ಕೂ ಅವರನ್ನು ಮಾಡಿದರೆ ಆಗುವುದಿಲ್ಲ. ದನ ಕಾಯುವುದಕ್ಕೂ ಕೂಡ ಐ ಎ ಎಸ್. ಆಫೀಸರ್ಸೇ, ಈಗ ಅನಿಮಲ್ ಹಸ್ಬೆಂಡರಿಗೂ ಅವರೇ, ಆಮೇಲೆ ಹಾಲು ಕರೆಯುವುದಕ್ಕೂ ಐ. ಎ. ಎಸ್. ಆಫೀಸರ್ಸೇ. ಹೀಗೆ ಮಾಡಿದರೆ ನೀವು ಯಾವರೀತಿಯಾಗಿ ದೇಶದ ಅಭಿವೃದ್ಧಿ ಮಾಡುತ್ತೀರಿ: ಭದ್ರಾವತಿಯಲ್ಲಿ ಐರನ್ ಅಂಡ್ ಸ್ಟೀಲ್ ಫ್ಯಾಕ್ಟರಿ ಇದೆ, ಆ ಐರನ್ ಅಂಡ್ ಸ್ಟೀಲ್ ಫ್ಯಾಕ್ಟರಿ ನೆಲಕ್ಕೆ ಹೋಗುವವರೆಗೂ ಐ. ಎ. ಎಸ್. ಆಫೀಸರ್ಸ್‌ನ್ನು ನೇಮಕ ಮಾಡ ತಕ್ಕಂಥದ್ದನ್ನು ಬಿಟ್ಟಿಲ್ಲ. ಎಲ್ಲಿಯವರೆಗೆ ನೇಮಕ ಮಾಡುತ್ತೀರಿ ? ದಯಮಾಡಿ ಹೇಳಿ. ಯಾವ ಯಾವ ಕೈಗಾರಿಕೆಗಳು ಲುಕ್ಸಾನು ಮಾಡಿವೆ, ಯಾವ ಯಾವ ಕಾರ್ಖಾನೆಗಳು ಲಾಭ ಮಾಡಿವೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಯಾವ ಯಾವ ಕಾರ್ಖಾನೆ ಲುಕ್ಸಾನು ಮಾಡಿದೆ ಆ ಕಾರ್ಖಾನೆಗಳಲ್ಲಿ ಅವರಿಗೇ ಜವಾಬ್ದಾರಿ ವಹಿಸಬೇಕು. You must tell them that you are respono sible for running the factory profitably and not on a loss basis. ಇಂಥ ಒಂದು ಪರಿಸ್ಥಿತಿಯಲ್ಲಿ ಸರಿಯಾದ ನಿರ್ದೇಶನ ಇಲ್ಲದಿದ್ದರೆ, ಸರಿಯಾದ ಒಂದು ಗುರಿ ಇಲ್ಲದಿದ್ದರೆ, ಧ್ಯೇಯಧೋರಣೆಯ ಪರಿಜ್ಞಾನ ಇಲ್ಲದಿದ್ದರೆ ನೀವು ಈ ಕೈಗಾರಿಕೆಗಳನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಳೆಸುವುದಕ್ಕೆ ಸಾಧ್ಯವೇ ಇಲ್ಲ. ಬ್ಯೂರೋ ಆಫ್ ಎಂಟರ್‌ಪ್ರೈಸಸ್‌ನವರು ಒಂದು ವರದಿಯನ್ನು ಏನು ಕೊಟ್ಟಿದ್ದಾರೆ, ಅದರಲ್ಲಿ ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಯಾವ ಫ್ಯಾಕ್ಟರಿಯಲ್ಲಿ ಎಲ್ಲಾ ಒಟ್ಟು ಸುಮಾರು ೪೦೦೦ ಕೋಟಿ ರೂಪಾಯಿಗಳನ್ನು ಇಲ್ಲಿ ಬಂಡವಾಳವಾಗಿ ಹಾಕಿ ಪ್ರತಿವರ್ಷ ೩೮೦ ಕೋಟಿ ರೂಪಾಯಿಗಳಂತೆ ಲುಕ್ಸಾನನ್ನು ಮುಂದುವರಿಸುತ್ತಿದ್ದೀರಿ. ಈ ರೀತಿ ಮಾಡುತ್ತಾ ಹೋದರೆ ನಮ್ಮ ರಾಜ್ಯ ಇನ್ನು ಯಾವರೀತಿ ಉದ್ಧಾರವಾಗುತ್ತದೆ ? ಯಾವ ಕೈಗಾರಿಕೆಗಳು ಉದ್ಧಾರವಾಗುತ್ತವೆ ? ಇದನ್ನು ತಾವು ದಯವಿಟ್ಟು ಹೇಳಬೇಕು In Comptroller and Auditor General (Commercial) report for 1985–86. ಪೇಜ್ ೭೨ ರಲ್ಲಿ ಸುಮಾರು ೫೫ ಕೈಗಾರಿಕೆಗಳ ಬಗ್ಗೆ ಅವರು ವರದಿಯನ್ನು ಕಳುಹಿಸಿದ್ದಾರೆ. ಇದರಲ್ಲಿ ಜಾಸ್ತಿ ಲುಕ್ಸಾನು ಎಲ್ಲಿ ಮಾಡಿದ್ದಾರೆ, ಈ ರೀತಿ ಲುಕ್ಸಾನಾಗುವುದಕ್ಕೆ ಅವಕಾಶವನ್ನು ಈ ಸರ್ಕಾರದವರು ಮಾಡಿ ಕೊಟ್ಟಿದ್ದಾರೆ. ಅದರಲ್ಲಿ ಕೆಲವನ್ನು ಮಾತ್ರ ನಾನು ಓದುತ್ತೇನೆ.

Karnataka Agro Industries Corporation Rs. 12·32 crores,
Mysore Tobacco Co., Ltd., Rs. 3.89 crores,

Karnataka State Forest Industries Corporation Rs. 1.72 crores,
Chamundi Machine Tools Ltd., Rs. 1.01 crores,

Karnataka Implements and Machinary Co., Ltd., Rs·8·73 crores,

Karnataka Leather Industries Development Corporation Rs· 0.33 crores,

Karnataka Silk Industries Corporation Ltd., Rs· 5.312 crores,

Karnataka Soaps and Detergents Ltd., Rs. 15·55 crores

Karnataka State Handicrafts Development Corporation Rs. 56 crores,

Karnataka Vidyuth Karkhane Rs. 3.41 crores,

Karnataka Handloom Development Corporation Rs. 0.44 crores,
Mysore Chorme Tanning Company Ltd......

ಶ್ರೀ ಜೆ. ಹೆಚ್. ಪಟೇಲ್.— ಆ ಪಟ್ಟಿಯಲ್ಲಿರುವುದನ್ನೆಲ್ಲಾ ಓದಬೇಕಾದರೆ ೨ ಗಂಟೆ ಆಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ — ೨ ಗಂಟೆ ಏನೂ ಬೇಕಾಗಿಲ್ಲ. ಎಲ್ಲಾ ಮುಗಿದೆ ಹೋಯಿತು.

ಮಾನ್ಯ ಅಧ್ಯಕ್ಷರೇ, ನಾನು ತಮಗೆ ಹೇಳುತ್ತಿದ್ದೇನೆ, ಈ ಕಾರ್ಖಾನೆಗಳು ಏನಿವೆ, ಇವುಗಳನ್ನು ಲಾಭದಾಯಕವಾಗಿ ನಡೆಸುವುದಕ್ಕೆ ಇವರು ಏನು ವ್ಯವಸ್ಥೆ ಮಾಡಿದ್ದಾರೆ ? ಕಳೆದ ೫ ವರ್ಷಗಳಿಂದ ನೀವು ಇದೇ ಮಾತನಾಡುತ್ತಿದ್ದೀರಿ.ನಾಳೆಯುಉತ್ತರವನ್ನು ಕೊಡುವಾಗ ಇದನ್ನೇ ಮಾತನಾಡುತ್ತೀರಿ. ನಾವು ಲುಕ್ಸಾನಾಗಿದೆ ಎಂದರೆ ಏನು ಮಾಡುವುದು, ಲುಕ್ಸಾನಾಗಿದೆ ಎಂದು ಹೇಳುತ್ತೀರಿ. ಲಾಭವಾಗಿದೆ ಎಂದರೆ, ಏನು ಮಾಡುವುದು ಲಾಭವಾಗಿದೆ ಎಂದು ಹೇಳುತ್ತೀರಿ, ಈ ಕಾರ್ಖಾನೆಗಳು ಮುಚ್ಚಿವೆ ಎಂದರೆ, ಏನು ಮಾಡುವುದು ಮುಚ್ಚಿವೆ ಎಂದು ಹೇಳುತ್ತೀರಿ. ಕಾರ್ಮಿಕರೆಲ್ಲಾ ಮನೆಗೆ ಹೋದರು, ಅವರು ಉಪವಾಸ ಇದ್ದಾರೆ ಎಂದರೆ, ಏನು ಮಾಡುವುದು ಅವರು ಉಪವಾಸ ಇದ್ದಾರೆ ಎಂದು ಹೇಳುತ್ತೀರಿ. ನಾನು ತಮ್ಮನ್ನು ಕೇಳುತ್ತೇನೆ, ಈ ನಿಮ್ಮ ಧೋರಣೆ ಸರಿಯೋ ? ತಮಗೆ ಶಕ್ತಿ ಇಲ್ಲವೆಂದು ನಾನು ಹೇಳುತ್ತಿಲ್ಲ. ನಿಮಗೆ ಶಕ್ತಿ ಇದ್ದರೂ ಕೂಡ ಅವನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ನೀವು ಯಾರ ಕೈಯಲ್ಲಿ ಜವಾಬ್ದಾರಿಯನ್ನು ಕೊಟ್ಟಿದ್ದೀರಿ, ಆ ಅಧಿಕಾರಿಗಳಿಂದ ಕೆಲಸವನ್ನು ವ್ಯವಸ್ಥಿತವಾಗಿ ತೆಗೆದುಕೊಳ್ಳುವುದಕ್ಕೆ ನೀವು ಮನಸ್ಸು ಮಾಡಿಲ್ಲ ಅಥವಾ ನಿಮ್ಮ ಕೈಯಲ್ಲಿ ಆಗಿಲ್ಲ. ನೀವು ಎಲ್ಲ ಕಾರ್ಖಾನೆಗಳನ್ನೂ ಈ ರೀತಿ ಲುಕ್ಸಾನ್‌ನಲ್ಲಿ ನಡೆಸುವುದಾದರೆ ನಿಮ್ಮ ಅಧಿಕಾರಿಗಳು ಏತಕ್ಕೆ ಬೇಕು ? ಆ ಕಾರ್ಮಿಕರು ಏತಕ್ಕೆ ಬೇಕು ? ಕೆಲವು ದೊಡ್ಡ ದೊಡ್ಡ ಮಾರ್ವಾಡಿಗಳು ಸಿಂಧಿಗಳು ನಮ್ಮ ರಾಜ್ಯಕ್ಕೆ ಬೊಂಬಾಯಿಯಿಂದ ಬರುತ್ತಿದ್ದಾರೆ. ಅವರು ಗಿಣಿ ಮಾತನಾಡಿದಂತೆ ಮಾತನಾಡುತ್ತಾರೆ, ಅವರ ಹೆಣ್ಣು ಮಕ್ಕಳು ನೋಡುವುದಕ್ಕೆ ಬಹಳ ಚೆಂದವಾಗಿ ಕಾಣುತ್ತಾರೆ, ಚೆಂದವಾಗಿ ಮಾತನಾಡುತ್ತಾರೆ. ಆ ಮಾರ್ವಾಡಿಗಳು ತಮ್ಮ ಜೊತೆ ಹೆಣ್ಣು ಮಕ್ಕಳನ್ನೂ ಕರೆದುಕೊಂಡು ಬರುತ್ತಾರೆ.

ನಮಗೆ ಏನಾಗಿ ಬಿಟ್ಟಿದೆ ಎಂದರೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಅದರಲ್ಲೂ ರಾಜಕೀಯದಲ್ಲಿರತಕ್ಕಂಥವರು ಅಂತ ಹೆಣ್ಣುಮಕ್ಕಳನ್ನು ನೋಡಿದಕ್ಷಣ ಬಾಯಿ ಬಿಡುತ್ತಾರೆ. ಏನು ಬೇಕಾದರೂ ಮಾಡುವುದಕ್ಕೆ ಪ್ರಯತ್ನ ಮಾಡಿದ ನೆನಪುಗಳು ನನಗೆ ಇದಾವೆ. ಆದರೆ ನೀವು ಏನು ಮಾಡುತ್ತೀರೊ, ನಿಮ್ಮ ಅಧಿಕಾರಿಗಳು ಏನು ಮಾಡುತ್ತಾರೋ ಗೊತ್ತಿಲ್ಲ. ಹೀಗೆ ಕಾರ್ಖಾನೆಗಳನ್ನು ಸರಿಯಾಗಿ ನಡೆಸುತ್ತೀರೋ, ಇಲ್ಲವಾದರೆ ನಿಮಗೆ ಮನಸಿದ್ದ ಹಾಗೆ ನಡೆಸಬೇಕೆಂದು ಹೇಳುತ್ತೀರಾ? ನೀವು ನಡೆಸುವಾಗ ಯಾರು ಯಾರಿಗೆ ಅನುಕೂಲವಾಗಬೇಕು ಎನ್ನುವುದನ್ನು ಸರಿಯಾಗಿ ನೋಡಿ ನಡೆಸಿದರೆ ದೇಶದ ಸಂಪತ್ತು ಉಪಯೋಗವಾಗುತ್ತದೆ, ಅದು ಬಿಟ್ಟು ದೇಶದಲ್ಲಿರತಕ್ಕಂಥ ಕಾರ್ಖಾನೆಗಳಿಂದ ವರ್ಷೇವರ್ಷೇ ೧೨೭ ಕೋಟಿ ರೂಪಾಯಿಗಳನ್ನು ಲುಕ್ಸಾನು ಮಾಕೊಂಡೇ ಹೋದರೆ ಬಂಡವಾಳ ಎಲ್ಲಿಂದ ತರುವುದು? ಮುಂದೆ ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಬಸವಲಿಂಗಪ್ಪನವರು ಹೊರಗಿನಿಂದ ಬಂದವರು ಗಿಣಿಯಂತೆ ಮಾತನಾಡುತ್ತಾರೆ, ಗಿಣಿಯಂತೆ ಮಾತನಾಡುವವರಿಗೆ ಇವರು ಬಾಯಿ ಬಿಡುತ್ತಾರೆಂದು ಹೇಳಿದರು. ಅಂಥ ಜನರಿಗೆ ಯಾವುದಾದರೂ ಒಂದು ಕಾರ್ಖಾನೆಯನ್ನು ಕೊಟ್ಟಿರುವುದನ್ನು ಹೆಸರು ಹೇಳಲಿ.

ಶ್ರೀ ಬಿ, ಬಸವಲಿಂಗಪ್ಪ.—ಶ್ರೀಮಾನ್ ಪಾಟೀಲರು ಈ ಪ್ರಶ್ನೆಯನ್ನು ಕೇಳುತ್ತಾರೆಂದೇ ಅವರ ಕೈಗೆ ಸಿಕ್ಕಿ ಹಾಕಿಕೊಳ್ಳಬಾರದೆಂದು, ಅಂಥ ಜನರನ್ನು ನೋಡಿದ್ದೇನೆ. ಅಂಥ ಜನ ಬಂದರೆ ಬಾಯಿ ಬಿಡತಕ್ಕಂಥ ಜನರನ್ನು ನೋಡಿದ್ದೇನೆಂದು ಹೇಳಿದೆ. ನೀವು ಬಾಯಿಬಿಟ್ಟಿದ್ದೀರಾ? ತಾವು ಹೇಳಬೇಕು. ನೀವು ಬಾಯಿ ಬಿಟ್ಟಿಲ್ಲ. ತಮಗೆ ಈ ನನ್ನ ಮಾತು ಸಭೆಗೆ ಅನ್ವಯಿಸಿದರೆ ಅದು ಅನ್ವಯವಾಗಲಿ, ಅನ್ವಯಿಸದಿದ್ದರೆ ಬೇಡ. ತಾವು ಸತ್ಯವಾದಿಗಳಾಗಿದ್ದರೆ ನಿರ್ಭಯದಿಂದ ಧರ್ಮದಿಂದ ದೇಶದ ಹಿತ

ದೃಷ್ಟಿಯಿಂದ ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಿದ್ದರೆ ಇಷ್ಟು ೧೨೭ ಕೋಟಿ ರೂಪಾಯಿಗಳನ್ನು ಲುಕ್ಸಾನು ಮಾಡಲಿಕ್ಕೆ ನಾನೇ ಕಾರಣ ಎಂದು ಹೇಳತಕ್ಕಂಥ ಶ್ರದ್ಧಾ ಭಕ್ತಿ ಇರಬೇಕಲ್ಲ ಇಷ್ಟು ಲುಕ್ಸಾನು ಆಗಬೇಕಾದರೆಲ ಶ್ರದ್ಧಾ ಭಕ್ತಿ ಇರಲೇಬೇಕು. ಶ್ರದ್ಧಾ ಭಕ್ತಿಯನ್ನು ತಾವು ಮುಂದುವರಿಸಬಾರದು. ತಾವು ಎಲ್ಲಿಯವರೆಗೆ ಈ ಖಾತೆಯ ಮಂತ್ರಿಗಳಾಗಿ ಇರುತ್ತೀರಿ ಅಲ್ಲಿಯವರೆಗೂ ಕೂಡ ಈ ರೀತಿ ಲುಕ್ಸಾನನ್ನು ಮುಂದುವರಿಸಲು ಹೋಗಬೇಡಿ. ಲುಕ್ಸಾನು ಏತಕ್ಕೆ ಆಗುತ್ತದೆಂದರೆ, ಅಧಿಕಾರಿಗಳು ಇರುತ್ತಾರೆ, ಸಾರ್ವಜನಿಕರ ಹಣ ಎಷ್ಟಾದರೂ ದುರುಪಯೋಗ ಮಾಡಬಹುದು ಎನ್ನುವ ಅಧಿಕಾರಿಗಳು ಇದ್ದಾರೆ. ಅಂಥ ಅಧಿಕಾರಿಗಳಿಂದ ಲುಕ್ಸಾನಾಗುತ್ತಿದೆ. ಆದ್ದರಿಂದ ಅಂಥ ಅಧಿಕಾರಿಗಳನ್ನು ಗುರುತಿಸಿ ಅವರಿಗೆ ಶಿಕ್ಷೆಯನ್ನು ಕೊಡಬೇಕು. ಮತ್ತೆ ಯಾರು ಅರ್ಹರಿದ್ದಾರೆ, ಲುಕ್ಸಾನಾಗದಂತೆ ನೋಡಿಕೊಳ್ಳತಕ್ಕಂಥ ಅಧಿಕಾರಿಗಳು ಇದ್ದಾರೆ, ಅಂಥವರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲಾದರೂ ಸರಿ, ಅಪಾಯಿಂಟ್ ಮಾಡಿ. ಅಮೇರಿಕಾದಲ್ಲಿ ಈ ರೀತಿ ಮಾಡುತ್ತಾರೆ. ಒಂದೊಂದು ಇಲಾಖೆಯಲ್ಲಿ ಯಾರೂ ದಕ್ಷರಿರುತ್ತಾರೆ, ಅಂಥ ಅಧಿಕಾರಿಗಳನ್ನು ಕರೆದುಕೊಂಡು ಕಾಂಟ್ರಾಕ್ಟ್ ಬೇಸಿಸ್ ಮೇಲಾದರೂ ಅಪಾಯಿಂಟ್ ಮಾಡಿ ಇಂಪ್ರೂವ್ ಮಾಡಿ. ಐ.ಎ.ಎಸ್. ಆಫೀಸರ್‌ಗಳು ನನಗೆ ಚೆನ್ನಾಗಿ ಗೊತ್ತು. ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ ನೋಡಿದ್ದೇನೆ. ತಮಗೆ ಕಿವಿ ಮಾತನ್ನು ಹೇಳುತ್ತೇನೆ, ಬಹಳ ಜನ ಡೆಪ್ಯುಟಿ ಕಮೀಷನರ್‌ರನ್ನು, ಡಿವಿಜನಲ್ ಕಮೀಷನರ್‌ರವರನ್ನು ನಾವೇ ಅಪಾಯಿಂಟ್ ಮಾಡುತ್ತೇವೆ. ನಾವು ಏನು ಕಾನೂನನ್ನು ಮಾಡುತ್ತೇವೆ, ಆ ಕಾನೂನುಗಳು ಎಷ್ಟಿದೆ ಎನ್ನುವುದೇ ಅವರಿಗೆ ಗೊತ್ತಿರುವುದಿಲ್ಲ. ಕಾನೂನನ್ನು ಇಟ್ಟುಕೊಂಡು ಓದುವುದಿಲ್ಲ. ಅವರ ಹತ್ತಿರ ಪುಸ್ತಕವೇ ಇರುವುದಿಲ್ಲ. ಇಂಥದ್ದಕ್ಕೆ ನೀವು ಸ್ಪೆಷಲೈಸ್ಡ್ ಸೆಕ್ಟರ್ ಆಫ್ ಪ್ರೊಡಕ್ಷನ್ ಎಂದು ಮಾಡಿಕೊಂಡಿರುತ್ತೀರಲ್ಲ. ಅದಕ್ಕೆ ನೇಮಿಸುವಾಗ ಅವರ ಯೋಗ್ಯತೆ, ದಕ್ಷತೆಯನ್ನು ತೂಕ ಮಾಡಿ ಹಾಕಬೇಕು ನೀವು ಹೇಳಬೇಕು, ಯಾವ ಅಧಿಕಾರಿ ಕಾರ್ಖಾನೆಯಲ್ಲಿ ಲುಕ್ಸಾನು ಮಾಡುತ್ತಾನೆ ಅಂಥವರನ್ನು ಮನೆಗೆ ಕಳುಹಿಸುತ್ತೇವೆಂದು ಯಾರು ಸರ್ಕಾರದ ಖರ್ಚಿನಲ್ಲಿ ಫಾರಿನ್‌ಗೆ ಹೋಗುತ್ತಾರೆ. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡುತ್ತಾರೆ ಅಂಥವರಿಗೆ ಏನು ಖರ್ಚು ಮಾಡಿರುತ್ತಾರೆ ಅವರಿಂದ ಏನು ಲಾಭವಾಗಿದೆ ಎನ್ನುವುದನ್ನು ಪರೀಕ್ಷೆ ಮಾಡಬೇಕು. ಹೋದವರು ಹೋದರು ಬಂದವರು ಬಂದರು ಎನ್ನುವಂತಿರಬಾರದು. ಕೆಲವೊಂದು ಅಧಿಕಾರಿಗಳು ಕರ್ನಾಟಕ ರಾಜ್ಯದಲ್ಲಿರುತ್ತಾರೆ. ಸುಮಾರು ೧೫ ಸಾರಿ ಫಾರಿನ್‌ಗೆ ಹೋಗಿ ಬಂದಿರುತ್ತಾರೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಪಿ.ಎ.ಸಿ. ಯಲ್ಲಿ ಅದನ್ನು ತಂದು ತೋರಿಸಿದ್ದೇವೆ. ಹೀಗೆ ಮಾಡಿದರೆ ಕಾರ್ಖಾನೆ ಹೀಗೆ ಉದ್ಧಾರವಾಗುತ್ತದೆ. ನಮ್ಮ ಜನರು ಹೇಗೆ ಉದ್ಧಾರವಾಗುತ್ತಾರೆ. ನಮ್ಮ ರಾಜ್ಯದ ಸಂಪತ್ತು ಹೇಗೆ ಉದ್ಧಾರವಾಗುತ್ತದೆ. ಆದ್ದರಿಂದ ತಾವು ಇನ್ನಾದರೂ ಕೂಡ ಇದರ ಕಡೆಗೆ ಕೊಡಬೇಕು. ಯಾವಯಾವ ಕಾರ್ಖಾನೆಗಳು ಹೇಗೇಗೆ ಇವೆ ಎಂದು ಹೇಳುವುದಕ್ಕೆ ಈಗ ಸಮಯ ಇಲ್ಲವಾದ್ದರಿಂದ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ತಾವು ಹೇಗೆ ಈ ಕಾರ್ಖಾನೆಗಳನ್ನು ನಡೆಸಿದರೆ ಸಂಪತ್ತನ್ನು ಅಭಿವೃದ್ಧಿ ಮಾಡಬಹುದು ಜನರಿಗೆ ಹೆಚ್ಚಿಗೆ ನೌಕರಿ ಕೊಡಬಹುದು, ಹೆಚ್ಚು ಜನರಿಗೆ ಅನುಕೂಲ ಮಾಡಿಕೊಡಬಹುದೆಂಬುದನ್ನು ಯೋಚಿಸಬೇಕು. ಹಿಂದೆ ಬಿದ್ದಿರತಕ್ಕ ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ ಮತ್ತು ವರ್ಗದವರು ಏನಿದ್ದಾರೆ ಅವರಿಗೆ ಹೆಚ್ಚಿಗೆ ರಿಯಾಯಿತಿ ಕೊಟ್ಟು ಕಾರ್ಖಾನೆಗಳಲ್ಲಿನ ಆಸಕ್ತಿ ವಹಿಸುವಂತೆ ಮಾಡಬೇಕು. ಮಾನ್ಯ ಪಟೇಲರಿಗೆ ಹೇಳುತ್ತೇನೆ, ಯಾರೋ ಒಬ್ಬ ಪರಿಶಿಷ್ಟ ಜಾತಿಯವನು ಕಾರ್ಖಾನೆಯನ್ನು ಪ್ರಾರಂಭ ಮಾಡಿದ, ಅದು ನಡೆಯುತ್ತಾ ಬಂತು. ಆಗ ಎಲ್ಲರಿಗೂ ಅನ್ವಯಿಸುವಂತೆ ಕಾನೂನನ್ನು ಅನ್ವಯಿಸಿ ಅವನು ಸಹ ಕಾರ್ಖಾನೆಯನ್ನು ಮುಚ್ಚುವಂತೆ ಮಾಡಿದರು. ಅಸಲು, ಬಡ್ಡಿ ಇವುಗಳ ವಸೂಲಿಗೆ ಒಂದು ಕಾರ್ಖಾನೆಯನ್ನು ಮುಚ್ಚುವಂತೆ ಆಯಿತು. ಪಟೇಲರು ಸಹಾಯ ಮಾಡಿದರು ಅದು ಬೇರೆ ವಿಚಾರ. ಯಾರು ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ ಮತ್ತು ವರ್ಗದವರು ಇದ್ದಾರೆ ಅಂಥವರು ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ನೀವು ೧೦೦ ಪರ್ಸೆಂಟ್ ಎನ್‌ಕರೇಜ್ ಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರಿಗೆ ಗೊತ್ತಿದೆ, ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ನಾವು ಕೊಡುವ ಇನ್‌ಸೆಂಟೀವ್ಸ್ ಅಂಡ್ ಕನ್‌ಸೆಷನ್ಸ್ ಏನಿದೆ. ಅದನ್ನು ಇಂಡಸ್ಟ್ರಿ ಸಿಕ್ ಇದ್ದರೆ ಅದನ್ನು ರಿವೈವ್ ಮಾಡುವುದಕ್ಕೆ ನಾವು ಕೆಲವು ನಿಯಮಗಳನ್ನು ಅನುಸರಿಸುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಈ ಬಗ್ಗೆ ನೀವು ನಾಳೆ ಅಂಕಿ ಅಂಶಗಳನ್ನು ಕೊಡಿ. ಇಂಥ ಎಷ್ಟು ಜನರಿಗೆ ಉತ್ತೇಜನ ಕೊಟ್ಟಿದ್ದೀರಿ, ಬೆಂಬಲ ಕೊಟ್ಟಿದ್ದೀರಿ? ಎಷ್ಟು ಜನ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಅವರಿಗೆ ವರ್ಕಿಂಗ್ ಕ್ಯಾಪಿಟಲ್ ಇದೆಯೋ ಇಲ್ಲವೆ? ಬ್ಯಾಂಕಿನ ಸೌಲಭ್ಯ ಮಾಡಿ ಕೊಟ್ಟಿದ್ದೀರಾ? ಇವೆಲ್ಲ ವಿವರಗಳನ್ನು ನೀವು ನಾಳೆ ಉತ್ತರ ಕೊಡುವಾಗ ಕೊಡಿ. ಸಾಹುಕಾರರು ಏನಿದ್ದಾರೆ ಅಂಥವರನ್ನು ಜಾಸ್ತಿ ಸಾಹುಕಾರರನ್ನು ಮಾಡುವುದಕ್ಕೆ ಎಲ್ಲಾ ಪ್ರೋತ್ಸಾಹ ಇದೆ. ಎಂತಹ ಸರ್ಕಾರ ಅಧಿಕಾರಕ್ಕೆ ಬರಲಿ, ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲಿ ಅವರೆಲ್ಲ ಸಾಹುಕಾರರಿಗೆ, ದೊಡ್ಡ ದೊಡ್ಡ ಹಣವಂತರಿಗೆ ಬೆಂಬಲ ಕೊಡತಕ್ಕವರೇ ಆಗಿದ್ದಾರೆ. ಬಡವರ ಕಡೆ ಬೆಂಬಲ ಕಡಿಮೆ. ನೀವು ಸಮಾಜವಾದಿಗಳಲ್ಲವೆ? ಕೈಗಾರಿಕೆ ಇಲಾಖೆಯನ್ನು ಇಟ್ಟುಕೊಂಡಿರುವಾಗ ಸಮಾಜವಾದವನ್ನು ಅದರಲ್ಲಿ ತೋರಿಸಿ. ಯಾರು ಬಲಹೀನರಿದ್ದಾನೆ ಅವನನ್ನು ಬಲವಂತನನ್ನಾಗಿ ಮಾಡುವ ಕಾರ್ಯಕ್ರಮ ವನ್ನು ಇಟ್ಟುಕೊಂಡು ಹಿಂದಿನ ವರ್ಷಗಳಲ್ಲಿ ಏನು ೧೨೭ ಕೋಟಿ ರೂಪಾಯಿಗಳ ಲುಕ್ಸಾನು ಮಾಡಿದ್ದೀರಿ ಅದನ್ನೆಲ್ಲ ಭರಿಸಿ ಲಾಭದಾಯಕವಾಗಿ ಕೈಗಾರಿಕೆ ಇಲಾಖೆಯನ್ನು ನಡೆಸಿಕೊಂಡು ಹೋಗಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ನಾಳೆ ಮಂತ್ರಿಗಳಿಂದ ಉತ್ತರ. ಸಭೆಯನ್ನು ನಾಳೆ ಬೆಳಗ್ಗೆ ೯ಕ್ಕೆ ಮುಂದೂಡಲಾಗಿದೆ.

ಸದನವು ಸಂಜೆ ೬ ಗಂಟೆ ೧೮ ನಿಮಿಷಕ್ಕೆ ಮುಕ್ತಾಯವಾಗಿ ೩ನೇ ಜೂನ್ ೧೯೮೮ರ ಶುಕ್ರವಾರ ಬೆಳಿಗ್ಗೆ ೯ ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು.)